ಜುಲ್ಯಾ 2012 ಬೆಲೆ: 15/-

ಸುಂದರ ನಾಳೆಗೆ ಸುಮಧುರ ಬಾಳಿಗೆ

ಅನುಪಮ

ANUPAMA WOMEN'S MONTHLY ಮಹಿಳಾ ಮಾಸಿಕ

ಶಾಲೆಯತ್ತ ಸುರಕ್ಷಿತ ಪಯಣ ಸಾಧ್ಯವೇ?

ಅಮ್ಮಾ, ನಾನು ಕದ್ದಿಲ್ಲ...

ರಸ್ತೆಯಲ್ಲಿ ರಕ್ತದೋಕುಳಿಯಾಗುವಾಗ...

UNITY
Health Complex
expect life

Estd : 1978

9001:2008

ಕುತ್ತಿಗೆನೋವು, ಕೆಳ ಬೆನ್ನು ನೋವು, ನಿಮ್ಮ ತೋಳು ಅಥವಾ ಕಾಲಿನಲ್ಲಿ ನೋವು ಹರಡುವುದು,
ನಿಶ್ಯಕ್ತಿ/ನಿಶ್ಚೇಷ್ಟತೆ ಅಥವಾ ಇನ್ನಿತರ ಬೆನ್ನುಹುರಿಯ ತೊಂದರೆಯಿಂದ ನೀವು ಬಳಲುತ್ತಿದ್ದೀರಾ?

ಉಚಿತ ಬೆನ್ನುಮೂಳೆ ಶಿಬಿರ:

18-30 ಜೂನ್ 2012

ಬೆಳಗ್ಗೆ 9.30ರಿಂದ ಸಂಜೆ 5.00 ಗಂಟೆಯ ತನಕ (ರವಿವಾರ ಹೊರತುಪಡಿಸಿ)

- ಉಚಿತ ಕನ್ಸಲ್ಟೇಶನ್/ ಎಕ್ಸ್-ರೇ
- ಬೆನ್ನುಮೂಳೆಯ ಎಂಆರ್‌ಐ ಸ್ಕ್ಯಾನ್/ಅಗತ್ಯವಿದ್ದಲ್ಲಿ ನಿರ್ವಹಣೆ, ರಿಯಾಯಿತಿ ದರದಲ್ಲಿ

ಕನ್ಸಲ್ಟೇಶನ್:

ಡಾ.ಕೆ.ವಿ. ದೇವಾಡಿಗ ಎಂ.ಸಿಎಚ್ (ನ್ಯೂರೋಸರ್ಜರಿ)- ಕನ್ಸಲ್ಟೆಂಟ್ ನ್ಯೂರೋಸರ್ಜನ್

ಡಾ.ಕಿಶೋರ್ ಶೆಟ್ಟಿ ಜಿ. ಡಿಎನ್‌ಬಿ ನ್ಯೂರೋಸರ್ಜರಿ-ಕನ್ಸಲ್ಟೆಂಟ್ ನ್ಯೂರೋಸರ್ಜನ್

ಪ್ರದೇಶದಲ್ಲಿಯೇ ಮೊದಲ ಬಾರಿಗೆ ಪರಿಚಯಿಸಲಾಗುತ್ತಿದೆ:

ಓಝೋನ್ ಥೆರಪಿ ಡಿಸ್ಕ್ ರೋಗಕ್ಕೆ

ಸುರಕ್ಷಿತ, ಪರಿಣಾಮಕಾರಿ (ಓಪನ್ ಸರ್ಜರಿಗೆ ತತ್ಸಮಾನವಾದ ಫಲಿತಾಂಶ)
ಡಿಸ್ಕ್ ರೋಗಕ್ಕೆ ಮಿತವ್ಯಯದ, ಹೊರರೋಗಿ ಆಧಾರಿತ ಚಿಕಿತ್ಸಾ ವಿಧಾನ

ಬೆನ್ನುಮೂಳೆಯ ನಿರ್ವಹಣೆಯ ವಿಧಗಳು:

- ಕ್ಯಾನಿಯೋವರ್ಟೆಬ್ರಲ್ ಜಂಕ್ಷನ್ ಸರ್ಜರಿ
- ಆ್ಯಂಟಿರಿಯರ್ ಸೆರ್ವಿಕಲ್ ಡಿಸೆಕ್ಟೊಮಿ
- ಲ್ಯಾಮಿನೆಕ್ಟೊಮಿ ಆ್ಯಂಡ್ ಲ್ಯಾಮಿನೊಪ್ಲಾಸ್ಟಿ
- ಮೈಕ್ರೊ ಡೈಸೆಕ್ಟೊಮಿ/ ಕಿ ಹೋಲ್ ಡಿಸ್ಕ್ ಸರ್ಜರಿ
- ವರ್ಟೆಬ್ರೊಪ್ಲಾಸ್ಟಿ/ ಕೈಫೊಪ್ಲಾಸ್ಟಿ (ಬೋನ್ ಸಿಮೆಂಟ್)
- ಆರ್ಟಿಫಿಶಿಯಲ್ ಡಿಸ್ಕ್ ರಿಪ್ಲೇಸ್‌ಮೆಂಟ್
- ಸ್ಪೈನ್ ಡಿಫೊರ್ಮಿಟಿ ಕರೆಕ್ಷನ್
- ಎಲ್ಲ ವಿಧದ ಸ್ಪೈನಲ್ ಇನ್‌ಸ್ಟ್ರುಮೆಂಟೇಶನ್
- ಸ್ಪೈನ್ ಟ್ಯೂಮರ್ ರಿಮೂವಲ್

www.unityhospital.in | Tel.: 0824&4245555 (Extn. No. 140) /+91 95356 63384 | neuro@unityhospital.in

ಸುಂದರ ನಾಳೆಗೆ
ಸುಮಧುರ ಬಾಳಿಗೆ

ಅನುಪಮ

ಮಹಿಳಾ ಮಾಸಿಕ

ಸಂಪುಟ: 3 ಸಂಚಿಕೆ: 6
Vol: 3 Issue: 6

ಪ್ರಧಾನ ಸಂಪಾದಕಿ
ಶಹನಾರುಝ್ ಎಂ.

ಸಹಸಂಪಾದಕಿಯರು
ಸಬೀಹಾ ಫಾತಿಮಾ
ಸಮೀನಾ ಯು.

ಸಂಪಾದಕ ಮಂಡಳಿ
ಸಾಜಿದಾ ಮೂಮಿನ್
ಶಹೀದಾ ಉಮರ್
ಕುಲ್ಸೂಮ್ ಅಬೂಬಕರ್
ರಹೀನಾ ತೊಕ್ಕೊಟ್ಟು

ವ್ಯವಸ್ಥಾಪಕರು
ಮುಹಮ್ಮದ್ ಮುಫ್ಸಿನ್

ಪ್ರಕಾಶಕರು
ಎಂ.ಸಾದುಲ್ಲಾ

ವಿನ್ಯಾಸ ಮತ್ತು ಮುದ್ರಣ
ಕಂಪ್ರಿಂಟ್, ಮಂಗಳೂರು-1
ದೂರವಾಣಿ: 2424758

ಕಚೇರಿ ವಿಳಾಸ
ಅನುಪಮ ಮಹಿಳಾ ಮಾಸಿಕ
ಹಿದಾಯತ್ ಸೆಂಟರ್
ಬೀಬಿ ಅಲಾಬಿ ರಸ್ತೆ
ಮಂಗಳೂರು-1
ದೂರವಾಣಿ : 0824-2410358
9901318820
ಫ್ಯಾಕ್ಸ್ : 0824-2426846

Email:
anupamamasika@gmail.com

website:
www.anupamamonthly.com

ಒಳಪುಟಗಳಲ್ಲಿ

ಶಾಲೆಯತ್ತ ಸುರಕ್ಷಿತ ಪಯಣ ಸಾಧ್ಯವೇ? ಪುಟ–8

ರಸ್ತೆಗಳಲ್ಲಿ ರಕ್ತದೋಕುಳಿಯಾಗುವಾಗ	11
ಅಮ್ಮಾ... ನಾನು ಕದ್ದಿಲ್ಲ	13
ಮರೆತರೂ ಹೇಗೆ ಮರೆಯಲಿ?	16
ಅಡ್ಡ ಹೆಸರಿನ ಉದ್ದ ಪರಿಣಾಮ	19
ತಾಯಿಯಾಗುವ ಮಹಾ ಭಾಗ್ಯ	21
ಅಪಸ್ಮಾರ ರೋಗವಲ್ಲ	23
24 ಗಂಟೆಯೂ ರಸ್ತೆ ನಿಯಮಗಳ ಪಾಲನೆ ಅಗತ್ಯ	44
ಭ್ರೂಣ ಹತ್ಯೆ ಮತ್ತು ಸ್ತ್ರೀ ಹತ್ಯೆ	46
ಬರುತಿದೆ ತಿಂಗಳು ರಮಝಾನ್	51
ಬೇಡ! ನನ್ನಿಂದ ಸಾಧ್ಯವಿಲ್ಲ	53
ಮಾದರಿಯೋಗ್ಯ ಬಡ್ಡಿರಹಿತ ಸಾಲ ಸಂಸ್ಥೆ: ಅಲ್ ನೂರ್	56
ಅತ್ತೆ–ಸೊಸೆ ಜಗಳ ಯಾರು ಕಾರಣ?	58
ನೀವೂ ದಾದಿಯರಾಗುತ್ತೀರಾ?	61

ಚಾಂದಿನಿ

ಕಥಾಲೋಕ - 27

ಧಾರಾವಾಹಿ
37

ಅಸ್ಮಾಳ ಅನಾಥ ಪ್ರಜ್ಞೆ

ಬಹಿರ್ಮುಖ	05
ಅಡುಗೆ ಮನೆ	33
ಶೃಂಗಾರ	34
ಸಖಿ	35
ಬಾಳಬುತ್ತಿ	41
ಸಾಂತ್ವನ	43
ಮುಸ್ಲಿಮ್ ವಿಜ್ಞಾನಿಗಳು	55
ಮಕ್ಕಳ ರಂಗ	62
ಹೃದಯದ ಮಾತು	65

Vol. No. 3, Issue No.6, Printed & Published by **M. Sadullah** on behalf of Sanmarga Publication Trust and Printed at Comprint & Published at Hidayath Centre, Beebi Alabi Road, Mangalore - 575001, Editor: **Shahnaz M.**
REGISTERED NO. KA/SK/MNG-477/2012-14 LICENCE TO POST SK/MNG/WPP/37

ಅಚ್ಚುಮೆಚ್ಚು

ಅನುಪಮ ಮಹಿಳಾ ಮಾಸಿಕ ನಿಜವಾಗಿ ಅಚ್ಚುಮೆಚ್ಚು. ಹೃದಯದ ಮಾತು ಅಂಕಣದಿಂದ ಎಷ್ಟೋ ಪ್ರತಿಭೆಗಳನ್ನು ತಿಳಿಯುವ ಅವಕಾಶ ಸಿಕ್ಕಿದೆ. ಇದು ಮಹಿಳೆಯರ ಮಾಸಿಕ ಪತ್ರಿಕೆ ಅಲ್ಲ. ಈ ಪತ್ರಿಕೆ ಎಲ್ಲರಿಗೂ ಓದುವ ಅವಕಾಶ ಇದೆ.

ಕೆ. ಪಾಂಡುರಂಗ ಕಾಮತ್,
ಗಿಳಿಯಾರು ಕೋಟ

ಚಿಂತನಾರ್ಹ

ಬ್ಯಾಂಕ್ ಲೋನ್‌ನಿಂದ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಅದನ್ನು ಮರುಪಾವತಿಸಲು ಪಡಬಾರದ ಕಷ್ಟಪಡುವುದು ಈ ಹಣದಿಂದ ಖಾಸಗಿ ಶಿಕ್ಷಣ ಸಂಸ್ಥೆಗಳು ಕೊಬ್ಬಿರುವುದು ಜೂನ್ ಮಾಸದ ಸಂಚಿಕೆಯ ಬಹಿರ್ಮುಖ ಲೇಖನದಿಂದ ತಿಳಿದು ಬಂದಿತು. ಬಹು ಗಂಭೀರ ಹಾಗೂ ಚಿಂತನಾರ್ಹ ಲೇಖನವಿದು.

ಹೊಸ ಶಿಕ್ಷಣ ಕಾಯಿದೆ ಜಾರಿಗೆ ಬಂದ ನಂತರ ಸರಕಾರಿ ಶಾಲೆಗಳು ಮಕ್ಕಳ ಕೊರತೆಯಿಂದ ಮುಚ್ಚಿ ಹೋಗ ಬಹುದು. ಸರಿಕಾರಿ ಶಾಲೆಗಳು ಮಾಸಿಯಂ ಗಳಾಗಿ ಬದಲಾಗಬಹುದು ಎನ್ನುವ ಅನಿಸಿಕೆ ಕಟುಸತ್ಯದಿಂದ ಕೂಡಿದೆ. ವಿಶೇಷವಾಗಿ ಕನ್ನಡ ಮಾಧ್ಯಮದ ಶಾಲೆಗೆ ತುಂಬಲಾರದ ನಷ್ಟವೆಂದರೂ ಸರಿ.

ಅರಫಾ ಮಂಚಿಯವರ ಹಜ್ಜ್ ಸಬ್ಸಿಡಿ ಏರ್ ಇಂಡಿಯಾ ವಿಮಾನ ಸಂಸ್ಥೆಯ ಉಳಿವಿಗಾಗಿ ಎನ್ನುವ ಸಂಶಯ ಅಕ್ಷರಶಃ ಸತ್ಯ. ಸಬ್ಸಿಡಿ ಮಂಜೂರು ಮಾಡುವ ಸರಕಾರ ಒಂದು ಕೈಯಿಂದ ಕೊಟ್ಟು ಇನ್ನೊಂದು ಕೈಯಿಂದ ಹಿಂಪಡೆಯುತ್ತದೆ.

ಅಬ್ದುಲ್ ವಹ್ಹಾಬ್ ಮುಲ್ಲಾ,
ಗಂಗಾವತಿ

ಚೆನ್ನಾಗಿದೆ

ಜೂನ್ ತಿಂಗಳ ಸಂಚಿಕೆ ತುಂಬಾ ತುಂಬಾ ಚೆನ್ನಾಗಿ ಮೂಡಿ ಬಂದಿತ್ತು. ಓದಲು ತುಂಬಾ ವಿಷಯ ಗಳಿದ್ದವು. 'ಶಮು'– ಅವರ ಧಾರಾವಾಹಿ ಕೂಡಾ ಆರಂಭದಲ್ಲಿಯೇ ಉತ್ತಮ ಕುತೂಹಲ ಹುಟ್ಟಿಸಿಕೊಂಡು ಬಿಟ್ಟಿದೆ. ಅವರಿಗೆ ಅಭಿನಂದನೆಗಳು.

ಇರ್ಶಾದ್ ಮೂಡಬಿದ್ರೆ, ದುಬ್ಯಾ

ಮನಸ್ಸು ಭಾರವಾಯಿತು

ಜೂನ್ ಸಂಚಿಕೆಯಲ್ಲಿ ಪ್ರಕಟವಾದ ಓರ್ವ ಹೆಣ್ಣಿನ ದುರಂತಮಯ ಬದುಕು ಲೇಖನ ಓದಿ ಮನಸ್ಸು ಭಾರವಾಯಿತು. ವರದಕ್ಷಿಣೆಯ ಕ್ರೂರ ಹಿಂಸೆಗೆ ಬಲಿಯಾದ ಝಪರಿಯಾಳ ಬದುಕು ನರಕಗೊಳಿಸಿದ ಕ್ರೂರಿಗಳಿಗೆ ಶಿಕ್ಷೆಯಾಗಲೇ ಬೇಕು ಎಂದು ಮನಸ್ಸು ನುಡಿಯಿತು.

ಶಾಹಿದಾ ಮೂಡಬಿದ್ರೆ

ಬಹುಮುಖ ಪ್ರತಿಭೆ

ಇಮ್ತಿಯಾಝ್ ಪೆರ್ಲರವರ 'ಅರಳುವ ಮೊದಲೇ ಮುದುಡಿದ ಅರ್ಫಾ' ಲೇಖನ ಬಹುಮುಖ ಪ್ರತಿಭೆಯ ಅರ್ಫಾಳನ್ನು ಪರಿಚಯಿಸಿತು. ದೇವನ ವಿಧಿಯ ಮುಂದೆ ಎಲ್ಲರೂ ತಲೆಬಾಗಬೇಕೆಂಬುದು ಈ ಘಟನೆ ಸಾಬೀತುಪಡಿಸುತ್ತದೆ. ನಮಗೆ ದೊರಕಿರುವ ಆಯುಷ್ಯವನ್ನು ಸದುಪಯೋಗಪಡಿಸಿಕೊಂಡರೆ ಈ ಜೀವನ ಸಾರ್ಥಕವಾಗಬಹುದು.

ಸುಮಯ್ಯಾ, ಕಾರವಾರ

ದೂರದ ದುಬ್ಯಾ

ಲೇಖಕ ಇರ್ಶಾದ್ ಮೂಡಬಿದ್ರೆಯವರ ಅಂಕಣದಲ್ಲಿ ಪ್ರಕಟವಾದ 'ಅಮ್ಮಾ, ಅನ್ನುವ ಪ್ರೀತಿಯ ಸಾಗರ' ಲೇಖನ ತುಂಬಾ ಹಿಡಿಸಿತು. ಅಮ್ಮಾ, ನಿನಗಾರು ಇಲ್ಲ ಸರಿಸಮ ಎನ್ನುವ ಮಾತು ನೂರಕ್ಕೆ ನೂರು ಸತ್ಯ.

ಪ್ರಮೀಳಾ ಸಾಗರ

ವೈದ್ಯರೊಂದಿಗೆ

'ಅನುಪಮ'ದಲ್ಲಿ ವೈದ್ಯರೊಂದಿಗೆ ಪ್ರಶ್ನೋತ್ತರ ಅಂಕಣ- ಹಲವು ತಿಂಗಳು ಗಳಿಂದ ಕಾಣುತ್ತಿಲ್ಲ. ತಾವು ಅದನ್ನು ಪುನರಾರಂಭಿಸಿದರೆ ಓದುಗರಿಗೆ ತುಂಬಾ ಉಪಯುಕ್ತವಾದೀತು.

ಹುಸ್ನಾ, ದಮ್ಮಾಮ್

ಉತ್ತಮ ಕಥೆ

ಎನ್.ಎಸ್. ಮಾಲಿನಿಯವರು 'ಅರಳಿತು ತಾವರೆ' ಒಂದು ಸಾಮಾಜಿಕ ಕಥೆ ಎಂಬುದರಲ್ಲಿ ಎರಡು ಮಾತಿಲ್ಲ. ಹೆಣ್ಣಿನ ಬಗ್ಗೆ ತಾತ್ಸಾರ ತೋರಿಸುವವರಿಗೆ ಇದರಲ್ಲಿ ಪಾಠವಿದೆ. ಹೆಣ್ಣು–ಗಂಡು ದೇವನ ತೀರ್ಮಾನವೆಂದು ಬಗೆದಲ್ಲಿ ಈ ತಾರತಮ್ಯಕ್ಕೆ ಕೊನೆ ಹಾಡಬಹುದು.

ಸೌಂದರ್ಯ ಹಾಸನ

ದಾಂಪತ್ಯ ಬದುಕು

ಶಹನಾಝ್ ಎಂ.ರವರ ದಾಂಪತ್ಯ ಬದುಕು ಅಂಕಣ ತುಂಬಾ ಉಪಯುಕ್ತವಾಗಿದೆ. ಸುಖೀ ಕುಟುಂಬಕ್ಕೆ ಬೇಕಾದ ಮಾರ್ಗದರ್ಶನ ಈ ಲೇಖನದಲ್ಲಿ ಅಡಕವಾಗಿದೆ.

ಕೌಸರ್ ಬಸವಕಲ್ಯಾಣ

ಅನುಪಮ ವೆಬ್‌ಸೈಟ್‌ನಲ್ಲೂ ಲಭ್ಯ:
www.anupamamonthly.com

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ವ್ಯಾಪಾರೀಕರಣಗೊಳ್ಳುತ್ತಿರುವ ಆಧ್ಯಾತ್ಮಿಕತೆ

ಇಂದು ಮನುಷ್ಯನಿಗೆ ಎಲ್ಲವೂ ತನ್ನ ಬಳಿಯಲ್ಲಿದ್ದರೂ ಮಾನಸಿಕ ನೆಮ್ಮದಿ ಇಲ್ಲವಾಗಿದೆ. ಜನರು ಸಹಜವಾಗಿ ನೆಮ್ಮದಿಯನ್ನರಸುತ್ತಾ ಆಧ್ಯಾತ್ಮಿಕ ಕೇಂದ್ರಗಳತ್ತ ಮುಖ ಮಾಡುತ್ತಿದ್ದಾರೆ. ಆದರೆ, ಈ ಆಧ್ಯಾತ್ಮಿಕ ಕೇಂದ್ರಗಳು ಎಷ್ಟರ ಮಟ್ಟಿಗೆ ಮನುಷ್ಯನಿಗೆ ನೆಮ್ಮದಿಯನ್ನೊದಗಿಸುತ್ತಿದೆ ಎಂಬುದು ಸರಳವಾಗಿ ಉತ್ತರಿಸಬಹುದಾದ ಪ್ರಶ್ನೆಯಲ್ಲ.

ಹೆಣ್ಣು, ಮಣ್ಣು, ಹೊನ್ನಿಗಾಗಿ ಜನರು ಏನು ಮಾಡಲೂ ಸಿದ್ಧರಾಗುತ್ತಾರೆ ಎಂಬುದನ್ನು ದಿನಂಪ್ರತಿ ದೇಶದ ಉದ್ದಗಲಗಳಲ್ಲಿ ನಡೆಯುತ್ತಿರುವ ಘಟನೆಗಳು ಸಾಬೀತು ಪಡಿಸುತ್ತಿವೆ. ಡೋಂಗಿ ಬಾಬಾಗಳು, ಜ್ಯೋತಿಷಿಗಳು, ನಕಲಿ ಆಧ್ಯಾತ್ಮಿಕ ಗುರುಗಳು ಜನರಿಗೆ ಪಂಗನಾಮ ಹಾಕಿ ಹಣ ಲಪಟಾಯಿಸುವ ಮೋಜು ಮಜಾ ಉಡಾಯಿಸುತ್ತಿರುವ ಘಟನೆಗಳು ಸಂಭವಿಸುತ್ತಿರುವುದು ಈ ಕಾಲದಲ್ಲಿ ಮಾತ್ರವಲ್ಲ ಇದಕ್ಕೆ ಶತಮಾನಗಳ ಇತಿಹಾಸವಿದೆ. ಆದರೂ ಜನರು ಅಂಧರಂತೆ ಇಂತಹ ವ್ಯಕ್ತಿಗಳ ಹಿಂದೆ ಬಿದ್ದು ಸರ್ವಸ್ವವನ್ನೂ ಕಳೆದುಕೊಳ್ಳುತ್ತಿದ್ದಾರೆ. ಹರಕೆಯ ಕುರಿಗಳಾಗುತ್ತಿದ್ದಾರೆ.

ಮನುಷ್ಯ ಶಿಕ್ಷಿತನಾದಂತೆ ಅವನಲ್ಲಿ ವೈಚಾರಿಕತೆ ಬೆಳೆದು ಇಂತಹ ಮೂಢನಂಬಿಕೆಗಳು ತೊಲಗಬಹುದು. ಇಂತಹ ನಕಲಿಗಳ ಅಟ್ಟಹಾಸಕ್ಕೆ ಕಡಿವಾಣ ಬೀಳಬಹುದು ಎಂಬ ನಿರೀಕ್ಷೆ ಹುಸಿಯಾಗತೊಡಗಿದೆ. ನಾವು ನೋಡುತ್ತಿರುವಂತೆ ದೊಡ್ಡ ದೊಡ್ಡ ಪದವಿಗಳನ್ನು ಪಡೆದ, ಪ್ರತಿಷ್ಠಿತ ಹುದ್ದೆಗಳಲ್ಲಿರುವ ವ್ಯಕ್ತಿಗಳೇ ಇಂತಹ ನಕಲಿ ಆಧ್ಯಾತ್ಮಿಕ ಗುರುಗಳ ಹಿಂದೆಮುಂದೆ ಮುತ್ತಿಕೊಂಡಿರುತ್ತಾರೆ. ಮನುಷ್ಯ ತನ್ನನ್ನು ತಾನು ಕೀಳೆಂದು ಭಾವಿಸಿಕೊಂಡಾಗ ಅಥವಾ ಮಾಡಬಾರದ ಮಹಾ ಪಾಪದ ಹೊರೆಯನ್ನು ಹೊತ್ತುಕೊಂಡು ಪಶ್ಚಾತ್ತಾಪದಿಂದ ಬೇಯುತ್ತಿರುವಾಗ ಇಂತಹ ನಕಲಿ ಗುರುಗಳ ಸಹವಾಸಕ್ಕೆ ಸುಲಭದಲ್ಲಿ ಬಲಿ ಬೀಳುತ್ತಾರೆ ಮತ್ತು ಅದರಿಂದ ಹೊರಬರಲಾರದೆ ಅವರ ಎಲ್ಲಾ ಕುತರ್ಕ ಕುಚೇಷ್ಟೆಗಳಿಗೂ ಮೂಕ ಪ್ರೇಕ್ಷಕರಾಗುತ್ತಾರೆ.

ಎಷ್ಟೆಷ್ಟೋ ನಕಲಿ ಆಧ್ಯಾತ್ಮಿಕ ಗುರುಗಳ ಕರ್ಮಕಾಂಡಗಳು ಬಯಲಿಗೆ ಬಂದರೂ, ಇಂದೂ ಜನರು ಬುದ್ಧಿ ಉಪಯೋಗಿಸಿ ಕೆಲಸ ಮಾಡುತ್ತಿಲ್ಲ. ಇಂತಹ ವ್ಯಕ್ತಿಗಳಿಗೆ ಸರಿಯಾದ ಶಿಕ್ಷೆಯೂ ಸಿಗುತ್ತಿಲ್ಲ ಎಂಬುದು ವಿಪರ್ಯಾಸ. ಆಧ್ಯಾತ್ಮಿಕತೆ ಇಂದು ಒಂದು ರೀತಿಯ ವ್ಯಾಪಾರವಾಗಿದೆ. ಬಂಡವಾಳದ ಅಗತ್ಯವಿಲ್ಲದ ಹೆಚ್ಚಿನ ಪರಿಶ್ರಮವಿಲ್ಲದೆ ಹಣ ಶೇಖರಿಸಬಹುದಾದ ಒಂದು ವ್ಯಾಪಾರ. ಜನರನ್ನು ಮೋಡಿ ಮಾಡುವ ಶೈಲಿಯ ಮಾತುಗಾರಿಕೆ ಮಾತ್ರ ಇಂತಹ ವ್ಯಕ್ತಿಗಳ ಬಂಡವಾಳ. ಕೆಲವು ಧಾರ್ಮಿಕ ಗ್ರಂಥಗಳ ಉಕ್ತಿಗಳನ್ನು ಬಳಸಿಕೊಂಡು, ಕೆಲವು ಕಥೆಗಳನ್ನು ಹೆಣೆದುಕೊಂಡು, ಜನರನ್ನು ಸುಲಭದಲ್ಲಿ ವಶೀಕರಿಸುವ ಶಕ್ತಿ ಇಂತಹವರಿಗೆ ಕಲಾತಲಾಮಲಕ. ಆದುದರಿಂದಲೇ ಇಂತಹ ವ್ಯಕ್ತಿಗಳ ಪ್ರವಚನವನ್ನು ಆಲಿಸಲು ಮತ್ತು ಅವರು ಹೇಳಿದಂತೆ ತಲೆ, ಕಾಲು ಅಲ್ಲಾಡಿಸಲು ಲಕ್ಷಾಂತರ ಸಂಖ್ಯೆಯಲ್ಲಿ ಜನರು ಸೇರುತ್ತಾರೆ.

ಆಧ್ಯಾತ್ಮಿಕತೆಯತ್ತ ಒಲವಿರುವ ವ್ಯಕ್ತಿ ತನ್ನ ಜೀವನವನ್ನು ಸಂಸ್ಕರಿಸಬೇಕು. ಐಷಾರಾಮವನ್ನು ತೊರೆದು ಸರಳ ಜೀವನವನ್ನು ಸಾಗಿಸಬೇಕು. ಆದರೆ, ಇಂತಹವರಿಗೆ ಮಾರ್ಗದರ್ಶನ ನೀಡುವವರೇ ಮಣ್ಣು, ಹೆಣ್ಣು, ಹೊನ್ನಿನ ಜಾಲಕ್ಕೆ ಬಿದ್ದು ಸಂಪತ್ತನ್ನು ಶೇಖರಿಸುತ್ತಿದ್ದರೆ, ರಾಸಲೀಲೆಯಲ್ಲಿ ನಿರತರಾಗಿದ್ದರೆ ಇವರು ತಮ್ಮ ಅನುಯಾಯಿಗಳಿಗೆ ಯಾವ ನಿಟ್ಟಿನಲ್ಲಿ ಮಾರ್ಗದರ್ಶಕರಾದಾರು? ಇದಕ್ಕೆಲ್ಲಾ ಕಾರಣಗಳೇನು? ಪರಿಹಾರವೇನು? ಎಂಬುದನ್ನು ಆಲೋಚಿಸಿ ಕಾರ್ಯಪ್ರವೃತ್ತರಾಗಬೇಕು. ನಕಲಿ ಆಧ್ಯಾತ್ಮಿಕ ವ್ಯಕ್ತಿಗಳ ಜಾಲಕ್ಕೆ ಬೀಳದಂತೆ ಜನಸಾಮಾನ್ಯರಲ್ಲಿ ಜಾಗೃತಿಯನ್ನುಂಟು ಮಾಡುವುದು ಕಾಲದ ಬೇಡಿಕೆಯಾಗಿದೆ.

ಮನುಷ್ಯ ತಾನು ಯಾರು? ಎಲ್ಲಿಂದ ಬಂದವನು? ಎಲ್ಲಿಗೆ ಹೋಗಬೇಕಾದವನು? ಈ ಜೀವನದಲ್ಲಿ ಮಾಡಬೇಕಾದ, ಮಾಡಬಾರದ ಕೆಲಸಗಳೇನು? ಜೀವನದ ಉದ್ದೇಶವೇನು ಇತ್ಯಾದಿ ಪ್ರಶ್ನೆಗಳಿಗೆ ಸಮಗ್ರ ಮತ್ತು ಸಮರ್ಪಕ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಪೂರ್ವಗ್ರಹ ಪೀಡಿತರಾಗದೆ ಸಂಪೂರ್ಣ ಶ್ರದ್ಧೆಯೊಂದಿಗೆ ಸತ್ಯವನ್ನು ಅರಸುವ ಕೆಲಸದಲ್ಲಿ ತೊಡಗಬೇಕು. ತನ್ನ ಮನಸ್ಸಿಗೆ ನೆಮ್ಮದಿಯನ್ನೊದಗಿಸಬಲ್ಲ ಆಧ್ಯಾತ್ಮಿಕತೆ ಯಾವುದು ಎಂಬುದನ್ನು ಹುಡುಕಬೇಕು. ಇದಕ್ಕೆ ನಿಜವಾದ ಸೃಷ್ಟಿಕರ್ತನನ್ನು ಅರಿಯಬೇಕಾದ ಅಗತ್ಯವಿದೆ. ಸೃಷ್ಟಿಕರ್ತನು ಮಾತ್ರ ಮಾರ್ಗದರ್ಶನವನ್ನು ನೀಡಬಲ್ಲನು ಎಂಬುದನ್ನು ದೃಢವಾಗಿ ನಂಬಬೇಕು. ಆಗ ಮಾತ್ರ ಈ ನಕಲಿ ಮಧ್ಯವರ್ತಿಗಳ ಉಪಟಳದಿಂದ ರಕ್ಷಣೆಯನ್ನು ಹೊಂದ ಬಹುದು. ದೇವನ ಸಾಮೀಪ್ಯತೆಗೆ ಮಧ್ಯವರ್ತಿಗಳ ಅಗತ್ಯವಿಲ್ಲವೆಂಬುದನ್ನು ಅರಿತು, ಸತ್ಯ - ಅಸತ್ಯವನ್ನು ಬೇರ್ಪಡಿಸುವ ಎದೆಗಾರಿಕೆಯನ್ನು ಬೆಳೆಸಲು ಜನರಿಗೆ ಪ್ರೇರಣೆ ದೊರೆಯುವಂತಾಗಲಿ ಎಂಬ ಪ್ರಾರ್ಥನೆ ಸೃಷ್ಟಿಕರ್ತನಲ್ಲಿ....

ಮನುಜನೇ...

ಮನುಜನೇ ಎಲ್ಲಿ ದಾರಿ ತಪ್ಪುತ್ತಿದ್ದೀಯ?
ನಿನ್ನಯ ಗುರಿ ಏನೆಂದು ಮರೆತೆಯಾ?
ಅಡಂಬರದ ಜೀವನದಲ್ಲಿ ಈಜಾಡಿ
ಮುಳುಗಿ ಹೋಗಲು ಇಷ್ಟಪಡುವೆಯಾ?
ಸೃಷ್ಟಿಕರ್ತನ ಆಜ್ಞೆಯ ಮರೆತೆಯಾ?
ಈ ಜಗತ್ತು ಯಾರದೆಂದು ತಿಳಿದೆ?
ನೀ ನಿನ್ನನ್ನೇ ಮರೆತು ಬಿಟ್ಟೆ
ಆಧುನಿಕತೆಯ ಹೆಸರಲಿ ನಾಚಿಕೆ ಬಿಟ್ಟೆ
ಫ್ಯಾಶನ್ ಹೆಸರಲಿ ತುಂಡು ಬಟ್ಟೆ
ಧರಿಸಿ ಅತ್ಯಾಚಾರ ಮಾಡಿಕೊಳ್ಳುತ್ತಿರುವೆ
ನಿನ್ನನ್ನೇ ನೀ
ದಾರಿ ತಪ್ಪದ್ದೆಲ್ಲಿ ನೀ ಯೋಚಿಸುವೆಯಾ?
ಈ ಭೂಮಿ, ಆಕಾಶ, ಪ್ರಾಣಿ, ಪಕ್ಷಿಗಳು
ಸೂರ್ಯ, ಚಂದ್ರ ನಕ್ಷತ್ರಾದಿಗಳು
ಪಾಲಿಸುತ್ತವೆ ಅವನ ಆಜ್ಞೆ...
ನೀನೋ ಇಹಲೋಕದ ಕೆಸರಲಿ
ಕೊಚ್ಚಿ ಹೋಗಿ
ಮನುಷ್ಯತ್ವ ಮರೆತು ಮೃಗವಾದೆ ನೀ
ಪ್ರಾಣಿಗಳಿಗಿಂತ ಕಡೆಯಾದೆ ನೀ
ಹೇಸಿಗೆ ಕಾರ್ಯವ ಬಿಡಲಾರೆಯಾ ನೀ
ಸೃಷ್ಟಿಕರ್ತ ಜೋಡಿಗಳ ಏಕೆ
ಸೃಷ್ಟಿಸಿದನೆಂದು ನೀ
ಒಮ್ಮೆ ಯೋಚಿಸಲಾರೆಯಾ?
ಮಂದಿರ, ಮಸೀದಿ, ಚರ್ಚ್‌ಗಳ
ಅಪವಿತ್ರ ಗೊಳಿಸುವುದೇ ನಿನ್ನಯ ಗುರಿಯಾ?
ಇದು ಶೈತಾನನ ಕಾರ್ಯವೆಂದು
ಒಮ್ಮೆ ಯೋಚಿಸಲಾರೆಯಾ?
ನೀ ಶೈತಾನನಾಗದೆ ಮನುಜನಾಗಲಾರೆಯಾ?

■ ಮುಹೀನ್ ಮುಹಮ್ಮದ್
ಮಡಿಕೇರಿ

ಗಲ್ಫ್ ಯಾತ್ರೆ

ಹೊರಟೆ ನಾ...
ಮನೆಯ ಕಷ್ಟಗಳಿಗೆ
ಸೋದರಿಯ ಕಲ್ಯಾಣದಿ
ತಾಯಿಯಾ ಶುಶ್ರೂಷೆಯೊಳು
ಸಾಲಗಳು ತುಂಬಿ
ಸಾಲ ಕೊಟ್ಟವರು ಸಾಲಾಗಿ ನಿಂತಿರೆ
ಹೊರಟೆ ನಾ... ಗಲ್ಫಿಗೆ

ತಾಯಿಯಾ ಕರುಣೆಯನು ಅಗಲಿ
ಮಡದಿಯ ಸ್ನೇಹವನು ತೊರೆದು
ಮಕ್ಕಳ ನಗುಮುಖವನು ತ್ಯಜಿಸಿ
ಸಂಕಷ್ಟಗಳ ಪರಿಹಾರಕ್ಕಾಗಿ
ದುಃಖಾಭಿಮುಖದೊಂದಿಗೆ...
ಹೊರೆಟೆ ನಾ... ಗಲ್ಫಿಗೆ

ಹೊತ್ತೊಯ್ದುತು ವಿಮಾನ ನನ್ನನ್ನು
ನನ್ನಂತೆಯಿರುವ ಸಂಕಷ್ಟ ಪೀಡಿತರನು
ಅದರಲ್ಲಿರುವವರೆಲ್ಲರು ಅನ್ಯರು... ಆದರೆ
ನೋವಿನ ಬಂಧನದಲಿ ನಾವೆಲ್ಲ ಸಮಾನರು
ಅವರವರದೇ ಬಾಳು ಅವರವರದೇ ಗೋಳು
ಅವರಿಗವರವರದೇ ಅಳುವು ನಗುವು!!
ಹೊರಟೆ ನಾ... ನೋವಿನ ಭಾರದೊಂದಿಗೆ

ಬಿಸಿಲ ಬೇಗೆಯಲಿ ಬೆಂದು
ದುಡಿದು-ದುಡಿದು ನೊಂದು...
ಊರನ್ನಗಲಿ ತುಂಬಿತು ವರ್ಷಾನುವರ್ಷ..
ಆದರೆ ತುಂಬಲಿಲ್ಲ ಸಾಲದ ಹೊರೆ
ನಿಮಿಷಾ ನಿಮಿಷಗಳು ಬರುತಿದೆ
ತಾಯಿ, ಪತ್ನಿ-ಮಕ್ಕಳ ನೆನಪು
ದೂರವಾಣಿಯೊಳೊಂದು ಹೃದಯಕೆ ತಂಪು
ಆದರೂ ಪ್ರತಿಧ್ವನಿಸುತಿದೆ ನೋವಿನ ಕಂಪು
ಹೊರಟೆ ನಾ... ಗಲ್ಫಿಗೆ

■ ಸರ್ಫ್ರಾಝ್ ನವಾಝ್
ಕೃಷ್ಣಾಪುರ

ಎಲ್ಲ ನಂಬಿಕೆಯ ಜನರಿಗೆ ಪವಿತ್ರ ಕುರ್‌ಆನಿನ ಉಚಿತ ಪ್ರತಿಗಳು

Free Copy of the Holy Quran For People of All Faith



Call for a Free Copy

Kannada • English • Tamil • Telugu

9945177477 - 9945188488

SALAAM Centre

Our Objective is to Promote Peace and Bortherood





Biography of Prophet Muhammad (pbuh)

Trusted Name in

Quality Wood...

Celebrating

25 YEARS

Karnataka Saw Mills

Derlakatte, Mangalore

Karnataka Saw Mills

TIMBER MERCHANTS & COUPE CONTRACTORS

University Road, Derlakatte, Mangalore -575 018

Ph : 0824 - 2203143, Fax : 0824 - 2204143

Cell : 94484 55388, 98454 39913

E-mail : sales@kmnco.in, Website : www.kmnco.in

ಶಾಲೆಯತ್ತ ಸುರಕ್ಷಿತ ಪಯಣ ಸಾಧ್ಯವೇ?

ತಶ್ರೀಫಾ ಜಹಾನ್

ಪುಟಾಣಿಗಳ ಕೋರಿಕೆ:

ಓಡಿ ಬಂದು ತಂದೆಯ ಮಡಿಲಲ್ಲಿ ಕೂರಲು, ಅಣ್ಣನ ಕೈ ಹಿಡಿದು ಆಟದ ಮೈದಾನಕ್ಕೆ ಹೋಗಲು ಆಶಿಸಿ ಪ್ರಯಾಣ ಆರಂಭಿಸುವ ನಾವು ಕೆಸರು ತುಂಬಿದ ನದಿಗಳ ಆಳಗಳಲ್ಲಿ, ಆಸ್ಪತ್ರೆಯ ಮೋರ್ಚರಿಗಳಲ್ಲಿ ಮಲಗುತ್ತೇವೆ. ಚಕ್ರದ ಅಡಿಗೆ ಸಿಲುಕಿ ಚಡಪಡಿಸಿ ರಸ್ತೆಯಲ್ಲೇ ಅಪ್ಪಚ್ಚಿಯಾಗುತ್ತೇವೆ... ರಕ್ತ ಕಟ್ಟಿ ನಿಂತ ಹಾದಿಗಳಲ್ಲಿ ನಡೆಯಲು ನಮಗೆ ಭಯವಾಗುತ್ತಿದೆ. ನಮ್ಮ ಎಳೆಯ ದೇಹವನ್ನು ಹಿಂಡಿ ಹಿಪ್ಪೆ ಮಾಡಲು ಕಿರುಚಿಕೊಂಡು ಹೋಗುವ

ವಾಹನಗಳ ನಡುವೆ ನಾವು ಭಯಪಡದೆ ಹೇಗೆ ನಡೆಯಲು ಸಾಧ್ಯ? ಪ್ರತಿಯೊಂದು ಬಾರಿಯೂ ನಮ್ಮಂಥವರು ಒಟ್ಟಾಗಿ ಸಾಯುವಾಗ, ಹಿರಿಯರಾದ ನೀವು ನಮ್ಮ ರಕ್ಷಣೆಗೆಂದು ಹೊಸ ಕಾನೂನುಗಳೊಂದಿಗೆ ರಂಗಕ್ಕಿಳಿಯುತ್ತೀರಿ. ನಂತರ ನಮಗೆ ಕಾನೂನುಗಳ ನೆನಪೇ ಇರುವುದಿಲ್ಲ.

ಪುನಃ ನಮ್ಮ ಕುರಿತು ಆಲೋಚಿಸಲು, ನಮ್ಮ ಸುರಕ್ಷತೆಯ ಕುರಿತು ಗಮನ ಹರಿಸಲು ನಾವು ಒಟ್ಟಾಗಿ ಸಾಯಬೇಕು. ಬೋಟ್ ಮುಳುಗಿಯೋ, ಶಾಲಾ ವಾಹನ ಹೊಳೆಗೆ ಬಿದ್ದೋ, ಚರಂಡಿಗೆ ಉರುಳಿಯೋ, ನಮ್ಮ ಪುಟ್ಟ ಕಾಲುಗಳು ಮರಣದ ಕಡೆಗೆ ನಡುಗಿ ಹೆದರಿ ಹೆಜ್ಜೆ ಹಾಕಬೇಕು. ಆದ್ದರಿಂದ ನಾವು ನಿಮ್ಮೊಡನೆ ದೈನ್ಯತೆಯಿಂದ ಬೇಡಿಕೊಳ್ಳುತ್ತೇವೆ. ನಮಗಾಗಿ ಸುರಕ್ಷಾ ನಿಯಮಗಳನ್ನು ರಚಿಸಿ ಕಟ್ಟುನಿಟ್ಟಾಗಿ ಜಾರಿಗೊಳಿಸಿ...

ಜೀವನ ಆರಂಭಿಸುವ ಮೊದಲೇ ನಮ್ಮ ಕೊಂದು ಮುಗಿಸುವವರೇ,

ಇನ್ನಾದರೂ ತೆರೆದು ಬಿಡಿ. ಆ ನಿಮ್ಮ ನಿರ್ಲಕ್ಷ್ಯದಿಂದ ಮುಚ್ಚಿದ ಆ ಕಣ್ಣುಗಳಾ...

ಇಂದಿನ ದಿನಗಳಲ್ಲಿ ಮುದ್ದು ಮಕ್ಕಳನ್ನು ಶಾಲೆಗೆ ಕಳುಹಿಸಲು ಭಯವಾಗುತ್ತಿದೆ. ಸಂತೋಷ, ಸಂಭ್ರಮದಿಂದ ಹೋದ ಮಕ್ಕಳು ಮರಳಿ ಬಂದಾರೆ? ಎಂಬ ಹೆದರಿಕೆ ಹೆತ್ತವರನ್ನು ಕಾಡುತ್ತಿರುತ್ತದೆ. ದಿನಂಪ್ರತಿ ಎಂಬಂತೆ ಕೇಳಿ ಬರುತ್ತಿರುವ ಅಪಘಾತಗಳು ಎದೆ ಡವಗುಟ್ಟುವಿಕೆಯನ್ನು ಹೆಚ್ಚಿಸುತ್ತದೆ. ಸಹಪಾಠಿಗಳೊಂದಿಗೆ ಆಡಿ, ಕುಣಿದು ಮರಳುವ ಹಲವು ಪುಟಾಣಿಗಳು ಮನೆ ತಲುಪುವುದಿಲ್ಲ. ಬಾಗಿಲಲ್ಲಿ ಕಾದು ನಿಂತಿರುವ ಅಮ್ಮ, ಒಲೆಯಲ್ಲಿರುವ ಹಬೆಯಾಡುವ ಕಾಫಿ, ಬೆಕ್ಕಿನ ಮರಿಯ ತುಂಟಾಟವನ್ನೇ ಮನತುಂಬಾ ತುಂಬಿಕೊಂಡ ಮಕ್ಕಳು ಅತಿ ವೇಗದಿಂದ ನಿರ್ಲಕ್ಷ್ಯವಾಗಿ ಚಲಿಸುವ ವಾಹನಗಳ ಚಕ್ರದಡಿಗೆ ಸಿಲುಕಿ ಮರಣದೆಡೆಗೆ ಪ್ರಯಾಣ ಬೆಳೆಸುತ್ತದೆ. ಮುಂದಿನ ಪೀಳಿಗೆಗೆ ಉತ್ತಮ ಶಿಕ್ಷಣ ಗಳಿಸಲೆಂದು ಕಳಿಸುವಾಗ ಇರುವ ಭಯ ಎಂದು ನಿವಾರಣೆಯಾದೀತು?

ವಾಹನಗಳಲ್ಲಿ ಮಕ್ಕಳನ್ನು ಕಿಕ್ಕಿರಿದು ತುಂಬಿಸಿ ಅಪಾಯಕ್ಕೀಡು ಮಾಡುವ ವಾಹನ ಚಾಲಕರು. ಅವಸರ, ನಿರ್ಲಕ್ಷ್ಯ, ಉಡಾಫೆಯಿಂದ ತಮ್ಮ ಘನ ಜವಾಬ್ದಾರಿ ಮರೆತು ಬಿಡುವವರು ಇಂದು ಸಮಾಜಕ್ಕೆ ದೊಡ್ಡ ಶಾಪವಾಗಿದ್ದಾರೆ. ಇಂದು ಶಾಲಾವಾಹನಗಳು

ಕರ್ನಾಟಕಕ್ಕೆ ಮೂರನೇ ಸ್ಥಾನ



ಅಪಘಾತದಲ್ಲಿ ಕರ್ನಾಟಕವು ತಮಿಳುನಾಡು ಹಾಗೂ ಮಹಾರಾಷ್ಟ್ರದ ಬೆನ್ನಲ್ಲೇ ಮೂರನೆಯ ಸ್ಥಾನವನ್ನು ತನ್ನ ದಾಗಿಸಿಕೊಂಡಿದೆ. ನ್ಯಾಶನಲ್ ಕ್ರೈಮ್ ರೆಕಾರ್ಡ್ ಬ್ಯೂರೋದ ಅಂಕಿ ಅಂಶದಂತೆ ಕನಿಷ್ಠ 23 ಮಂದಿ ಪ್ರತಿದಿನ ಕರ್ನಾಟಕದಲ್ಲಿ ಅಪಘಾತದಿಂದ ನಿಧನ ಹೊಂದುತ್ತಾರೆ. ಅದರಲ್ಲೂ 5 ಮಂದಿ ಬೆಂಗಳೂರಿನಲ್ಲಿ ಸಾವನ್ನಪ್ಪುತ್ತಾರೆ.

ವರದಿಯು ಮುಂದುವರೆದಂತೆ, 2007ರಲ್ಲಿ 43,288 ಅಪಘಾತಗಳು ಸಂಭವಿಸಿದರೆ, 2007ರಲ್ಲಿ ಇದು 45,284ಕ್ಕೆ ಏರಿತ್ತು. 2007 ವರ್ಷದಲ್ಲಿ 18,686 ಮರಣಗಳು ರಾಜ್ಯದಲ್ಲಿ ದಾಖಲಾಗಿದ್ದರೆ, ಬೆಂಗಳೂರು ನಗರದಲ್ಲೇ 11,663 ಮರಣಗಳು ದಾಖಲಾಗಿದ್ದವು.

ಟ್ರಾಫಿಕ್ ಪೊಲೀಸರು ಇದಕ್ಕೆ ಹಲವು ಕಾರಣಗಳನ್ನು ಹೇಳುತ್ತಾರೆ, ರಸ್ತೆಗಳ ದುರವಸ್ಥೆಯಲ್ಲದೇ, ಅಗಲ ಕಿರಿದಾದ ರಸ್ತೆಗಳು, ಅಲ್ಲದೆ ವಾಹನಗಳ ದಟ್ಟಣೆಯೂ ಅಪಘಾತದ ಪ್ರಮುಖ ಕಾರಣನೆನ್ನುತ್ತಾರೆ.

ಬೆಂಗಳೂರಿನಂತಹ ಮಹಾನಗರದಲ್ಲಿ ವಾಹನಗಳ ವಿಪರೀತ ಏರಿಕೆಯು ಕಳೆದ 5 ವರ್ಷಗಳಲ್ಲಿ ಅಪಘಾತದ ಪ್ರಮುಖ ಕಾರಣವೆನ್ನಲಾಗುತ್ತಿದೆ. ಟ್ರಾಫಿಕ್ ತಜ್ಞರ ಪ್ರಕಾರ ಬೆಂಗಳೂರು ಮಹಾನಗರವು ಇಷ್ಟು ಪ್ರಮಾಣದ ವಾಹನ ದಟ್ಟಣೆಯನ್ನು ನಿರ್ವಹಿಸಲು ಶಕ್ತವಾಗಿಲ್ಲ.

ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಿರ್ದಿಷ್ಟ ಸಮಯಗಳಲ್ಲಿ ಸಂಚರಿಸುವುದೇ ಕಷ್ಟ. ತಮಿಳುನಾಡು ಕಡೆಗೆ ಸಂಚರಿಸುವ ಟ್ರಕ್‌ಗಳ ಪ್ರವಾಹವೇ ಮಾರ್ಗದಲ್ಲಿ ತುಂಬಿರುತ್ತದೆ. ಅದರ ಜೊತೆಗೆ ಅಷ್ಟೇ ಪ್ರಮಾಣದಲ್ಲಿ ತುಂಬಿರುವ ದ್ವಿಚಕ್ರ ವಾಹನಗಳು ಸಂಚಾರವನ್ನು ಇನ್ನೂ ದುರ್ಗಮಗೊಳಿಸುತ್ತದೆ.

ಅಪಘಾತದ ಪ್ರಮಾಣವನ್ನು ತಗ್ಗಿಸಲು ತಜ್ಞರು ಪ್ರಾಥಮಿಕ ಹೆಜ್ಜೆಯಾಗಿ ಅಪಘಾತ ಸ್ಥಳಗಳನ್ನು ಗುರುತಿಸಿ ಅದರ ಸಮಸ್ಯೆಗೆ ಪರಿಹಾರವನ್ನು ಹುಡುಕಲು ತೊಡಗಿದ್ದಾರೆ. ಬೆಂಗಳೂರು ನಗರದಲ್ಲಿ 94 ಅಪಘಾತ ಸ್ಥಳಗಳನ್ನು ಬೊಟ್ಟು ಮಾಡಿರುವ ತಂಡ ರಾಜ್ಯದಲ್ಲಿ ಸುಮಾರು 3,000 ವಲಯಗಳನ್ನು ಗುರುತಿಸಿದೆ.

ಅಪಘಾತದಿಂದ ಸುದ್ದಿ ಮಾಡುತ್ತಿರುತ್ತದೆ.

ಪ್ರತಿಯೊಂದು ಅಪಘಾತವಾಗುವಾಗ ನಮ್ಮಲ್ಲಿ ತಪಾಸಣೆಗಳು ಹಾಗೂ ಜನ ಜಾಗೃತಿ ನಡೆಯುತ್ತದೆ. ಆದರೆ ಅದು ಕೇವಲ ಎರಡು ಮೂರು ದಿನಗಳಿಗೆ ಸೀಮಿತವಾಗಿರುತ್ತದೆ. ಈ ಸುರಕ್ಷತೆ, ಭದ್ರತೆ, ಜಾಗ್ರತೆ ಎಲ್ಲವೂ... ಇನ್ನೊಂದು ಆಘಾತ ವಾಗುವ ವರೆಗೆ ನಿಶ್ಶಬ್ದ... ನಮ್ಮ ಈ ಅಸಡ್ಡೆ, ಸೋಮಾರಿತನಕ್ಕೆ ಕೊನೆಯೆಂದು?

ಶಾಲಾ ವಾಹನಗಳ ಸಂಚಾರಕ್ಕೆ ಸಂಬಂಧಿಸಿ ಶಿಕ್ಷಣ ಇಲಾಖೆ ಹೊರಡಿಸಿದ ಮಾರ್ಗನಿರ್ದೇಶನಗಳು.

1. ಶಾಲಾ ವಾಹನ ಸಂಚಾರವನ್ನು ನಿಯಂತ್ರಿಸಲು ಪಿ.ಟಿ.ಎ.ಯಿಂದ ಆಯ್ದ ಒಂದು ಕಮಿಟಿ ರೂಪಿಸಬೇಕು.

2. ಮೋನಿಟರಿಂಗ್ ಕಮಿಟಿಯು ಮುಖ್ಯೋಪಾಧ್ಯಾಯರಿಗೂ, ಪಿ.ಟಿ.ಎ.ಯ ಸದಸ್ಯರಿಗೂ ಆಗುಹೋಗುಗಳ ವಿವರ ಗಳನ್ನು ನೀಡುತ್ತಿರಬೇಕು.

3. ಶಾಲಾ ಒಡೆತನದಲ್ಲಿರುವ ವಾಹನಗಳು, ಮಕ್ಕಳನ್ನೂ ಕರೆತರುವ ಖಾಸಗಿ ವಾಹನಗಳ ಕುರಿತು ಶಾಲೆಗಳಲ್ಲಿ ರಿಜಿಸ್ಟರ್ ಮಾಡಿಡಬೇಕು.

4. ಚಾಲಕರ ಮತ್ತು ವಾಹನಗಳಲ್ಲಿ ಬರುವ ಮಕ್ಕಳ ವಿವರಗಳನ್ನು ದಾಖಲು ಮಾಡಬೇಕು. ಅಗತ್ಯವೆನಿಸಿದರೆ ಒಂದು ಪ್ರತಿಯನ್ನು ಪೊಲೀಸ್ ಠಾಣೆಗೆ ನೀಡಬೇಕು.

5. ಪ್ರತಿಯೊಂದು ಶಾಲೆಯಲ್ಲೂ ಶಾಲಾ ವಾಹನದ ಮೇಲುಸ್ತುವಾರಿಯನ್ನು ಶಾಲೆಯ ಶಿಕ್ಷಕ–ಶಿಕ್ಷಕಿಗೆ ವಹಿಸಿಕೊಡಬೇಕು. ಅವರಿಗೆ ಸಹಾಯ ಮಾಡಲು ಪಿ.ಟಿ.ಎ. ಸದಸ್ಯರಿಗೆ ಸೂಚಿಸಬೇಕು. ವಾರದಲ್ಲಿ ಒಂದು ದಿನ ಹೆಡ್‌ಮಾಸ್ಟರ್ ವಿವರಗಳನ್ನು ಪರಿಶೀಲಿಸಬೇಕು.

6. ಎಲ್ಲಾ ಶಾಲೆಗಳಲ್ಲೂ ಟ್ರಾಫಿಕ್ ಕ್ಲಬ್ ರೂಪಿಸಿ ಪೊಲೀಸರೊಂದಿಗೆ ಸಹಕರಿಸಿ ಕಾರ್ಯ ನಿರ್ವಹಿಸಬೇಕು.

7. ರಸ್ತೆ ಸುರಕ್ಷತೆಯ ಕುರಿತು ಜನ ಜಾಗೃತಿ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಏರ್ಪಡಿಸಬೇಕು.

8. ನದಿ, ಕೆರೆಗಳ ಬಳಿಯಲ್ಲಿ ಸರ್ವಿಸ್ ನಡೆಸುವ ಶಾಲಾ ವಾಹನಗಳಿಗೆ ವೇಗ ನಿಯಂತ್ರಕ ಅಳವಡಿಸಬೇಕು.

9. ವಾಹನಗಳ ಕ್ಷಮತೆಯನ್ನು ಕ್ರಮವಾಗಿ ಪರೀಕ್ಷಿಸುವ ವ್ಯವಸ್ಥೆಯಿರಬೇಕು. ಹಳತಾದ ವಾಹನಗಳಿಗೆ ಸಂಬಂಧಿಸಿ ನಿಯಮಗಳನ್ನು ಪಾಲಿಸಬೇಕು.

ಹೆತ್ತವರಿಗೆ ಕೆಲವು ಸೂಚನೆಗಳು:

ಮನೆಗೆ ಸಮೀಪವಿರುವ ಶಾಲೆಗೆ ಮಕ್ಕಳನ್ನು ಸೇರಿಸಿ. ಪ್ರತಿಷ್ಠೆಗಾಗಿ ದೂರ ವಿರುವ ಶಾಲೆಗೆ ಸೇರಿಸಬೇಡಿ. ಕಡಿಮೆ ದೂರವಿದ್ದರೆ ನಡೆದೇ ಹೋಗುವ ಅಭ್ಯಾಸ ಮಾಡಿಸಿ.

ಶಾಲೆ ದೂರದಲ್ಲಿದ್ದರೆ ಶಾಲಾವಾಹನ ಗಳಲ್ಲೇ ಕಳಿಸಿ. ಖಾಸಗಿ ವಾಹನವಾದರೆ ಪರಿಚಿತ ಚಾಲಕರನ್ನೇ ನಿಗದಿಪಡಿಸಿ.

ವಾಹನಗಳಲ್ಲಿ ಡೋರ್ ಕೀಪರ್ ಇರುವುದನ್ನು ದೃಢಪಡಿಸಿಕೊಳ್ಳಿ.

ವಾಹನದ ಸೀಟಿನಲ್ಲಿ ಅದರ ಸಾಮರ್ಥ್ಯಕ್ಕಿಂತ ಹೆಚ್ಚು ಮಕ್ಕಳಿಲ್ಲ ವೆಂಬುದನ್ನು ಖಚಿತಪಡಿಸಿ.

ವಿದ್ಯಾರ್ಥಿಗಳ ಗಮನಕ್ಕೆ...

* ದಿನಾಲೂ ವಾಹನ ಹೊರಡುವ ಮೊದಲು ಡ್ರೈವರ್ ಮಾಮನೊಡನೆ ಸೀಟ್ ಬೆಲ್ಟ್ ಧರಿಸಲು ಹೇಳಬೇಕು.

* ಮಿತಿಮೀರಿದ ವೇಗದಲ್ಲಿ ವಾಹನ ಓಡಿಸಲು ಒಪ್ಪಬಾರದು.

* ಚಾಲಕ ವಾಹನ ಓಡಿಸುವ ಸಂದರ್ಭದಲ್ಲಿ ಅಮಲು ಪದಾರ್ಥ ಉಪ ಯೋಗಿಸುತ್ತಾನೆ ಅಥವಾ ವೇಗವಾಗಿ ಓಡಿಸುತ್ತಾನೆ ಎಂದಾದರೆ ಶಿಕ್ಷಕರಿಗೆ ಅಥವಾ ಹೆತ್ತವರಿಗೆ ತಿಳಿಸಿ.

* ಚಾಲಕ ಮೊಬೈಲ್‌ನಲ್ಲಿ ಮಾತ ನಾಡುತ್ತಿದ್ದರೆ ಅದನ್ನು ಸಂಬಂಧ ಪಟ್ಟವರ ಗಮನಕ್ಕೆ ತರಬೇಕು.

ಕಾನೂನು ಪಾಲಕರ ಗಮನಕ್ಕೆ:

ಒಂದೊಂದು ಅಪಘಾತ ಸಂಭವಿಸು ವಾಗ ಮಾತ್ರ ನೀವು ತಪಾಸಣೆಗಳು, ಜಾಗೃತಿ ಕಾರ್ಯಕ್ರಮಗಳೊಂದಿಗೆ ರಂಗಕ್ಕಿಳಿಯು ತ್ತೀರಿ. ಆದರೆ ಈ ಸುರಕ್ಷತೆಯ ಹಾದಿ ಒಂದೆರಡು ದಿನಗಳು ಮಾತ್ರ ಇರುತ್ತದೆ. ನಂತರ ಎಲ್ಲಾ ಮೊದಲಿನಂತೆಯೇ ಇರು ತ್ತದೆ. ಇನ್ನೊಂದು ಆ ದೊಡ್ಡ ಅಪಘಾತ ಉಂಟಾಗುವ ವರೆಗೆ ಸುದ್ದಿಯೇ ಇಲ್ಲ. ಆದರೆ ಶಾಲಾ ವಾಹನಗಳನ್ನು ನಿಗದಿತವಾಗಿ ತಪಾಸಿಸಿ, ನಿಯಮವನ್ನು ಉಲ್ಲಂಘಿಸುವ ಚಾಲಕರಿಗೆ ದಂಡ ಹೇರಿದರೆ...? ಮನೆಯ ದಾರಿ ಮಧ್ಯೆ ಮಕ್ಕಳಿಗೆ ಅಂತ್ಯ ನಿದ್ರೆಗೆ ಶರಣಾಗಬೇಕಾಗಿಲ್ಲ.

ಶಾಲಾ ಬಸ್ಸಿನಲ್ಲಿ ಈ ಕೆಳಗಿನ ಪ್ರಾಥಮಿಕ ಅವಶ್ಯಕತೆ ಇರಬೇಕು.

1. ಶಾಲಾ ಬಸ್ಸಿನಲ್ಲಿ ಪ್ರಥಮ ಚಿಕಿತ್ಸೆಗೆ (First Aid kit) ಹಾಗೂ ಅಗತ್ಯದ ಮಾತ್ರೆ ಗಳು, ಡೆಟಾಲ್, ಕಾಟನ್ ಇತ್ಯಾದಿಗಳು ಹೊಂದಿರಬೇಕು.

2. ಚಾಲಕ ಹಾಗೂ ಕಂಡೆಕ್ಟರ್‌ಗೆ ಪ್ರಥಮ ಚಿಕಿತ್ಸೆಯ ಸರಿಯಾದ ಮಾಹಿತಿ ಇರಬೇಕು.

3. ಅನುಭವಿ ಚಾಲಕನನ್ನು ನೇಮಿಸ ಬೇಕು. ಶಾಂತ ಮನಸ್ಸಿನ, ಗಡಿಬಿಡಿ ಮಾಡದ ವ್ಯಕ್ತಿಯನ್ನೇ ನೇಮಿಸಿ. ■

ಅತ್ತ ಮಳೆಗಾಲ ಆರಂಭವಾಗುತ್ತಲೇ ರಸ್ತೆ ಅಪಘಾತಗಳ ಸಂಖ್ಯೆಯೂ ಹೆಚ್ಚುತ್ತಿದೆ. ಪ್ರತಿವರ್ಷವೂ ಸಾವಿರಾರು ಮಾನವ ಜೀವ ಗಳು ರಸ್ತೆಯಲ್ಲೇ ವಿಲವಿಲನೆ ಒದ್ದಾಡಿ ಸ್ತಬ್ಧ ವಾಗುತ್ತಿವೆ. ಯುದ್ಧ, ಸಾಂಕ್ರಾಮಿಕ ರೋಗ ಗಳಿಗಿಂತ ಹೆಚ್ಚಾಗಿ ಮಾನವನನ್ನು ವಾಹನ ಗಳೇ ಕೊಲ್ಲುತ್ತಿದೆಯೆಂಬುದು ದುರಂತ ಸತ್ಯ. ಗರ್ಭದಲ್ಲಿರುವ ಮಗುವಿನಿಂದ ಆರಂಭ ವಾಗಿ ಯಾವುದೇ ವಯೋಮಾನದ ವ್ಯಕ್ತಿ ಗಳನ್ನೂ ಇದು ಬಲಿ ತೆಗೆದುಕೊಳ್ಳುತ್ತದೆ. ವರ್ಷಂಪ್ರತಿ ಹೆಚ್ಚುತ್ತಿರುವ ವಾಹನಗಳ ಸಂಖ್ಯೆಯು ಸಂಚಾರ ದಟ್ಟಣೆಯುಂಟು ಮಾಡುತ್ತದೆ. ಅದರೊಂದಿಗೆ ಅಪಘಾತಗಳ ಸಂಖ್ಯೆಯೂ ಏರುತ್ತಲೇ ಇದೆ.

ದೇಶದಲ್ಲಿರುವ ವಾಹನಗಳಲ್ಲಿ 60% ದ್ವಿಚಕ್ರವಾಹನಗಳು. ಅಪಘಾತಗಳು ಹೆಚ್ಚಾಗಿ ದ್ವಿಚಕ್ರ ವಾಹನಗಳಲ್ಲಾಗುತ್ತದೆ. ಅಪಘಾತ ದಿಂದ ಉಂಟಾಗುವ ಮರಣಗಳಲ್ಲಿ ಬಹು ಪಾಲು ಮೆದುಳಿಗೆ ಬಿದ್ದ ಪೆಟ್ಟೇ ಕಾರಣ ವಾಗುತ್ತದೆ. ಅಮೇರಿಕಾ ಹಾಗೂ ಅದ ರಂತಹ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕಾರುಗಳ ಸಂಖ್ಯೆ ಕಡಿಮೆಯಾಗುತ್ತಿರುವಾಗ, ನಮ್ಮ ದೇಶದಲ್ಲಿ ಅದರ ಸಂಖ್ಯೆ ವರ್ಧಿಸು ತ್ತಲೇ ಇರುವುದು ಈ ದಶಕದಲ್ಲಿ ಕಂಡು ಬಂದಿರುವ ದೃಶ್ಯವಾಗಿದೆ. ಒಂದೆರಡು ದ್ವಿಚಕ್ರ ವಾಹನವೋ, ಕಾರುಗಳೋ ಇಲ್ಲ ದವರು ಇಂದು ವಿರಳವಾಗಿದ್ದಾರೆ. ವಾಹನ ಗಳು ಪ್ರತಿಷ್ಠೆಯ ಸಂಕೇತಗಳಾಗುತ್ತಿವೆ. ವರ ದಕ್ಷಿಣೆಯಾಗಿ ಕಾರು ಹಾಗೂ ಚಿನ್ನವಿಲ್ಲದ ವಿವಾಹಗಳು ಇಂದು ವಿರಳವಾಗಿ ಅಪ ಘಾತಗಳ ವಿವರಗಳಿಲ್ಲದ ವಾರ್ತೆಗಳೇ ಅಪ ರೂಪವಾಗಿದೆ. ವಾಹನ ಚಾಲಕರು ಹಾಗೂ ಅಧಿಕಾರಿಗಳು ಸ್ವಲ್ಪ ಗಮನಹರಿಸಿದರೆ ಹ ಲವು ಅಪ ಘಾ ತ ಗ ಳಿಂದ ನಾವು ಪಾರಾಗಬಹುದು.

ಅಪಘಾತಗಳ ಕುರಿತು ಚರ್ಚಿಸುವಾಗ ನಮ್ಮ ರಸ್ತೆಗಳ ಪಾತ್ರವೂ ಇದರಲ್ಲಿ ಮುಖ್ಯ ವಾಗಿರುವುದು ಕಂಡು ಬರುತ್ತದೆ. ಹಲವು ಕಡೆಗಳಲ್ಲಿ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಒಂದೊಂದು ಕಡೆ ರಸ್ತೆ ಗಳು ಎಲ್ಲಿವೆ ಎಂಬ ಸಂಶಯ ಮೂಡು ವುದು ಇದೆ. ಇದರಿಂದ ಅಪಘಾತಗಳು ಮಾತ್ರವಲ್ಲ ವಾಹನಗಳೂ ಹಾನಿಗೊಳಗಾಗು ತ್ತವೆ. ರಸ್ತೆಗಳ ದುರವಸ್ಥೆಗೆ ಹವಾಮಾನವನ್ನು ದೂರುವವರನ್ನು ಕಾಣುತ್ತೇವೆ. ಬೇಸಿಗೆಯಲ್ಲಿ ರಸ್ತೆಗಳಿಗೆ ತೇಪೆ ಹಚ್ಚಿದ್ದು, ಮಳೆಗಾಲವಾಗು ತ್ತಲೇ ಎದ್ದು ಬರುತ್ತದೆ. ಇದಕ್ಕಾಗಿ ಕೋಟಿ ಗಟ್ಟಲೆ ಹಣವನ್ನು ಬಿಡುಗಡೆ ಮಾಡುವ ಸರಕಾರಗಳು ಆ ಹಣವು ಯೋಗ್ಯ ರೀತಿ ಯಲ್ಲಿ ರಸ್ತೆಗಳ ನಿರ್ಮಾಣಕ್ಕೆ ಉಪಯೋಗ ವಾಗುತ್ತಿದೆಯೇ? ಎಂಬುದನ್ನು ತಿಳಿದುಕೊಳ್ಳ ಬೇಕು. ಭ್ರಷ್ಟ ಅಧಿಕಾರಿಗಳಿಂದ ತುಂಬಿರುವ ನಾವು ಸುದೃಢವಾದ ರಸ್ತೆಗಳನ್ನು ನಿರೀಕ್ಷಿಸು ವುದೇ ತಪ್ಪಾದೀತು. ಮಳೆಗಾಲಕ್ಕಿಂತ ಮೊದಲು ಸಮರೋಪಾದಿಯಲ್ಲಿ ಆರಂಭ ವಾಗುವ ರಸ್ತೆ ದುರಸ್ತಿ ಕಾರ್ಯವು ಮಳೆ ಗಾಲದಲ್ಲಿ ರಸ್ತೆಯನ್ನು ರಣರಂಗವಾಗಿಸು ತ್ತದೆ. 25 ವರ್ಷಗಳ ವರೆಗಾದರೂ ಬಾಳಿಕೆ ಬರುವ ರಸ್ತೆಗಳ ನಿರ್ಮಾಣವು ಇಂದಿನ ತುರ್ತು ಅಗತ್ಯವಾಗಿದೆ.

ವಾಹನಗಳನ್ನು ಓಡಿಸುವ ಪ್ರತಿ ಯೊಬ್ಬರೂ ರಸ್ತೆ ನಿಯಮಗಳನ್ನು ಪಾಲಿಸು ವುದು ಕಡ್ಡಾಯವಾಗಿದೆ. ಇಲ್ಲದಿದ್ದರೆ ಸ್ವಂತ

ರಸ್ತೆಗಳಲ್ಲಿ ರಕ್ತದೋಕುಳಿಯಾಗುವಾಗ

ಜೀವ ಮಾತ್ರವಲ್ಲ ಇತರರ ಜೀವಕ್ಕೂ ಸಂಚ ಕಾರವುಂಟಾಗುತ್ತದೆ. ಸಮೀಕ್ಷೆಯ ವರದಿ ಯಂತೆ ರಸ್ತೆ ಅಪಘಾತಗಳಲ್ಲಿ ಅತ್ಯಧಿಕ (99% ವರೆಗೆ) ವಾಹನ ಅಶ್ರದ್ಧೆ ಹಾಗೂ ಅತಿವೇಗದಿಂದಾಗುತ್ತದೆ. ಸಾವಿರದಲ್ಲಿ ಒಂದು ಅಪಘಾತ ಮಾತ್ರ ರಸ್ತೆಗಳ ಶೋಚನೀಯ ಸ್ಥಿತಿಯಿಂದಾಗುತ್ತದೆಯಂತೆ. ಆದರೆ ನಮಗೆ ಈ ಮಾತು ಅತಿಶಯೋಕ್ತಿಯಂತೆ ಕಂಡರೆ ಆಶ್ಚರ್ಯ ಪಡಬೇಕಾಗಿಲ್ಲ. ರಸ್ತೆಗಳ ದುರ ವಸ್ಥೆ, ಅಪಾಯಕಾರಿ ತಿರುವುಗಳು ಅಪಾಯ ಕಾರಿಯಾದ ಪಾರ್ಕಿಂಗ್ ವ್ಯವಸ್ಥೆ, ಅವೈಜ್ಞಾ ನಿಕವಾದ ದಿವೈಡರ್‌ಗಳು, ಪಾದಚಾರಿಗಳಿಗೆ ನಡೆಯುವ ಪ್ರತ್ಯೇಕ ಸ್ಥಳವಿಲ್ಲದಿರುವುದು. ರಸ್ತೆಗೆ ಸಮೀಪವೇ ಇರುವ ಮರಗಳು, ಪೋಸ್ಟರ್‌ಗಳು, ಜಾಹೀರಾತುಗಳು, ಚಾಲಕ ರಿಗೆ ಕಾಣದಂತಹ ಟ್ರಾಫಿಕ್ ಸಿಗ್ನಲ್‌ಗಳು. ಕಾವಲು ಇಲ್ಲದ ರೈಲ್ವೇ ಕ್ರಾಸ್‌ಗಳು, ವಾಹನ ಗಳ ಕಣ್ಣುಕುಕ್ಕುವ ಲೈಟ್ ಇವೆಲ್ಲವೂ ಅಪಘಾತ ಕಾರಣಗಳಲ್ಲಿ ಕೆಲವು ಮಾತ್ರ. ಪ್ರತಿಯೊಂದು ಅಪಘಾತಗಳು ಸಂಭವಿಸು ವಾಗಲೂ ಇಂತಹ ಹಲವು ಕಾರಣಗಳಿರ ಬಹುದಾದರೂ ತಪ್ಪನ್ನು ಚಾಲಕರ ಮೇಲೆ ಹೊರಿಸಿ ಅಧಿಕಾರ ಕೇಂದ್ರಗಳು ನುಣುಚಿ ಕೊಳ್ಳಲು ಪ್ರಯತ್ನಿಸುವುದರಿಂದ ಮುಂದೆ ಅಪಘಾತವಾಗದಂತೆ ಮಾಡುವ ಅವಕಾಶ ಗಳು ನಷ್ಟವಾಗುತ್ತದೆ. ಇದರ ಅರ್ಥ ವೇನೆಂದರೆ ಅಪಘಾತದಲ್ಲಿ ಚಾಲಕರ ಪಾತ್ರವೇ ಇಲ್ಲವೆಂದಲ್ಲ. ಕೆಲವು ಸುರಕ್ಷಾ ವಿಧಾನಗಳನ್ನು ಕಡ್ಡಾಯವಾಗಿ ಅಳವಡಿಸಿ ಕೊಂಡರೆ ಅಪಘಾತಗಳನ್ನು ಇನ್ನೂ ಕಡಿಮೆ ಗೊಳಿಸಬಹುದು.

ರಸ್ತೆಯಲ್ಲಿ ವಾಹನಗಳಿಗೆ ಹಾಗೂ ಪಾದಚಾರಿಗಳಿಗೆ ಸಮಾನವಾದ ಅವಕಾಶ ವಿದೆ. ಬಸ್ಸುಗಳ ಅತಿಯಾದ ವೇಗ, ಟಿಪ್ಪರ್ ಲಾರಿಗಳು ಮರಣದೆಡೆಗಿನ ಓಟ, ದ್ವಿಚಕ್ರ ವಾಹನಗಳಲ್ಲಿ ಅಭ್ಯಾಸ ಮಾಡುವುದನ್ನು ನಿಯಂತ್ರಿಸಬೇಕು. ಚಾಲಕರು ಇತರರ ಅಗತ್ಯಗಳನ್ನು ಗೌರವಿಸಬೇಕು. ಪಾದಚಾರಿ ಗಳ ಕುರಿತು ಸಾಧ್ಯವಾದಷ್ಟು ಗಮನಿಸಬೇಕು. ವೃದ್ಧರು, ಮಹಿಳೆಯರು, ಮಕ್ಕಳಿಗೆ ರಸ್ತೆ ದಾಟಲು ಅವಕಾಶ ನೀಡಬೇಕು.

ಅಪಾಯ ಸಾಧ್ಯತೆ ಇರುವ ಸ್ಥಳಗಳಲ್ಲಿ ಮೇಲು ಸೇತುವೆಗಳನ್ನು ನಿರ್ಮಿಸಿ, ತಿರುವುಗಳನ್ನು ಇಲ್ಲವಾಗಿಸಬೇಕು. ವಿಶೇಷ



ವಾಗಿ ದೇಶೀಯ–ರಾಜ್ಯಗಳ ಹೈವೇಗಳಲ್ಲಿ ವಾಹನ ತೆರಿಗೆಯಿಂದ ಸಿಗುವ ವರಮಾನ ದಲ್ಲಿ ಒಂದು ದೊಡ್ಡ ಮೊತ್ತವನ್ನು ಇದರ ಅಭಿವೃದ್ಧಿಗೆ ಉಪಯೋಗಿಸಬೇಕು.

ರಸ್ತೆ ತಡೆ ಉಂಟು ಮಾಡುವುದರಿಂದ ಸಾರ್ವಜನಿಕರು ಹಾಗೂ ಸಂಘಟನೆಗಳು ದೂರವಿರಬೇಕು. ಇದರಿಂದ ಒಳಿತಿಗಿಂತ ಕೆಡುಕೇ ಹೆಚ್ಚು.

ಕರ್ಕಶ ಹಾಗೂ ಕಿರುಚುವಂತಹ ಹಾರ್ನ್‌ಗಳನ್ನು ಉಪಯೋಗಿಸಬಾರದು. ಇವುಗಳನ್ನು ನಿಷೇಧಿಸಬೇಕು. ಅನುಮತಿ ನೀಡಲಾಗುವ ಹಾರ್ನ್‌ಗಳ ಕುರಿತು ತಜ್ಞ ರಿಂದ ತಿಳಿದು ಜಾರಿಗೊಳಿಸಬೇಕು. ನಿಯಮ ಗಳನ್ನು ಉಲ್ಲಂಘಿಸುವವರ ಲೈಸೆನ್ಸನ್ನು ನಿರ್ದಿಷ್ಟ ಅವಧಿಗೆ ಅಮಾನತುಗೊಳಿಸಬೇಕು. ದಂಡ ವಸೂಲಿಗಿಂತ ಇದು ಖಂಡಿತ ವಾಗಿಯೂ ಪರಿಣಾಮ ಬೀರುತ್ತದೆ.

ನಿರಂತರವಾಗಿ ವಾಹನ ಅಪಘಾತ ಸಂಭವಿಸುವ ಚಾಲಕರ ಲೈಸೆನ್ಸ್ ರದ್ದುಪಡಿ ಸುವ ಶಿಕ್ಷಾ ಕ್ರಮಗಳು ವ್ಯಾಪಕವಾಗಬೇಕು.

ಜನಸಂದಣಿ ಇರುವ ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಹೆಚ್ಚಿಸಬೇಕು. ಪಾರ್ಕಿಂಗ್‌ಗಾಗಿ ಅಧಿಕ ವಸೂಲಿಯನ್ನು ನಿಲ್ಲಿಸಬೇಕು. ವಾಹನಕ್ಕೆ ತೆರಿಗೆ ನೀಡುವ ವರಿಗೆ ಇಂತಹ ಸೌಕರ್ಯ ಮಾಡಿಕೊಡು ವುದು ತಮ್ಮ ಕರ್ತವ್ಯವೆಂದು ಅಧಿಕಾರಿಗಳು ತಿಳಿದುಕೊಳ್ಳಲಿ.

ಪ್ರಯಾಣದ ಸೌಕರ್ಯವನ್ನು ಹೆಚ್ಚಿಸ ಬೇಕು. ಸಾಧಾರಣ ಬಸ್ಸುಗಳಿಂದ ಲಕ್ಸುರಿ ಬಸ್ಸುಗಳು ಎಲ್ಲಾ ಜಿಲ್ಲೆಗಳಿಗೂ ವ್ಯಾಪಕ ವಾಗಬೇಕು.

ಜನದಟ್ಟಣೆಯಿರುವ ನಗರಗಳಲ್ಲಿ ಮೋನೋ ಟ್ರೈನ್, ಮಾಸ್ ಟ್ರಾನ್ಸ್‌ಪೋರ್ಟ್ ಸೌಕರ್ಯಗಳನ್ನು ಅತಿ ವೇಗವಾಗಿ ಸಮಯ ನಿರ್ಬಂಧಿತವಾಗಿ ಮಾಡಬೇಕು. ಇಂತಹ ಯೋಜನೆಗಳನ್ನು ಜಾರಿ ಗೊಳಿಸಲು ಇಚ್ಛಾಶಕ್ತಿ ಹಾಗೂ ಅರ್ಪಣಾ ಮನೋಭಾವದಿಂದ ಕಾರ್ಯ ಪ್ರವೃತ್ತರಾಗಬೇಕು.

ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಕಡ್ಡಾಯಗೊಳಿಸುವುದು. ಇದು ಕೇವಲ ಕಾನೂನೆಂದು ಮಾತ್ರವಲ್ಲ. ಜನಜಾಗೃತಿಯ ಮೂಲಕ ತಾವೇ ಸ್ವಯಂ ಧರಿಸುವಂತಾಗಲು ಯುವ ಜನಾಂಗವನ್ನು ಪ್ರೇರೇಪಿಸಬೇಕು.

ಮುಂದೆಯಿರುವ ವಾಹನಕ್ಕಿಂತ ನಿಶ್ಚಯಿಸಿದಷ್ಟು ಸ್ಥಳ ಬಿಟ್ಟು ವಾಹನ ಚಲಾಯಿಸಬೇಕು. ಹಿಂದಿನ ವಾಹನಗಳಿಗೆ ಅಗತ್ಯವಿದ್ದರೆ ದಾರಿ ಮಾಡಿಕೊಡಿ. ಸ್ಪರ್ಧಾ ಮನೋಭಾವನ್ನು ಸಂಪೂರ್ಣ ತೊರೆಯಿರಿ. ರಾತ್ರಿ ಕಾಲದಲ್ಲಿ ಬರುವ ವಾಹನಗಳಿಗೆ ದೀಪವನ್ನು ಮಂದಗೊಳಿಸಿ ಸಹಾಯ ಮಾಡಿ. ಮಳೆಗಾಲದಲ್ಲಿ ವಾಹನಗಳ ವೇಗವನ್ನು ತಗ್ಗಿಸುವುದು ಉತ್ತಮ.

ಚಾಲಕರಿಗೆ ವಾಹನಗಳ ವಿಶ್ರಾಂತಿಗಾಗಿ ಸಮಯ ಮಾಡಿಕೊಡಿ. ನಿರಂತರವಾಗಿ 3–4 ಗಂಟೆ ಡ್ರೈವ್ ಮಾಡಿದರೆ ಸ್ವಲ್ಪ ವಿಶ್ರಾಂತಿ ಪಡೆಯಿರಿ.

ಮುಂಜಾವಿನಲ್ಲಿ ಡ್ರೈವಿಂಗ್‌ನಿಂದ ಸಾಧ್ಯವಿರುವಷ್ಟು ದೂರವಿರಿ. ಎಷ್ಟು ಶ್ರಮಿಸಿದರೂ ನಿದ್ದೆಯು ಆವರಿಸುವ ಸಮಯವದು. ಒಂದು ನಿಮಿಷದ ನಿದ್ದೆ ದೊಡ್ಡ ದುರಂತಕ್ಕೆ ಕಾರಣವಾಗುತ್ತದೆ. ಹೆಲ್ಮೆಟ್, ಜಾಕೆಟ್‌ಗಳಲ್ಲಿ ರಿಫ್ಲೆಕ್ಟರ್ ಅಂಟಿಸಿ. ಡಿವೈಡರುಗಳಿಗೆ ಕೆಂಪು ಬಿಳಿ ಸೇರಿದ ರಿಫ್ಲೆಕ್ಟರ್ ಪೇಂಟಿಂಗ್ ಕಡ್ಡಾಯಗೊಳಿಸಿ.

ಟ್ರಾಫಿಕ್ ನಿಯಮಗಳನ್ನು ಪಾಲಿಸಿ. ಅದನ್ನು ಪಾಲಿಸುವುದು ತಮ್ಮ ಕರ್ತವ್ಯ ವೆಂದು ತಿಳಿಯಿರಿ. ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ಪಾರ್ಕ್ ಮಾಡಿ.

ವೇಗ ನಿಯಂತ್ರಣದ ನಿಯಮಗಳನ್ನು ಪಾಲಿಸಿ. ಆದರೆ ಕಾನೂನು ಮಾಡುವವರು ವಾಸ್ತವವನ್ನು ತಿಳಿದು ವೇಗ ನಿಯಂತ್ರಣ ವನ್ನು ನಿಗದಿಪಡಿಸಬೇಕು.

ಮದ್ಯಪಾನ ಮಾಡಿ ವಾಹನ ಚಲಾ ಯಿಸಬಾರದು. ಅಪಘಾತಗಳಿಗೆ ಮದ್ಯ ಸೇವನೆಯು ಪ್ರಮುಖ ಕಾರಣವಾಗಿದೆ. ■

ಅಮ್ಮಾ... ನಾನು ಕದ್ದಿಲ್ಲ

ತಾಯಿ ಮತ್ತು ಮಕ್ಕಳ ನಡುವಿನ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಪ್ರೀತಿಯ ಹಲವು ರೂಪಗಳು ಕಪಟವಾಗಿದ್ದರೂ ಈ ಪ್ರೀತಿಯು ನಿಷ್ಕಳಂಕವಾಗಿರುತ್ತದೆ. ಮಕ್ಕಳಿಗೆ ನಾನಾ ಕಾರಣಗಳಿಂದ ತಾಯಿಯೊಂದಿಗೆ ಪ್ರೀತಿ ಕಡಿಮೆಯಾದರೂ ತಾಯಿಗೆ ಮಾತ್ರ ಮಕ್ಕಳೊಂದಿಗೆ ಪ್ರೀತಿ ಹೆಚ್ಚಾಗುತ್ತಿರುತ್ತದೆ. ಅದು ಜೀವನದ ಕೊನೆಯವರೆಗೂ ಹಾಗೇ ಮುಂದುವರಿಯುತ್ತದೆ. ತಾಯಿಯು ಮಕ್ಕಳಿಗೋಸ್ಕರ ಸಿಕ್ಕಾಪಟ್ಟೆ ಕಷ್ಟ ಅನುಭವಿಸುತ್ತಾಳೆ. ತಾಯಿಯ ಪ್ರಾರ್ಥನೆಯ ವಸ್ತುವಾಗಿ ಯಾವಾಗಲೂ ಮಕ್ಕಳು ಸ್ಥಾನ ಪಡೆದಿರುತ್ತಾರೆ. ಇಂದು ನಾವು ಹೊರಗಡೆ ಹೋಗಿ ಅಥವಾ ಯಾವುದಾದರೂ ವಾಹನದಲ್ಲಿ ಸುತ್ತಾಡಿ ಸುರಕ್ಷಿತವಾಗಿ ಮನೆಗೆ ತಲುಪುವುದಿದ್ದರೆ ಅದು ತಾಯಿಯ ಪ್ರಾರ್ಥನೆಯ ಫಲ ಎಂದೇ ನಾನು ನಂಬುತ್ತೇನೆ. ಯಾಕೆಂದರೆ ಅವಳ ಪ್ರಾರ್ಥನೆಯಲ್ಲಿ ಸ್ವಾರ್ಥ ಇರುವುದಿಲ್ಲ. ಮಕ್ಕಳಿಗಾಗಿ ಮಿಡಿಯುವ ಹೃದಯದಿಂದ ಹೊರಡುವ ಪ್ರಾರ್ಥನೆಯು ತೀಕ್ಷ್ಣವಾಗಿರುತ್ತದೆ.

ಮಕ್ಕಳು ಸಂಕಷ್ಟ ಅನುಭವಿಸುವಾಗ ಅವರಿಗೆ ನೆನಪಾಗುವುದು ತಾಯಿಯದ್ದಾಗಿದೆ. ತಾಯಿಯ ಸಾಂತ್ವನದ ನುಡಿಗಳು ಅವರ ಅರ್ಧ ಸಂಕಷ್ಟವನ್ನು ದೂರ ಮಾಡುತ್ತವೆ.

ಇಮ್ತಿಯಾಝ್ ಪೆರ್ಲ

ಈ ಘಟನೆಯನ್ನೊಮ್ಮೆ ಓದಿ ನೋಡಿ.(ಇದು ಸಂಗ್ರಹಿತ ಘಟನೆಯಾದ್ದರಿಂದ ಇಲ್ಲಿ 'ನಾನು' ಎಂಬ ಪದವನ್ನು ಬಳಸಿದ್ದೇನೆ). ಒಂದು ವರ್ಷದ ಹಿಂದೆ ನಡೆದ ಘಟನೆ. ಗೆಳೆಯರೊಂದಿಗೆ ಗೋವಾಕ್ಕೆ ಹೋಗಿ ಮರಳುವಾಗ ನಡೆದ ಕಣ್ಣೀರಿನ ಕಥೆಯಿದು! ಗೋವಾದಿಂದ ಕಲ್ಲಿಕೋಟೆಗಿರುವ ಟ್ರೈನ್ ನಿಮಿಷಗಳ ವ್ಯತ್ಯಾಸದಿಂದ ತಪ್ಪಿ ಹೋಯಿತು. ಮನೆಗೆ ಬೇಗನೇ ತಲುಪಬೇಕು ಎಂಬ ತವಕದಿಂದ ಮೊದಲು ಬಂದ ಮಂಗಳೂರು ಕಡೆಗಿರುವ ಗಾಡಿ ಹತ್ತಿ ಮಂಗಳೂರು ತಲುಪಿದೆವು. ಆಗ ರಾತ್ರಿ 11ರ ಸಮಯ. ಜನ ಸಂದಣಿ ಅಷ್ಟೇನೂ ಇರಲಿಲ್ಲ. ಕಲ್ಲಿಕೋಟೆಗಿರುವ ಟ್ರೈನಿನ ಕುರಿತು ಅಲ್ಲಿ ವಿಚಾರಿಸಿದಾಗ, ಮುಂಜಾನೆ 6 ಗಂಟೆಗೆ ಎಂಬ ಕಳವಳಕಾರಿ ಉತ್ತರ ಸಿಕ್ಕಿತು. ನಾವು ಸ್ಟೇಶನಿನಲ್ಲಿ ನಿಂತು, ಕುಳಿತು, ನಡೆದು, ಲ್ಯಾಪ್‌ಟಾಪಿನಲ್ಲಿ ಗೇಮ್ ಆಡಿ ಸಮಯ ಕಳೆದೆವು. ರಾತ್ರಿ ಮೂರು ಗಂಟೆಯ ಸಮಯ....

ವಿಶ್ರಾಂತಿ ಕೊಠಡಿಯ ಕುರ್ಚಿಯೊಂದ

ರಲ್ಲಿ ನಿದ್ರೆಗೆ ಜಾರಿದ ನಾನು ಮಹಿಳೆ ಯೋರ್ವಳ ಕಿರುಚಾಟದಿಂದ ಥಟ್ಟನೆ ಎಚ್ಚೆತ್ತುಕೊಂಡೆ. "ದೇವರೇ ನನ್ನ ಸರ ಕಾಣುತ್ತಿಲ್ಲ" ಎಂದು ಅವಳು ಬೊಬ್ಬೆ ಹೊಡೆಯುತ್ತಿದ್ದಳು. ಏನು ಎಂದು ತಿಳಿಯದೆ ಸೇರಿದ್ದ ಗುಂಪಿನ ಕಡೆಗೆ ನಾನು ಓಟಕ್ಕಿತ್ತೆ. ಅಲ್ಲಿ ಸೇರಿದ್ದ ಜನರ ಮಾತಿನಲ್ಲಿ ಸರಕಳ್ಳತನ ನಡೆದಿದೆ ಎಂದು ತಿಳಿಯಿತು. ಅವರು ಯಾವುದೋ ತೀರ್ಥಕ್ಷೇತ್ರಕ್ಕೆ ಹೋಗಿ ಮರಳುವವರಾಗಿದ್ದರು. ಈ ಮಹಿಳೆ ಅಳು ನಿಲ್ಲಿಸಲಿಲ್ಲ. ಪತಿಯು ಅತ್ತಿತ್ತ ನಡೆಯುತ್ತಾ ಯಾರ್ಯಾರನ್ನೋ ನೋಡುತ್ತಿದ್ದಾನೆ. ಓರ್ವ ಕಪ್ಪು ಅಂಗಿ ಧರಿಸಿದ ಕಳ್ಳನ ಮುಖಭಾವ ಹೊಂದಿದ್ದ ಒಬ್ಬ ಹುಡುಗನು ಅತ್ತಿತ್ತ ಅಲೆಯುತ್ತಿದ್ದುದನ್ನು ನಾನು ನೋಡಿದ್ದೇನೆ ಎಂದು ಗುಂಪಿನಲ್ಲಿದ್ದ ಯಾರೋ ಹೇಳಿದರು. ಅಂತಹ ಚಹರೆ ಹೊಂದಿದ ಹುಡುಗನನ್ನು ಹುಡುಕುತ್ತಾ ಎಲ್ಲರ ಕಣ್ಣುಗಳೂ ಅತ್ತಿತ್ತ ಹರಿದಾಡಿದವು. ಆದರೆ ಫಲಿತಾಂಶ ಶೂನ್ಯ.

ಸಮಯವು ಮುಂದೆ ಸಾಗುತ್ತಿತ್ತು.....

ನಾನು ಮತ್ತು ಗೆಳೆಯ ಕುಳಿತು ಲ್ಯಾಪ್ ಟಾಪ್‌ನಲ್ಲಿ ಸೀಡಿ ನೋಡುತ್ತಿದ್ದೆವು. ಆಗ ನನ್ನ ಬಳಿ ಕುಳಿತಿದ್ದ ಓರ್ವ ವ್ಯಕ್ತಿಯು ನನ್ನನ್ನು ಕರೆಯುತ್ತಾ ಹೇಳಿದನು: "ಇಲ್ಲಿ ಕುಳಿತಿದ್ದದ್ದು ಆ ಹುಡುಗ ಅಂತ ಕಾಣುತ್ತೆ. ವಿಚಾರಿಸಿ." ನಾನು ನೋಡಿದೆ. ಕಪ್ಪು ಅಂಗಿ ಧರಿಸಿದ ಒಬ್ಬ ಹುಡುಗ ನಡೆದುಕೊಂಡು ಹೋಗುತ್ತಿದ್ದನು. ತಡ ಮಾಡದೆ ಆ ಮಹಿಳೆಯ ಗಂಡನಿಗೆ ಮಾಹಿತಿ ನೀಡಿದೆ. ಇದನ್ನು ಕೇಳಿದ್ದೇ ತಡ ಅವನು ಹುಡುಗನನ್ನು ಹಿಡಿಯಲು ಹೊರಗೋಡಿದನು. ಅವ ನೊಂದಿಗೆ ಹಲವರು ಸೇರಿಕೊಂಡರು. ಲ್ಯಾಪ್‌ಟಾಪನ್ನು ಮಡಚಿ ನಾನೂ ಕೂಡಾ ಎಲ್ಲರಂತೆ ಓಡಿದೆ. ಆಗಲೇ ಅವರು ಆ ಹುಡುಗನನ್ನು ಹಿಡಿದಾಗಿತ್ತು. ನಾನು ಹುಡುಗನನ್ನೇ ನೋಡಿದೆ. 20ರ ಹರೆಯ ಇರಬಹುದು. ಬಿಳಿ ಮೈ ಬಣ್ಣ, ಅವನು ವಿಪರೀತ ಬೆವರಿದ್ದನು.

"ನೀನಲ್ಲವೇ ಇಲ್ಲಿ ಬಂದು ಸರ ಕದ್ದದ್ದು?" ಜನರು ನಾಲ್ಕು ಭಾಗಗಳಿಂದಲೂ ಎಳೆದಾಡುತ್ತಾ ಅವನನ್ನು ವಿಚಾರಿಸಿದರು. "ಇಲ್ಲ, ನಾನು ಕದ್ದಿಲ್ಲ, ನಾನು ಈಗ

ಅಣಕ

ಕಣ್ಣಂಚಿನ ಹನಿಯೊಂದು
ಕೆನ್ನೆಗುರುಳುತ್ತಾ ನನ್ನನ್ನು
ಅಣಕಿಸಿ ಕೇಳಿತು
ನೀನೆಂತಹಾ ಮಹಿಳೆ
ನನ್ನ ಹುಟ್ಟು ಹಾಕಿ
ತೋರಿದೆಯೆಲ್ಲಾ ಜಗಕೆ
ಹೆಣ್ಣು ನಿಜವಾಗಲೂ ಅಬಲೆ
ಎಂದು

ಡಾ। ಮಕ್ಸೂದ್ ಅಹ್ಮದ್,
ಬೆಂಗಳೂರು

ಇಲ್ಲಿಗೆ ಬರುತ್ತಿದ್ದೇನಷ್ಟೇ" ಕಣ್ಣೀರು ಸುರಿಸುತ್ತಾ ಅವನು ಹೇಳಿದನು. "ಸುಳ್ಳು ಹೇಳುತ್ತಿದ್ದೀಯಾ ನನ್ಮಗನೇ" ಎಂದು ಆ ಮಹಿಳೆಯ ಗಂಡನು ಅವನ ಮುಖಕ್ಕೊಂದು ಏಟು ನೀಡಿದನು. ಇದನ್ನು ಕಂಡದ್ದೇ ತಡ ಇತರರೂ ಕೂಡಾ ತಮ್ಮ ಕೈಲಾದುದನ್ನು ನೀಡಿದರು. ಪ್ರತೀ ಒದೆ ಬೀಳುವಾಗಲೂ "ನಾನು ಕದ್ದಿಲ್ಲ... ದೇವರಾಣೆಗೂ ನಾನು ಕದ್ದಿಲ್ಲ... ನನ್ನನ್ನು ಹೊಡೆಯಬೇಡಿ" ಎಂದು ಬೇಡುತ್ತಿದ್ದನು. ಜನರಿಗೆ ಅವನ ಕೂಗು ಕೇಳಿಸಲೇ ಇಲ್ಲ. ಏಟು ಜೋರಾಗಿ ಬೀಳ ತೊಡಗಿದಾಗ ಅವನು ಓಡುವ ವಿಫಲ ಪ್ರಯತ್ನ ನಡೆಸಿದನು. ಇದರಿಂದಾಗಿ ಏಟಿನ ವೇಗವು ಹೆಚ್ಚತೊಡಗಿ ಅವನ ಬಾಯಿಯಿಂದ ರಕ್ತ ಒಸರತೊಡಗಿತು. ಆಗಲೂ ಅವನು "ನಾನು ಕದ್ದಿಲ್ಲ... ನನ್ನ ತಾಯಿಯಾಣೆ ನಾನು ಕದ್ದಿಲ್ಲ" ಎಂದು ಅಳುತ್ತಿದ್ದನು. ಇದನ್ನೆಲ್ಲಾ ನೋಡುತ್ತಿದ್ದ ನಾನು ಕೇವಲ ಮೂಕ ಪ್ರೇಕ್ಷಕನಾದೆ.

ಯಾರೋ ಪೊಲೀಸರಿಗೆ ಸುದ್ದಿ ಮುಟ್ಟಿ ಸಿದ್ದರಿಂದ ರೈಲ್ವೇ ಪೊಲೀಸರ ಆಗಮನ ವಾಯಿತು. ಜನರು ಸರಿದು ದಾರಿ ಮಾಡಿ ಕೊಟ್ಟರು. ಪೊಲೀಸರು ಅವನೊಂದಿಗೆ ವಿಚಾರಿಸಿದಾಗಲೂ ಅವನು "ಸಾರ್ ನಾನು ಕದ್ದಿಲ್ಲ. ಈಗಷ್ಟೇ ನಾನು ಈ ದಾರಿಯಾಗಿ ಬಂದದ್ದು" ಎಂದು ಉತ್ತರಿಸಿದನು.

"ನೀನು ಎತ್ತ ಹೋಗುವುದಕ್ಕಾಗಿ ಇತ್ತ ಬಂದೆ" ಪೊಲೀಸಿನವನು ಕೇಳಿದನು.

"ಸಾರ್, ನಾನು ಈ ಮಾರ್ಕೆಟಿನಲ್ಲಿ ತರಕಾರಿಯ ಲಾರಿಯಿಂದ ತರಕಾರಿ ಇಳಿಸಿ ರೂಮಿಗೆ ಹೋಗುವಾಗ ಚಾ ಕುಡಿಯಲು ಈ ದಾರಿಯಾಗಿ ಬಂದೆ... ನನ್ನ ಕೊಠಡಿ ಅಲ್ಲಿದೆ" ಎಂದು ದೂರದಲ್ಲಿದ್ದ ಕಟ್ಟಡದ ಕಡೆಗೆ ಬೆರಳು ತೋರಿಸುತ್ತಾ ಹೇಳಿದನು.

"ಚಹಾ ಕುಡಿಯಲು ಬಂದದ್ದಂತೆ" ಎಂದು ಆರ್ಭಟಿಸುತ್ತಾ ಆ ಮಹಿಳೆಯ ಗಂಡ ಅವನ ತಲೆಗೆ ಬಲವಾಗಿ ಹೊಡೆದನು. ಅವನು ಏಟು ತಾಳಲಾರದೆ ಕೆಳಗೆ ಕುಸಿದನು.

ಪೊಲೀಸರು ಆ ಹುಡುಗನನ್ನು ವಿಚಾರಣೆಗೆ ಒಳಪಡಿಸಿದರು.... ಅವನ ಮನೆ ಕಾಸರಗೋಡಿನಲ್ಲಿ. ಕಳೆದ ಎರಡು ತಿಂಗಳಿನಿಂದ ಸಮೀಪದ ಅಂಗಡಿಗಳಿಗೆ ಬರುವ ತರಕಾರಿಗಳನ್ನು ಲಾರಿಯಿಂದ ಇಳಿಸುವ ಕೆಲಸ ಮಾಡುತ್ತಿದ್ದಾನೆ. ಮನೆ ಯಲ್ಲಿರುವ ತಾಯಿ ಮತ್ತು ತಂಗಿಯನ್ನು ಸಾಕಲಿಕ್ಕಾಗಿ ಈ ಕೆಲಸಕ್ಕೆ ಸೇರಿದ್ದಾನೆ. ಇವಿಷ್ಟು ವಿಚಾರಣೆಯಿಂದ ತಿಳಿದು ಬಂದ ವಿಚಾರಗಳು. ಬಳಿಕ ಪೊಲೀಸಿನವನು ಹೇಳಿದನು: "ನೀನು ಸರ ಕದ್ದಿದ್ದರೆ ಅದನ್ನು ಮರಳಿಸು. ಸುಮ್ಮನೆ ಯಾಕೆ ಒದೆ ತಿನ್ನುತ್ತೀ?" "ನಾನು ಕದ್ದಿಲ್ಲ ಸಾರ್. ದೇವರಾಣೆಗೂ ನಾನು ಕದ್ದಿಲ್ಲ" ಅವನು ಕಣ್ಣೀರು ಸುರಿಸುತ್ತಾ ಕೈ ಮುಗಿದು ಬೇಡಿಕೊಂಡನು.

"ಇವನು ಕದಿಯುವುದನ್ನು ನೋಡಿದವ ರಿದ್ದಾರೆಯೇ?" ಪೊಲೀಸರು ಕೇಳಿದರು. "ಇವನು ಇಲ್ಲಿ ಸುತ್ತಾಡುತ್ತಿರುವುದನ್ನು ಒಬ್ಬನು ನೋಡಿದ್ದಾನೆ" ಎಂದು ಹೇಳುತ್ತಾ ಆ ಮಹಿಳೆ ಮತ್ತು ಆಕೆಯ ಗಂಡ ಪೊಲೀಸರೊಂದಿಗೆ ವಿಶ್ರಾಂತಿ ಕೊಠಡಿಯ ಕಡೆಗೆ ಹೆಜ್ಜೆ ಹಾಕಿದರು. ಆ ಹುಡುಗನನ್ನು ನೋಡಿದವನು ಅಲ್ಲೆಲ್ಲೂ ಕಾಣಲಿಲ್ಲ. "ಎಲ್ಲಿ ಅವನು?" ಪೊಲೀಸರು ಕೇಳಿದರು. "ಲ್ಯಾಪ್‌ಟಾಪ್ ಬಿಡಿಸಿ ಕುಳಿತ ಒಬ್ಬ ಯುವಕನೂ ನೋಡಿದ್ದಾನೆ" ಯಾರೋ ಹೇಳಿದರು. ಅವನು ಹೇಳಿದ್ದು ನನ್ನ ಕುರಿತಾಗಿತ್ತು. "ನಾನು ಕಂಡಿಲ್ಲ. ಇವನು ಹೇಳಿದ್ದನ್ನು ಅವರಿಗೆ ತಿಳಿಸಿದ್ದೇನಷ್ಟೇ" ಎಂದು ಹೇಳಲು ಮುಂದಾದೆ.

ಅವನು ಕದ್ದಿದ್ದಾನೆಯೇ ಎಂದು ನನಗೆ

ಹೇಳಲು ಅಸಾಧ್ಯ. ಯಾಕೆಂದರೆ ಅವನು ತೆಗೆಯುವುದನ್ನು ನಾನು ನೋಡಿಲ್ಲ. ಈಗ ನನಗೆ ಏನೂ ಹೇಳಲಾಗದ ಸ್ಥಿತಿ. ಈ ಜನರ ಗುಂಪಿನ ಮಧ್ಯೆ ನಾನು ಮೌನಿಯಾದೆ. ಕದ್ದವನು ಸಿಗದಿದ್ದರೆ ಸಿಕ್ಕಿದವನನ್ನು ಕಳ್ಳನಾಗಿಸುವ ಕಾಲವಲ್ಲವೇ ಇದು!

ಇವನು ಕದಿಯುವುದನ್ನು ನಾನು ನೋಡಿಲ್ಲ..... ಎಂದು ಹೇಳಲು ಮುಂದಾದಾಗ, ಆ ಮಹಿಳೆಯ ಗಂಡನು ಮತ್ತೊಮ್ಮೆ ತನ್ನ ಅಭಿಪ್ರಾಯವನ್ನು ಘೋಷಿಸಿದನು. "ಇವನಿಗೆ ಇನ್ನೆರಡು ಬಿಗಿದರೆ ಬಾಯಿ ಬಿಡ್ತಾನೆ ಸಾರ್" ಇದನ್ನು ಕೇಳಿದ್ದೇ ತಡ ಅವನು ಪೊಲೀಸರ ಕೈಯಿಂದ ತಪ್ಪಿಸಿ ಓಡಿದನು. ಜನರೂ ಅವನ ಹಿಂದೆ ಓಡಿದರು. ನಾವು ಅಲ್ಲಿಯೇ ನಿಂತೆವು. ಅವನು ಓಡಿದ ಕಾರಣಕ್ಕಾಗಿ ಎಲ್ಲರೂ ಅವನನ್ನು ಕಳ್ಳನೆಂಬ ಪಟ್ಟ ಕಟ್ಟಿ ಬಿಟ್ಟರು. ನನಗೆ ಅವನ ಕಣ್ಣೀರೇ ಕಣ್ಮುಂದೆ ಬರುತ್ತಿತ್ತು. "ನಾನು ಕದ್ದಿಲ್ಲ" ಎಂಬ ರೋದನವು ನನ್ನ ಕಿವಿಯಲ್ಲಿ ಮಾರ್ದನಿಸುತ್ತಿತ್ತು.

ಮುಂಜಾನೆ 5:30ರ ಸಮಯ....

ನಾವು ಹೋಗಬೇಕಾದ ಕಲ್ಲಿಕೋಟೆ ಟ್ರೈನ್ ಬಂತು. ನಾವು ಟ್ರೈನ್ ಹತ್ತಿ ಕುಳಿತು ನಾನು ನೀರಿಗಾಗಿ ಬಾಟಲಿ ಹಿಡಿದು ಹೊರಟೆ. ಸ್ವಲ್ಪ ಮುಂದೆ ಸಾಗಿದಾಗ, ಕತ್ತಲೆ ತುಂಬಿದ ಜಾಗವೊಂದರಿಂದ ಕ್ಷೀಣ ಅಳುವೊಂದು ಕೇಳಿಸಿತು. ನಾನು ಮೆಲ್ಲನೆ ಮುಂದೆ ಸಾಗಿದೆ. ಅದು ಅವನು.... ಜನರ ಮುಂದೆ ಕಳ್ಳನಾದವನು... ಅವನು ಅಳುತ್ತಾ ಮೊಬೈಲ್‌ನಲ್ಲಿ ಯಾರೊಂದಿಗೋ ಮಾತನಾಡುತ್ತಿದ್ದಾನೆ. ನಾನು ಅವನ ಮಾತನ್ನು ಆಲಿಸಿದೆ.

"ಹಲೋ, ಅಮ್ಮಾ.... ಇದು ನಾನು" ಅವನು ಬಿಕ್ಕಳಿಸುತ್ತಾ ಹೇಳಿದನು.

"ಅಮ್ಮಾ.... ನಾನು ಕೆಲಸ ಮುಗಿಸಿ ಮರಳುವಾಗ ರೈಲ್ವೇ ಸ್ಟೇಶನಿನಲ್ಲಿ ಎಲ್ಲರೂ ನನ್ನನ್ನು ಹಿಡಿದು ಕಳ್ಳನಾಗಿಸಿದರು" ಅವನ ಸ್ವರ ಗದ್ಗದಿತವಾಯಿತು.

"ಅಮ್ಮಾ... ನಾನು ಕದ್ದಿಲ್ಲ. ಎಲ್ಲರೂ ಸೇರಿ ನನಗೆ ಹೊಡೆದರು. ಅಮ್ಮಾ... ನನ್ನ ಬಾಯಿಂದ ರಕ್ತ ಬರುತ್ತಿದೆ" ಅವನು ಅಳ ತೊಡಗಿದನು.

"ನನಗೆ ಜೀವಿಸುವ ಆಸೆಯೇ ಹೊರಟು ಹೋಗಿದೆ ಅಮ್ಮಾ- ಅವರೊಂದಿಗೆ ನಾನು ವಾಸವಿರುವ ಸ್ಥಳದ ಕುರಿತು ಹೇಳಿದ್ದೇನೆ. ಅವರು ನನ್ನನ್ನು ಹುಡುಕುತ್ತಾ ಅಲ್ಲಿಗೆ ಬರುವರು. ನಾನು ಕಳ್ಳನಲ್ಲ. ಅಮ್ಮಾ... ನೀನಾದರೂ ನನ್ನನ್ನು ನಂಬು. ನಾನು ಏನನ್ನೂ ಕದ್ದಿಲ್ಲ ಅಮ್ಮಾ...." ಅವನ ಕಣ್ಣಿನಿಂದ ಕಣ್ಣೀರು ಧಾರೆ ಧಾರೆಯಾಗಿ ಇಳಿಯತೊಡಗಿತು. ಇದನ್ನು ಕಂಡ ನನ್ನ ಕಣ್ಣುಗಳಿಗೆ ಸುಮ್ಮನಿರ ಲಾಗಲಿಲ್ಲ. ನಾನು ಕೂಡಾ ಅತ್ತೆ. ಅವನ ಒಂದೊಂದು ಮಾತೂ ನನ್ನ ಹೃದಯಕ್ಕೆ ಛರ್ಚಿಯಂತೆ ತಿವಿಯುತ್ತಿತ್ತು. ಯಾರೂ ಅವನನ್ನು ನಂಬದ ಸ್ಥಿತಿಯಲ್ಲಿ ಸಮಯವನ್ನು ಲೆಕ್ಕಿಸದೆ ತನ್ನ ಜೀವಕ್ಕಿಂತ ಹೆಚ್ಚು ಪ್ರೀತಿಸುವ ತಾಯಿಗೆ ಫೋನ್ ಮಾಡಿ ತಾಯಿಯನ್ನು ನಂಬಿಸುತ್ತಿದ್ದನು! ಎಂತಹ ಹೃದಯ ವಿದ್ರಾವಕ ಸನ್ನಿವೇಶ!

ಅಲ್ಲ, ಅವನು ಕಳ್ಳನಲ್ಲ..... ನನ್ನ ಮನಸ್ಸು ಸಾರಿ ಸಾರಿ ಹೇಳುತ್ತಿತ್ತು. ಟ್ರೈನ್ ಹೊರಡಲು ಪ್ರಾರಂಭಿಸಿತು. ನಾನು ಓಡಿ ಹೋಗಿ ಟ್ರೈನ್ ಹತ್ತಿದೆ. ನೀರು ತೆಗೆಯುವುದನ್ನೂ ಮರೆತಿದ್ದೆ. ಅವನಿದ್ದ ಕಡೆಗೆ ನಾನು ನೋಡಿದೆ. ಅವನು ಕಾಣುತ್ತಿಲ್ಲ. ರೈಲು ಮುಂದೆ ಮುಂದೆ ಸಾಗುತ್ತಿದೆ... ಮೂರು ದಿನಗಳ ನಿದ್ದೆ ಹಾಗೂ ಪ್ರವಾಸದ ಆಯಾಸವು ನನ್ನಿಂದ ಮಾಯವಾಗಿತ್ತು. ನಿದ್ರಿಸಬೇಕು ಎಂದು ಕಣ್ಣು ಮುಚ್ಚಿದಾಗ ನನ್ನ ಮನಸ್ಸಿಗೆ ಬರುತ್ತಿದ್ದುದು ಸರ ಕಳೆದುಕೊಂಡ ಆ ಮಹಿಳೆಯ ರೋದನ ವಲ್ಲ, ಕಳ್ಳನೆಂದು ಜನರಿಂದ ಒದೆ ತಿಂದ ಆ ಹುಡುಗನ ಸ್ಥಿತಿ ಯಂತೂ ಅಲ್ಲ. ಬದಲಾಗಿ ವೇಳೆಯಲ್ಲದ ವೇಳೆಯಲ್ಲಿ ಮಗನ ಕರೆಗೆ ಓಗೊಟ್ಟ ಆ ವಾತ್ಸಲ್ಯಮಯಿ ತಾಯಿ. ಮಗನನ್ನು ಜನರು ಅಟ್ಟಾಡಿಸಿ ಹೊಡೆದದ್ದು, ಮಗನ ಬಾಯಿಂದ ಬಂದ ರಕ್ತವನ್ನು ನೆನೆದು ಮಿಡಿಯುವ ಆ ಮಾತೃ ಹೃದಯ! "ನನಗೆ ಜೀವಿಸುವ ಆಸೆಯೇ ಹೊರಟು ಹೋಗಿದೆ" ಎಂದು ಮಗನು ಹೇಳುವಾಗ ಆ ತಾಯಿಯ ಪ್ರತಿಕ್ರಿಯೆಯು ಏನಾಗಿರಬಹುದು. ಅವಳು ರೋದಿಸಿರ ಲಾರಳೇ?! ಮಗನ ಕಣ್ಣೀರಿನೊಂದಿಗೆ ಅವಳು ಕಣ್ಣೀರು ಸುರಿಸಿರಲಾರಳೇ ಅಥವಾ "ನೀನು ಅಳಬೇಡ ನಿನ್ನೊಂದಿಗೆ ತಾಯಿ ಇಲ್ಲವೇ?" ಎಂದು ಸಾಂತ್ವನ ನೀಡಿರಲಾರಳೇ? ಮೊದಲಾದ ಉತ್ತರ ಸಿಗದ ಪ್ರಶ್ನೆಗಳು ಇಂದಿಗೂ ನನ್ನನ್ನು ಕಿತ್ತು ತಿನ್ನುತ್ತಿವೆ. ಆದರೂ ನನಗೆ ಈಗಲೂ ಆ ತಾಯಿಯೊಂದಿಗೆ ಹೇಳಲಿಕ್ಕಿರುವುದು ಒಂದೇ ಮಾತು "ಅಮ್ಮಾ ಕ್ಷಮಿಸು! ಮಗನನ್ನು ಕಳ್ಳನಾಗಿಸಿದ ಜನರ ಗುಂಪಿನಲ್ಲಿ ನಾನೂ ಇದ್ದೆ. ಅವನ ನಿರಪರಾಧಿತ್ವವನ್ನು ಸಾಬೀತು ಪಡಿಸುವ ಸಂದರ್ಭ ಒದಗಿ ಬಂದರೂ ನಾನು ಮೌನಿಯಾದೆ. ನನ್ನ ಕ್ಷಮಿಸಮ್ಮಾ....." ■

ದೂರದ ದುಬೈಯಿಂದ

ಇರ್ಶಾದ್ ಮೂಡಬಿದ್ರೆ

ಮರೆತರೂ ಹೇಗೆ ಮರೆಯಲಿ?

ದುಬ್ಯಾಯಲ್ಲಿ ನೆಲೆನಿಂತು ಎರಡು ದಶಕಗಳಿಗೆ ಹತ್ತಿರವಾಗುತ್ತಿದೆ. ಇಲ್ಲಿ ಕಳೆದ ದಿನಗಳಲ್ಲಿ ಹಲವು ಸಿಹಿ–ಕಹಿ ಸ್ವಾರಸ್ಯ ಗಳಿವೆ. ಮರೆಯಲಾಗದ ಅನುಭವಗಳಿವೆ. ಅದನ್ನು ನಾನು ಸಂದರ್ಭಕ್ಕೆ ಅನುಗುಣ ವಾಗಿ ಆಗಾಗ ಪತ್ರಿಕೆಗಳಲ್ಲಿ ಹಂಚಿಕೊಂಡಿ ದ್ದೇನೆ. ಇಲ್ಲಿ ಮತ್ತೆ ನಾಲ್ಕು ಘಟನೆಗಳನ್ನು ನಿಮ್ಮ ಜೊತೆಗೆ ಹೇಳಿಕೊಳ್ಳುತ್ತಿದ್ದೇನೆ. ಸಾವಿನ ನೆರಳಿನಲ್ಲಿ ಸಾಗುವ ಈ ಘಟನೆ

ಗಳು ನನ್ನ ದುಬ್ಯಾ ಬದುಕಿನಲ್ಲಿ ಎಂದೂ ಮರೆಯಲಾಗದ ಅನುಭವಗಳು.

❖ ❖ ❖

ದುಬ್ಯಾಯಲ್ಲಿ ಡಿಸೆಂಬರ್–ಜನವರಿಯ ಸಮಯದಲ್ಲಿ ಬೆಳಿಗ್ಗೆ ಮಂಜು ಕವಿಯುತ್ತದೆ. ಆಗ ಮುಸುಕಿದ ಮಬ್ಬಿಗೆ ರಸ್ತೆಗಳು ಕಾಣಿಸುವುದೇ ಇಲ್ಲ. ಹೆಚ್ಚು ದಟ್ಟ ಮಂಜು ಇದ್ದಾಗ ವೀಕ್ಷಿಸಲು ಹೋದರೆ ದೊಡ್ಡ ದೊಡ್ಡ ಗಗನ ಚುಂಬಿ ಕಟ್ಟಡಗಳೇ... ಕಣ್ಮರೆಯಾಗಿ ಬಿಡುತ್ತವೆ. ಈ ಮಂಜು ಕೆಲವು ಬಾರಿ ಬೆಳಗ್ಗಿನ ಒಂಭತ್ತು–ಹತ್ತು ಘಂಟೆಯ ವರೆಗೂ ಮುಂದುವರೆಯುತ್ತದೆ. ಆಗ ವಾಹನಗಳನ್ನು ತುಂಬಾ ಎಚ್ಚರಿಕೆ ಯಿಂದ ಚಲಾಯಿಸಬೇಕು. ಇಲ್ಲದಿದ್ದರೆ ನಮ್ಮ ಅರಿವಿಗೆ ಬಾರದೆಯೇ ಅಪಘಾತ ಸಂಭವಿಸಿ ಬಿಡುತ್ತವೆ.

ಕೆಲವು ವರುಷಗಳ ಹಿಂದೆ ದುಬ್ಯಾಯ 'ಗಂತೂತ್'ನಲ್ಲಿ ಇಂತಹ ಮಂಜಿನ ಅವಧಿಯಲ್ಲಿ ಅಪಘಾತದಲ್ಲಿ ಮೂರು ಮಂದಿ ಅಸುನೀಗಿದ್ದು, ನೂರಾರು ಮಂದಿ ತೀವ್ರ ಗಾಯಗೊಂಡಿದ್ದರು. ಸುಮಾರು ಇನ್ನೂರಕ್ಕೂ ಹೆಚ್ಚಿನ ವಾಹನಗಳು ಸರಣಿ ಅಪಘಾತಗೊಂಡು, ಕೆಲವೊಂದು ಸುಟ್ಟು ಕರಕಲಾಗಿದ್ದವು.

ಒಂದು ದಿನ ಬೆಳಿಗ್ಗೆ ನಾನು ತುರ್ತಾಗಿ ಜಬಲ್ ಆಲಿಗೆ ಹೋಗಬೇಕಿತ್ತು. ಅಂದು ಕೂಡ ಒಂದಿಷ್ಟು ಮಂಜು ಮುಸುಕಿದ ವಾತಾವರಣವಿತ್ತು. ಅದೇ ರಾತ್ರಿ ಮರು ಭೂಮಿಯಲ್ಲಿ ಬೀಸಿದ ಸುಳಿಗಾಳಿಗೆ ಕಾರು ಧೂಳುಮಯವಾಗಿತ್ತು. ನಾನು ಇದನ್ನು ಗಮನಿಸದೆ ಕಾರನ್ನು ರಸ್ತೆಗೆ ಇಳಿಸಿದೆ. ನನ್ನಂತೆ ಎಲ್ಲಾ ಕಾರುಗಳು 100–120 ಕಿ.ಮೀ. ವೇಗದಲ್ಲಿ ಸಾಗುತ್ತಿದ್ದವು. ನನಗೆ ಈ ಗಾಜಿನಲ್ಲಿ ಮೆತ್ತಿಕೊಂಡ ಧೂಳನ್ನು ಸ್ವಚ್ಛಗೊಳಿಸುವ ಮನಸ್ಸಾಯಿತು. ಅದಕ್ಕಾಗಿ ವೈಪರ್‌ನ ಸ್ವಿಚ್ಚನ್ನು ಅದುಮಿದೆ. ಅದೇ ನಾನು ಮಾಡಿದ ದೊಡ್ಡ ತಪ್ಪು!

ಒಮ್ಮೆಗೆ ಧೂಳಿನ ಮಣ್ಣಿನಲ್ಲಿ ಕೆಸರು ಮಯವಾದ ಗಾಜಿನಲ್ಲಿ ಏನೂ ಕಾಣಿಸ ದಾಯಿತು. ವೈಪರ್ ಸುತ್ತಾಡಿದರೂ ಗಾಜು ಸ್ಪಷ್ಟವಾಗಲಿಲ್ಲ. ನನ್ನ ಕಣ್ಣಿಗೆ ಮುಂದಿನ ರಸ್ತೆಯೇ ಕಾಣದಾಯಿತು. ಎಲ್ಲವೂ ಮಬ್ಬು! ಮುಂದೆ ಸಾಗುವ ವಾಹನ ಎಷ್ಟು ದೂರ ದಲ್ಲಿ ಅನ್ನುವುದು ಕೂಡ ತಿಳಿಯದಷ್ಟು ಅಸ್ಪಷ್ಟ! ನಾನು ವೇಗವನ್ನು ಹೆಚ್ಚು ಮಾಡಿದರೆ ಅದು ಮುಂದಿನ ವಾಹನಕ್ಕೆ ಗುದ್ದುತ್ತದೆ. ನಿಧಾನ ಮಾಡಿದರೆ ಹಿಂದಿ ನಿಂದ ಶರ ವೇಗದಲ್ಲಿ ಬರುವ ವಾಹನಗಳು ನನ್ನ ಕಾರಿನ ಮೇಲೆಯೇ ಏರಿ ಬಿಡುತ್ತವೆ. 100–120 ಕಿ.ಮೀ.ಗಳ ವೇಗ ಅಂದರೆ, ಅದು ಕಡಿಮೆಯ ವೇಗವಲ್ಲ! ನನ್ನ ಕಾರು ನಿಯಂತ್ರಣ ತಪ್ಪಿಕೊಂಡರೆ ಅಲ್ಲಿ ಬದುಕಿ ಉಳಿಯುವ ಸಾಧ್ಯತೆಯೇ ಕಡಿಮೆ!

ಇದು ಕೇವಲ ಮೂರು–ನಾಲ್ಕು ನಿಮಿಷಗಳ ಘಟನೆ. ಅಪಘಾತಕ್ಕೆ ಪರ ಲೋಕಕ್ಕೆ ಎಷ್ಟು ಕ್ಷಣಗಳು ಬೇಕು? ನನ್ನ

ವಿದ್ಯೆಯ ದಾರಿಯಲ್ಲಿ ನಡೆದವನು, ಸ್ವರ್ಗದಲ್ಲಿ ದಾರಿಯಲ್ಲಿ ನಡೆದಂತೆ.

ಎಲ್ಲಾ ಧೈರ್ಯವೂ ನಿಂತು ಹೋಯಿತು. ಹೆಂಡತಿ–ಮಕ್ಕಳು, ಮನೆ ಮಂದಿ ಎಲ್ಲರೂ ನೆನಪಾದರು. ಅದಕ್ಕಿಂತ ಮುಖ್ಯವಾಗಿ ನನಗೆ ಮೌಲಾನಾ ತಾರಿಖ್ ಜಮೀಲ್ ಅವರ ಉಪನ್ಯಾಸವೊಂದು ನೆನಪಿಗೆ ಬಂತು. ಅವರು ಹೇಳುತ್ತಾರೆ– "ನಾವು ವಾಹನ ಅಪಘಾತದಲ್ಲಿ ತೀರಿಕೊಂಡರೆ, ದೇವನು ತನ್ನ ದೂತರಲ್ಲಿ ಪ್ರಶ್ನಿಸುತ್ತಾನೆ ಯಂತೆ, ಈತ ಹಾಡು, ಸಂಗೀತ ಕೇಳುತ್ತಲೇ ನನ್ನ ಬಳಿ ಬಂದಿರುವುದೇ? ಕೊನೆಯ ಘಳಿಗೆಯಲ್ಲೂ ನನ್ನ ನೆನಪು ಮಾಡಿಲ್ಲವೇ?" ಎಂದು.

ನಾನು ಕೂಡಲೇ ನನ್ನ ರೇಡಿಯೋದಲ್ಲಿನ ಸಂಗೀತದ ಚಾನೆಲನ್ನು ಬದಲಾಯಿಸಿ ಬಿಟ್ಟೆ. ಕೂಡಲೇ ಅಲ್ಲಿ ಪವಿತ್ರ ಕುರ್‌ಆನಿನ ಸೂಕ್ತಗಳು ಕೇಳಿ ಬಂದವು. ಇನ್ನು ಜೀವಂತ ಉಳಿಯದಿದ್ದರೂ, ದೇವನ ಈ ಅಪವಾದದಿಂದ ಬದುಕಿ ಉಳಿದೆ ಯೆಂದು ಸಮಾಧಾನಗೊಂಡೆ!

ಈ ಕುರ್‌ಆನಿನ ಕೀರ್ತನೆಯ ಪುಣ್ಯದ ಫಲವೋ, ಹಿರಿಯರ ಆಶೀರ್ವಾದದ ಬಲವೋ ಅಥವಾ ಉಳಿದ ವಾಹನ ಚಾಲಕರು ತಮ್ಮ ವೇಗವನ್ನು ಏಕ ಪ್ರಕಾರವಾಗಿ ಕಾಯ್ದುಕೊಂಡ ಕಾರಣವೋ, ಯಾವುದೇ ದುರ್ಘಟನೆಯೂ ಸಂಭವಿಸಲಿಲ್ಲ. ಹತ್ತಾರು ಕಿ.ಮೀ. ಸಾಗಿದಂತೆ, ವೈಪರಿನ ನೀರಿನಲ್ಲಿ ಧೂಳು ಮಾಯವಾಗುತ್ತ ಗಾಜು ಸ್ಪಷ್ಟವಾಗುತ್ತಾ ಹೋಯಿತು. ಮಂಜಿನ ಮುಸುಕು ಕೂಡ ಹರಿದಾಡಿದ ನಂತರ ರಸ್ತೆ ಕಾಣ ಲಾರಂಭಿಸಿತು. ನನಗೆ ಹೋದ ಜೀವ ಮರಳಿದಂತೆ ಆಯಿತು.

ಸಾವಿನ ದೂತನನ್ನು ಕೆಲವು ಕಿಲೋ ಮೀಟರ್‌ಗಳ ವರೆಗೆ ಸವರಿಕೊಂಡೇ ಸಾಗಿ ನಡೆದ ಈ ಘಟನೆಯನ್ನು ಎಂದೂ ಮರೆಯುವಂತಿಲ್ಲ.

❖ ❖ ❖

ನಮ್ಮ ಹಳೆಯ ಕಛೇರಿಯ ಕಟ್ಟಡದಲ್ಲಿ ನೀರಿನ ವ್ಯವಸ್ಥೆ ಸೂಕ್ತವಾಗಿರಲಿಲ್ಲ. ಅದಕ್ಕಾಗಿ ನಾವು ಪ್ರತ್ಯೇಕ ನೀರಿನ ಟಾಂಕಿಯೊಂದನ್ನು ಅಳವಡಿಸಿ ಅದರಲ್ಲಿ ಸದಾ ನೀರು ತುಂಬಿ ಇರುವಂತೆ ನೋಡಿಕೊಳ್ಳುತ್ತಿದ್ದೆವು. ಈ ನೀರು ವಾರಕ್ಕೆ ಇಷ್ಟೇ ಬಾರಿ ಕೊಳ್ಳಬೇಕೆಂಬ ನಿಯಮವಿತ್ತು. ಇದನ್ನು ಕಟ್ಟಡದ ಮಾಲಿಕ ಅಪ್ಪಣೆ ಮಾಡಿದ್ದಲ್ಲ. ಬದಲಿಗೆ ವಾಚ್‌ಮ್ಯಾನ್ ಜಾರಿಗೆ ತಂದದ್ದು! ಹೀಗಾಗಿ ಈ ನಾತೂರ್(ವಾಚ್‌ಮ್ಯಾನ್) ಮತ್ತು ನಮಗೆ ಹಲವು ಬಾರಿ ಜಗಳವಾಗುತಿತ್ತು. ಈ ಚಿಲ್ಲರೆ ವಿಷಯಗಳ ಭಾರ ಬಾಸ್‌ನವರು ನನ್ನ ಹೆಗಲ ಮೇಲೆಯೇ ಹಾಕಿಕೊಂಡ ಕಾರಣ ಅದನ್ನು ನಾನೇ ನಿಭಾಯಿಸುತ್ತಿದ್ದೆ. ಈ ಜಗಳ ಗಂಟಿ ನಾತೂರಿನ ಜೊತೆಗೆ ಆಗಾಗ ಜಲ ವಿವಾದ ಸಮಸ್ಯೆಯಲ್ಲಿ ಮಾತಿಗೆ ಮಾತು ಬೆಳೆಯುತ್ತಿತ್ತು.

ಈತ ಈ ಕಟ್ಟಡದ ಮಾಲಿಕನ ಜೊತೆಗೆ ಸೇರಿಕೊಂಡು 30ಕ್ಕೂ ಹೆಚ್ಚು ವರ್ಷಗಳಾಗಿರಬಹುದು. ತಲೆಗೂದಲು ಪೂರ್ಣ ಹಣ್ಣಾಗಿದ್ದರೂ, ಆತನಿಗೆ ಊರಿನಲ್ಲಿ ನಿವೃತ್ತ ಜೀವನ ಸಾಗಿಸುವ ಮನಸ್ಸಿರಲಿಲ್ಲ. ಪ್ರಶ್ನಿಸಿದರೆ, "ಇದು ಕೊನೆಯ ವರ್ಷ ಮುಂದಿನ ವರುಷ ಕೇರಳದಲ್ಲಿಯೇ ಖಾಯಂ" ಎಂದು ಪ್ರತಿ ಬಾರಿ ಹೇಳುತ್ತಿದ್ದ.

ಈ ಕಿರಿಕಿರಿ ನಾತೂರ್ ಹೋಗಿ ಹೊಸ ನಾತೂರ್ ಬರಲಿಯೆಂದು ಎಲ್ಲರೂ ಹಂಬಲಿಸುತ್ತಿದ್ದರು.

ಒಂದು ದಿನ ಆತ ಹೊರಟೇ ಬಿಟ್ಟ.

ಬಣ್ಣ

ಹೆಂಡತಿ: ನನಗೆ ಬಿಳಿ ಸೀರೆಯನ್ನು ತೆಗೆಸಿಕೊಡಿ ಎಂದರೆ ಬಣ್ಣದ ಸೀರೆಯನ್ನು ತೆಗೆಸಿಕೊಟ್ಟಿದ್ರಲ್ಲಾ?

ಗಂಡ: ಈ ಸೀರೆಯನ್ನು ಎರಡು ಸಲ ನೀರಿಗೆ ಹಾಕಿದ್ರೆ ಅದು ಬಿಳಿ ಬಣ್ಣಕ್ಕೆ ತಿರುಗುತ್ತದೆ.

ಕೆ. ಪಾಂಡುರಂಗ ಕಾಮತ್,
ಗಿಳಿಯಾರು ಕೋಟ

ಕೇರಳಕ್ಕಲ್ಲ? ಮಕ್ಕಾ ಯಾತ್ರೆಗೆ! ಪವಿತ್ರ ಯಾತ್ರೆಗೆ ಹೊರಡಲು ಇನ್ನು ಎರಡು ದಿನ ಇದೆ ಅಂದಾಗ ಒಂದು ಸಂಜೆ ನಮ್ಮ ಕಛೇರಿಗೂ ಬಂದ. ಎಲ್ಲರಲ್ಲೂ ಭೇಟಿಯಾದ. ವಿಶೇಷವಾಗಿ ನನ್ನಲ್ಲಿ ಹೆಚ್ಚಿನ ಕ್ಷಮೆ ಯಾಚಿಸಿದ. ಯಾವುದೇ ಮನಸ್ತಾಪವಿದ್ದರೆ ಮರೆತು ಕ್ಷಮೆ ನೀಡ ಬೇಕೆಂದು ಬೇಡಿಕೊಂಡ. ಈ ಹಿರಿಯ ಜೀವ ನಾನು ಕ್ಷಮಿಸುವಷ್ಟು ದೊಡ್ಡ ವ್ಯಕ್ತಿ ಯಾಗಿರದ ಕಾರಣ ಸಂತೋಷದಲ್ಲಿಯೇ ಆಲಂಗಿಸಿಕೊಂಡೆ.

ಈ ನಡುವೆ ಎರಡು ದಿನಗಳಲ್ಲಿ ಆತನನ್ನು ಭೇಟಿಯಾಗಲು ಅನೇಕ ಮಂದಿ ಪರಿಚಿತರು–ಬಂಧುಗಳು ಬಂದು ಹೋದರು. ಕಛೇರಿಯ ಹಿಂಬದಿಯಲ್ಲಿಯೇ ಆತನ ಕೊಠಡಿ ಇರುವ ಕಾರಣ ನಾನು ಇದನ್ನು ಗಮನಿಸುತ್ತಿದ್ದೆ.

ಒಂದು ಸಂಜೆ ಅಬೂಧಾಬಿಯಿಂದ ಇಬ್ಬರು ಬಂದರು. ಮಂಚದಲ್ಲಿಯೇ ಒರಗಿಕೊಂಡಿದ್ದ ಮುದುಕ ಪಕ್ಕದ ಹೊಟೇಲಿನಿಂದ ಮೂರು ಚಹಾಗಳನ್ನು ತರಿಸಿಕೊಂಡ. ಹುಡುಗ ಚಹಾ ತಂದು ಕೊಟ್ಟು ಹೋದ. ಎಲ್ಲರೂ ಚಹಾ ಸವಿದರು. ಮುದುಕನ ಚಹಾ ಕಪ್ ಅರ್ಧ ಮುಗಿದಿರಲಿಲ್ಲ. ಏನೋ ಬಿಕ್ಕಳಿಕೆ ಬಂತು. ಕಪ್ಪನ್ನು ಬದಿಗೆ ಇರಿಸಿ, ಉಳಿದವರಿಗೆ ಚಹಾ ಕುಡಿಯಿರಿ ಅಂದ. ಅವರು ಮಾತನಾಡುತ್ತಲೇ ಇದ್ದರು. ಮುದುಕ ಇನ್ನಷ್ಟು ಆರಾಮವಾಗಿ ಒರಗಿ ಕೊಂಡು ಕಣ್ಣುಗಳನ್ನು ಮುಚ್ಚಿದ.

ಹಾಗೆ ಮುಚ್ಚಿದ ಕಣ್ಣುಗಳು ಮತ್ತೆ ತೆರೆಯಲೇ ಇಲ್ಲ. ಒಂದು ಸಣ್ಣ ಬಿಕ್ಕಳಿಕೆ ಆತನ ಬದುಕಿನ ಯಾತ್ರೆಯನ್ನೇ ಮುಗಿಸಿತ್ತು. ಸುದ್ದಿ ತಿಳಿದಂತೆ ನಾನು ಓಡಿದೆ. ಮುದುಕ ಶಾಂತವಾಗಿ ಮಲಗಿದ್ದ. ನಾಳೆ ಮುಂಜಾನೆಗೆ ಹೊರಡಲಿದ್ದ ಪಾಸ್ ಪೋರ್ಟ್ ಮತ್ತು ಟಿಕೇಟು ಅಲ್ಲೇ ಹತ್ತಿರದ ಟೇಬಲಿನ ಮೇಲಿತ್ತು. ಮರಣದ ಜೊತೆಗೆ ಯಾವುದೇ ಜಗಳ–ರಂಪಾಟ ಮಾಡದೇ ಮೌನವಾಗಿ ಸಾಗಿದ ಆತನ ಅಂತ್ಯ ಕಂಡು ಆಶ್ಚರ್ಯಗೊಂಡೆ!

❖ ❖ ❖

ನಾನು ಆರಂಭದಲ್ಲಿ ಉದ್ಯೋಗ

ಮಾಡಿಕೊಂಡಿದ್ದ, ಜಾಹೀರಾತು ಸಂಸ್ಥೆಯ ಪಕ್ಕದಲ್ಲಿ ಒಂದು ರೆಸ್ಟೋರೆಂಟ್ ಇತ್ತು. ಎಲ್ಲಡೆ ಇರುವಂತೆ ಅಲ್ಲೂ "ಡೋರ್ ಡೆಲಿವರಿ" ವ್ಯವಸ್ಥೆ ಇತ್ತು. ಇಬ್ಬರು ಕೇರಳದ ಹುಡುಗರು ಈ ಕಾರ್ಯಕ್ಕೆ ಸದಾ ಸಿದ್ಧರಿದ್ದರು. ಅವರಲ್ಲೊಬ್ಬನ ಹೆಸರು ಉಸ್ಮಾನ್. ತುಂಬಾ ಸಜ್ಜನ ಹಾಗೂ ಧಾರ್ಮಿಕ ಶ್ರದ್ಧಾವಂತ. ಬಾಲ್ಯದಲ್ಲಿ ಅರಬಿ ಮದ್ರಸಾ ತರಗತಿಗಳಲ್ಲಿ ಓದಿ ಬೆಳೆದವ. ಆದರೆ ಬಡತನದ ಕಾರಣದಿಂದ ಎಂಟನೇ ತರಗತಿಯನ್ನೂ ಪೂರ್ತಿಗೊಳಿಸಲಾಗಲಿಲ್ಲ. ದುಡಿಮೆಗೆ ಸ್ಥಳೀಯ ಬೇಕರಿ ಯೊಂದನ್ನು ಸೇರಿಕೊಂಡಿದ್ದ. ಈ ರೆಸ್ಟೋರೆಂಟಿನ ಮಾಲೀಕರು ಅವನನ್ನು ದುಬ್ಯಾಗೆ ಕರೆದುಕೊಂಡು ಬಂದರು. "ಡೋರ್ ಡೆಲಿವರಿ" ಸೇವೆಗೆ ಇಟ್ಟುಕೊಂಡರು.

ಈತ ಏನೇ ಕೆಲಸವಿರಲಿ. ಕ್ರಮವಾಗಿ ಮುಗಿಸುತ್ತಿದ್ದ. ಜೊತೆಗೆ ಪಕ್ಕದಲ್ಲಿದ್ದ ಮಸೀದಿಗೂ ಹೋಗುತ್ತಿದ್ದ. ಸಾಮೂಹಿಕ ನಮಾಝ್ ತಪ್ಪಿ ಹೋದ್ರೆ, ತಾನೇ ಮುಂದಾಳುತ್ವ ವಹಿಸಿ ನಮಾಝ್ (ಪ್ರಾರ್ಥನೆ) ನಿರ್ವಹಿಸಿಕೊಡುತ್ತಿದ್ದ. ಬಾಂಗ್ ಕರೆಗೆ ಕೆಲವು ಬಾರಿ ಮುಲ್ಲಾಗಳು ಗೈರು ಹಾಜರಿಯಾದರೆ, ಈತನೇ "ಅದಾನ್" (ಕರೆ) ಕೊಡುತ್ತಿದ್ದ. ಹೀಗಾಗಿ ಉಸ್ಮಾನ್ ಅಂದರೆ ಅಲ್ಲಿ ಎಲ್ಲರಿಗೂ ಅಚ್ಚುಮೆಚ್ಚು.

ಈತನ ಈ ಉತ್ತಮ ಗುಣಕ್ಕೆ ಆತನನ್ನು ಮಾಲೀಕರು ಅಡುಗೆ ಕೋಣೆಯ ಬದಲಿಗೆ ಹೊರಗಿನ ಡೆಲಿವರಿಗೆ ಕಾದಿರಿಸಿದರು. ಈತ ಸೈಕಲು ಹತ್ತಿ ಚಾ, ಕಾಫಿ, ತಿಂಡಿ, ಕೇಕು ಇತ್ಯಾದಿಗಳನ್ನು ವಿತರಿಸುತ್ತಿದ್ದ. ಹತ್ತಿರದ ಕಛೇರಿ, ಗೋದಾಮು, ಗ್ಯಾರೇಜುಗಳಿಗೂ ಊಟ ಒದಗಿಸಿ ಕೊಡುತ್ತಿದ್ದ. ಸೆಖೆಗಾಲದಲ್ಲಿ ಈ ದುಡಿತ ಸುಲಭವಾಗಿರಲಿಲ್ಲ. ಮಧ್ಯಾಹ್ನದ ಬಿರು ಬಿಸಿಲಲ್ಲಿ ಸೈಕಲು ತುಳಿಯುತ್ತಾ, ಬೆವರು ಸುರಿಸುತ್ತಾ ಸಾಗುವುದು ಕಠಿಣವೇ ಸರಿ. ಆದರೆ ಉಸ್ಮಾನ್ ಯಾವುದಕ್ಕೂ ಬೇಸರಗೊಳ್ಳುತ್ತಿರಲಿಲ್ಲ. ನಗುತ್ತಲೇ ಇರುತ್ತಿದ್ದ.

ಅಂದು ಅಗಸ್ಟ್ ತಿಂಗಳ ಹನ್ನೊಂದು ಗಂಟೆ. ಮಟಮಟ ಸುಡುವ ಬಿಸಿಲು. ವೇಗವಾಗಿ ಬಂದ ಅರಬಿಯ ಕಾರೊಂದು, ಈತನ ಸೈಕಲಿಗೆ ರಭಸವಾಗಿ ಗುದ್ದಿತು. ಈತ ನಿಯಂತ್ರಣ ತಪ್ಪಿ ದೂರಕ್ಕೆ ಎಸೆಯಲ್ಪಟ್ಟ. ತಲೆಗೆ–ಬೆನ್ನಿಗೆ ತೀವ್ರ ಗಾಯಗೊಂಡ ಈತ ಅಲ್ಲಿಯೇ ಕುಸಿದ. ಅಷ್ಟರಲ್ಲಿ ಅಕ್ಕ–ಪಕ್ಕದವರು ಓಡಿ ಬಂದರು. ಪೊಲೀಸರಿಗೆ ಸುದ್ದಿ ಮುಟ್ಟಿಸಿದರು.

ಉಸ್ಮಾನ್ ಆ ಸ್ಥಿತಿಯಲ್ಲೂ ಗುಂಪು ಕೂಡಿದ್ದ ಜನರಲ್ಲಿ ಓರ್ವ ಪರಿಚಿತರೊಬ್ಬರನ್ನು ಹತ್ತಿರಕ್ಕೆ ಕರೆದ. ತನ್ನ ಕಿಸೆಯಿಂದ ಒಂದು ಪುಟ್ಟ ಕಾಗದದ ಪುಟವನ್ನು ನೀಡಿದ. "ಅಣ್ಣ ಇದರಲ್ಲಿ ವೃತ್ತಾಕಾರದಲ್ಲಿ ಪೆನ್ನಿನ ಗುರುತು ಹಾಕಿದ್ದೇನೆ. ಇದು ಅವರ ಬಾಕಿ ಉಳಿಸಿಕೊಂಡಿರುವವರ ಮೊತ್ತ. ಆ ಹಣವನ್ನು ಅವರಿಗೆ ಮತ್ತೆ ಮುಟ್ಟಿಸಲು ಯಜಮಾನರಿಗೆ ಹೇಳಿರಿ. ಉಳಿದ ಹಣದ ಲೆಕ್ಕಾಚಾರ ಎಲ್ಲವೂ ಸರಿಯಾಗಿದೆ" ಅಂದ.

ಅಷ್ಟರಲ್ಲಿ ಅಂಬುಲೆನ್ಸ್ ಮತ್ತು ಪೊಲೀಸ್ ಜೀಪು ಶಬ್ಧ ಮಾಡುತ್ತಾ ಧಾವಿಸಿ ಬಂತು. ಈತನನ್ನು ಹೊತ್ತು ಸಾಗಿದರು. ದೇಹದೊಳಗಿನ ತೀವ್ರ ರಕ್ತಸ್ರಾವಕ್ಕೆ ಈತ ಮೂರು ದಿನ ಸಾವು–ಬದುಕಿನ ಜೊತೆಗೆ



ಸೆಣಸಾಡಿದ. ನಾಲ್ಕನೇ ದಿನ ಇಹಲೋಕ ತ್ಯಜಿಸಿದ.

ಮನುಷ್ಯ ಬಡತನ, ಕಷ್ಟ, ಸಂಕಟದಲ್ಲಿ ಹೇಗೆ ನಗುನಗುತ್ತಾ ಬಾಳಿ ಬದುಕ ಬಲ್ಲ ಅನ್ನುವುದಕ್ಕೆ ಉಸ್ಮಾನ್ ಓರ್ವ ಉತ್ತಮ ಉದಾಹರಣೆ. ಇವತ್ತಿಗೂ ಆ ರೆಸ್ಟೋರೆಂಟಿನ ಬಳಿ ಹೋದಾಗ ಆತನ ನೆನಪು ತಟ್ಟನೆ ಕಾಡುತ್ತದೆ.

❖ ❖ ❖

ಆಗ ನಾನು ದುಬ್ಯಾಗೆ ಆಗಮಿಸಿದ ಆರಂಭದ ದಿನಗಳು. ನಮ್ಮ ಬ್ರಹ್ಮಚಾರಿಯ ಕೊಠಡಿಯಲ್ಲಿ ನಾಲ್ಕು ಮಂದಿ ಜೊತೆಗಾರರು ಇದ್ದರು. ನಮಗೆ ರಜೆಯ ದಿನಗಳಲ್ಲಿ ಹೊರಗಡೆ ಸುತ್ತಾಡುವ ಸಂಭ್ರಮ. ಹಬ್ಬಕ್ಕೆ ಮೂರು–ನಾಲ್ಕು ದಿನಗಳ ರಜೆ ಸಿಕ್ಕರೆ ದೂರದ ಪ್ರಯಾಣ. (ಲಾಂಗ್ ಡ್ರೈವ್) ಮಾಡುವ ಉತ್ಸಾಹ. ಹೀಗೆ ಒಮ್ಮೆ ಬಕ್ರೀದ್ ಹಬ್ಬದ ರಜೆಗೆ ಓಮಾನ್ (ಮಸ್ಕತ್) ರಾಷ್ಟ್ರಕ್ಕೆ ಹೊರಟೆವು.

ನಮ್ಮ ಕಾರು ದುಬ್ಯಾಯ ಗಡಿ ದಾಟಿ ಇನ್ನೂ ನೂರು ಕಿ.ಮೀ. ದಾಟಿಕೊಂಡಿರಲಿಲ್ಲ. ಓರ್ವ ಓಮಾನಿ ಪ್ರಜೆ ರಸ್ತೆಯ ಬದಿಯಲ್ಲಿ ನಿಂತು ಕಾರು ನಿಲ್ಲಿಸುವಂತೆ ದೂರದಿಂದ ಸನ್ನೆ ಮಾಡುತ್ತಿದ್ದ. ಅಪರಿಚಿತ ಸ್ಥಳದಲ್ಲಿ ನಮಗೀಗ ಕಾರು ನಿಲ್ಲಿಸಬೇಕೇ, ಬೇಡವೇ? ಎಂಬ ಅನುಮಾನ ಹುಟ್ಟಿಕೊಂಡಿತ್ತು. ಹೊರಗೆ ನೋಡಿದರೆ ನಾಲ್ಕು ಸುತ್ತಲೂ ನಿರ್ಜನ ಮರುಭೂಮಿ. ಹತ್ತಿರ ದಲ್ಲಿ ಜನ ವಸತಿ ಇದೆಯೋ ಎಂದು ಅರಿಯಲು, ಅಲ್ಲಿ ಯಾವುದೇ ಒಂಟೆಗಳೂ ಮೇಯುತ್ತಿರಲಿಲ್ಲ.

ನಮ್ಮದು ಯುವ ಪಡೆಯಾದ ಕಾರಣ ಧೈರ್ಯ ಮಾಡಿ ಕಾರು ನಿಲ್ಲಿಸಿದೆವು. ಆ ಓಮಾನಿ ಪ್ರಜೆ ನಮ್ಮತ್ತ ಓಡಿ ಬಂದ. ಬದಿಯಲ್ಲಿ ಆತನ ಕಾರಿತ್ತು. "ನನ್ನ ಕಾರಿನ ಟಯರು ಒಡೆದು ಹೋಗಿದೆ... ಹಿಂದೆ ಇರಿಸಿರುವ ಸೇಫ್ಟಿ ಟಯರ್‌ನಲ್ಲೂ ಸಾಕಷ್ಟು ಗಾಳಿ ಇಲ್ಲ. ನಿಮ್ಮಿಂದ ಒಂದು ಉಪಕಾರವಾಗಬೇಕು. ನೀವು ಬದಲಾಯಿಸಿಕೊಳ್ಳಲು ಟಯರ್ ನೀಡಿದರೆ ನಾನು ಅದನ್ನು ಮುಂದಿನ ಗ್ಯಾರೇಜಿನಲ್ಲಿ ಹಿಂತಿರುಗಿಸಿ ಕೊಡುವೆ ಎಂದು ವಿನಂತಿಸಿ ಕೊಂಡ. ನಾವು ಆಗಲಿ ಅಂದೆವು.

ನಮ್ಮ ರಣಧೀರರ ಪಡೆ ಕಾರ್ಯಕ್ಕೆ ಇಳಿಯಿತು. ಮೇಲಿನಿಂದ ರಣ ಬಿಸಿಲು ಹೊಡೆಯುತ್ತಿದ್ದರೂ **(57ನೇ ಪುಟಕ್ಕೆ)**

ಸಂಚಾರಿ ಪಕ್ಕಲಡ್ಕ



ಅದ್ದ ಹೆಸರಿನ ಉದ್ದ ಪರಿಣಾಮ

ಅದು ಎಂಬತ್ತರ ದಶಕದ ಮಾತು. ಆಗ ತಾನೇ ಜೂನ್‌ನ ಚಿರಿಪಿರಿ ಮಳೆಗೆ ಶಾಲಾರಂಭವಾಗಿತ್ತು. ಅರ್ಧ ಪ್ಯಾಂಟಿನಿಂದ ಭಡ್ತಿ ಹೊಂದಿ ಪೂರ್ತಿ ಡಾನ್ ಪ್ಯಾಂಟಿನೊಂದಿಗೆ ಹೈಸ್ಕೂಲಿಗೆ ಕಾಲಿಟ್ಟ ಹೊತ್ತು. ನಮ್ಮೂರಲ್ಲಿ ಪ್ಲಾಟಿನಮ್ ಜುಬಿಲಿ ಆಚರಿಸಿದ ಪ್ರಾಥಮಿಕ ಶಾಲೆ ಇತ್ತು. (ಅದೀಗ ಶತಮಾನೋತ್ಸವ ಪೂರ್ತಿಗೊಳಿಸಿದೆ.) 'ಕ್ಲಿಪರ್ಡ್ ಮಾಸ್ಟರ್, ಸೆಂಡಿ ಮಾಸ್ಟರ್, ಕೊರೊಂಗು ಟೀಚರ್' ಹೇಳಿದರೇನೆ ಆ ಶಾಲೆಯ ಹಳೆ ವಿದ್ಯಾರ್ಥಿಗಳಿಗೆ ನೆನಪಾಗುತ್ತಿತ್ತು. ತಪ್ಪು ಎಂದು ಅನಿಸಿದರೂ ಹಲವಾರು ಬಾರಿ ನಿಜ ಶುಭ ನಾಮ ಹೇಳಿದರೂ ಯಾರು, ಎಲ್ಲಿಯವರು, ಯಾವ ಊರು, ಮದುವೆಯಾಗಿದೆಯೇ, ದಪ್ಪಗಿದ್ದಾರಾ, ತೆಳುವೋ, ಕನ್ನಡಕ ಇದೆಯಾ, ಉಬ್ಬು ಹಲ್ಲೋ? ಅಯ್ಯಯ್ಯೋ ತಲೆ ಕೊರೆದು ಡೈನಮೇಟ್ ಫಿಕ್ಸ್ ಮಾಡಿದ ರೀತಿ ಆಗುತ್ತಿತ್ತು. ಕೊನೆಗೆ 'ಗಿಳಿ ಟೀಚ' ಅಂದಾಗ 'ಅಯ್ಯೋ ಗಿಳಿ ಟೀಚರಾ' ರಪ್ಪನೆ ತಲೆಗೆ ಹೊಕ್ಕುತ್ತಿತ್ತು.

ಹಾಂ... ಎಂಬತ್ತರ ದಶಕದ ವಿಷಯದಲ್ಲಿದ್ದೆ. ಭಟ್ರು ಮಾಸ್ಟರ್ರು, ಶೆಟ್ರು ಮಾಸ್ಟರು, ಲಂಬೂ ಮಾಸ್ಟ್ರು, ಸಿಂಟೆಕ್ ಟೀಚರ್- ಅಂತ 8ನೇ ತರಗತಿಯ ಆರಂಭದಲ್ಲಿ ಆ ಹೈಸ್ಕೂಲಿನ 9 ಮತ್ತು 10ರ ಮಕ್ಕಳು ಪರಿಚಯ ಪಡಿಸಿಯಾಗಿತ್ತು. ಲೆಕ್ಕಕ್ಕೆ, ಗಿಳಿ ಟೀಚರ್ ಬರುತ್ತಾರೆಂದಾಗ, ತುಂಬಾ ಕುತೂಹಲವಾಗಿತ್ತು. ಸಮಾಜ ಮುಗಿಯಿತು, ಕನ್ನಡನೂ ಆಯಿತು, ಎಲ್ಲರ ಪರಿಚಯ ಕ್ಕಾಗಿಯೇ ಮೊದಲ ದಿನ ಮೀಸಲಿಡ ಲಾಗಿತ್ತು. ಕಟ್ಟಡ ಇನ್ನೂ ಪೂರ್ತಿಯಾಗದ ಕಾರಣ ಸರಕಾರದ ವತಿಯಿಂದ ಜಾರಿಯಾದ ನಿಧಿ ಎಲ್ಲೋ ಕೈ ತಪ್ಪಿತ್ತು ಎಂಬ ಭರದಿಂದ ನಾಲ್ಕು ಪಿಲ್ಲರ್ ಏರಿಸಿ ತಾರಸಿ ಮಾತ್ರ ಹಾಕಿದ್ದರು. ಮಳೆ ಬರುವ ಮುನ್ಸೂಚನೆಗಾಗಿ ಸುತ್ತಲೂ ತೆಂಗಿನ ಗರಿಯಿಂದ ಹೆಣೆದದ್ದನ್ನು ಮುಚ್ಚಿ ಬಿಟ್ಟಿದ್ದರು. ನಮ್ಮ ಶಾಲೆ ಮನೆ ಯಿಂದ ಕಡಿಮೆಯೆಂದರೆ ಮೂರು ಕಿಲೋ ಮೀಟರ್ ಅಂತೂ ದೂರವಿದೆ. ಅದು ಕಡಿಮೆಯಾಗಬೇಕಾದರೆ ಯಾರದೋ ಕಂಪೌಂಡ್ ಹಿತ್ತಿಲು ವಾನರನಂತೆ ಹಾರಾಡಿ ಅರ್ಧ ದೂರ ಕಡಿಮೆ ಮಾಡಬೇಕಾಗುತ್ತದೆ.

ಗಿಳಿ ಟೀಚರ್ ಮೂರನೇ ಪೀರಿಯಡ್‌ಗೆ ಹಾಜರಾದರೂ, ಮುಖದಲ್ಲಿ ಚೂರೂ ನಗು ಇಲ್ಲ. ಹುಬ್ಬುಗಂಟಿಕ್ಕಿ ಮುಖ, ನೀಳಕೇಶ. ಗಿಳಿ ಯಾಕೇ ಅಂತ ಮಕ್ಕಳು ಹೆಸರಿಟ್ಟಿದ್ದು ಕಂಡ ಕೂಡಲೇ ಗೊತ್ತಾಯ್ತು. ಮೂಗು ಒಂದು ಬಿಟ್ಟರೆ ಮುಖದಲ್ಲಿ ಬೇರಾವುದೂ ಕಾಣುವುದೇ ಇಲ್ಲ. ಸೆನ್ಸಾರ್ ಆಫೀಸಿನ ಪಾತ್ರ ಮುಖಕ್ಕೆ ಮೂಗಿನದ್ದಾಗಿತ್ತು. ಸರಿ ಎಲ್ಲರೂ ತಮ್ಮ ಹೆಸರು, ಊರು, ಹಳೆ ಶಾಲೆಯ ಹೆಸರು ಹೇಳಿದರೂ ನನ್ನ ಪಕ್ಕ ದಲ್ಲೊಬ್ಬ ಹುಡುಗ ಕೂತಿದ್ದ. "ನಿನ್ನ ಹೆಸರೇನು?" ಅಂದರು. ಹೆಸರು ಹೇಳಿದ್ದೇ ತಡ, ಡಸ್ಟರ್ ಅಷ್ಟೇ ವೇಗವಾಗಿ ಹುಡುಗನ ಮೈಗಪ್ಪಳಿಸಿತು. ತರಗತಿಯಿಡೀ ಸ್ಮಶಾನ ಮೌನ. ಚೋಟುದ್ದ ಇದ್ದೀಯ, ಇನ್ನೂ ಸಂಸ್ಕಾರ ಕಲಿಸಲಿಲ್ಲವೇನೋ ಮನೆ ಯವರೂ? ನಿನ್ನಲ್ಲಿ ಯಾರೋ ನಿಕ್ ನೇಮ್ ಕೇಳಿದ್ದು? ಪೂರ್ತಿ ಹೆಸರು ಹೇಳೋ, ನೀನು ಚರಂಡಿ, ನಿನ್ನ ಅಪ್ಪ ಗಟಾರ, ಅಜ್ಜ ನಾಲೆ... ಹೀಗೇನೋ ನಿನ್ನ ಕುಟುಂಬ!

ಟೀಚರ್ ರೌದ್ರಾವತಾರಕ್ಕೆ ಹುಡುಗ ಹೆದರಿ ಕೈ ಕಟ್ಟಿ ಮುಖನೇ ನೋಡುತ್ತಿದ್ದ.

ಈಗ ಹೇಳೋ ನಿನ್ನ ಹೆಸರು! ಹುಡುಗ ಸಂಪೂರ್ಣ ಬೆದರಿದ್ದ. ಒಮ್ಮೆ ಹೇಳಿದಾಗ ಡಸ್ಟರ್ ಪ್ರಹಾರವಾಯಿತು. ಇನ್ನೇನು ಕಾದಿದೆಯಾ ಪರಮಾತ್ಮ! ಹುಡುಗ ಮಾತ ನಾಡದ್ದು ಕಂಡು ಟೀಚರ್ ಹಾಜರಿ ಪುಸ್ತಕ ನೋಡಿದಾಗ ಹುಡುಗನ ಹೆಸರು ಚರಣ್.ಡಿ ಎಂದಿತ್ತು.

ಪಾಪ ಅಯ್ಯೋ ಅನಿಸಿತು ಟೀಚರಮ್ಮ ನಿಗೆ. ಹುಡುಗ ಫಾಸ್ಟ್ ಆಗಿ ನನ್ನ ಹೆಸರು ಚರಂಡಿ ಅಂದಿದ್ದು ಆಯಮ್ಮನಿಗೆ ಕೋಪ ತರಿಸಿ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣ ವಾಗಿತ್ತು. ಒಂದೋ ಎರಡೋ ಈ ನಿಕ್ ನೇಮ್ ಅವಾಂತರ.

ಕಾಲೇಜು ಮುಗಿಯಿತು. ಕ್ಯಾಂಪಸ್ ಸಿಲೆಕ್ಷನ್ ಆಯಿತು. PRO(Public Relation Officer) ಆಗಿ ನನ್ನ ಆಯ್ಕೆನೂ ಆಯಿತು.

ತುಂಬಾ ಸಹನೆಯ ಕೆಲಸ. P.R.O ಹೊಣೆಗಾರನಾಗಿ ನಿರ್ವಹಿಸುವ ಕಾರ್ಯದಲ್ಲಿ ಮಾನಸಿಕವಾಗಿ ತಯಾರಿರಬೇಕು. ಮಾತ್ರ ವಲ್ಲ, ಶಾರೀರಿಕವಾಗಿ ಗಟ್ಟಿಮುಟ್ಟಾಗಿರ ಬೇಕೆಂದು ಆಡಳಿತ ವರ್ಗ ನನ್ನನ್ನು ಆಯ್ಕೆ ಮಾಡುವಾಗ ಹೇಳಿದ್ದು ಯಾಕೆಂದು ಅರ್ಥ ವಾದದ್ದು, ನಾನು ಕಾರ್ಯನಿರ್ವಹಿಸುವ ಆಸ್ಪತ್ರೆಯಲ್ಲಿ. ಅದೇನೋ ತುರ್ತುಚಿಕಿತ್ಸೆಗೆ ವೈದ್ಯರು ಸಕಾಲದಲ್ಲಿ ನೆರವಾಗಲಿಲ್ಲವೆಂಬ ಕಾರಣಕ್ಕೆ ಗುಂಪೊಂದು ಆಸ್ಪತ್ರೆಗೆ ನುಗ್ಗಿದಾಗ, ಅವರನ್ನು ಹತೋಟಿಗೆ ತರುವಾಗ ದೈಹಿಕವಾಗಿ ನನ್ನೆಲ್ಲಾ ಅಂಗಗಳು ಒಂದಲ್ಲಾ ಒಂದು ರೀತಿಯಲ್ಲಿ ದಾಳಿಗೆ ತುತ್ತಾಗಿತ್ತು. ಪೊಲೀಸರು ಬಂದರು. ವಿಚಾರಣೆಯ ಸಂದರ್ಭ ತುರ್ತು ಚಿಕಿತ್ಸೆಗೆ ಬಂದದ್ದು ಹೆಸರಾಂತ ಗೂಂಡಾ ಹೆಸರು ರಫ್ಫು(Rough) ಪೂರ್ತಿ ಹೆಸರು ಹೇಳಲು ಆತನ ಹೆತ್ತವರ ವಿಳಾಸವೇ ನಾಪತ್ತೆ. ಆತ I.C.U.ನಲ್ಲಿ ಇರುವಾಗ ಆತನ ಹಿಂಬಾಲಕರಾದ ಬ್ಲೇಡ್‌ರಾಮ, ಕಠಾರಿ ನಿಂಗ, ಚೂರಿ ಚಿಕ್ಕಣ್ಣ, ಡಬ್ಬ ರಮೇಶ, ಮತ್ತೊಬ್ಬನ ಹೆಸರೇ ವಿಚಿತ್ರ, ತಿಗಣೆ- ಹೀಗೆ ಎಲ್ಲರದ್ದೂ ಪೊಲೀಸರಲ್ಲಿ ಪ್ರಾಥಮಿಕ ಹಂತದ ವಿಚಾರಣೆಯಲ್ಲಿ ನಮೂದಾದ ಹೆಸರುಗಳಿವು.

ಅದ್ಯಾವ ಕಾರಣಕ್ಕೋ ನನಗೊಮ್ಮೆ ಸಂಸ್ಥೆಯ ಹೌಸ್‌ಕೀಪರ್‌ಗಳಾದ ಅಬ್ದುಲ್ ರಹ್‌ಮಾನ್ ಮತ್ತೆ ಆಂಡರ್ಸನ್‌ರವರನ್ನು ಕರೆಯಲು ಅಟೆಂಡರ್‌ಗೆ ಹೇಳಿದೆ. ಆ ಮನುಷ್ಯ ನಿಂತಲ್ಲೇ ಇದ್ದ. ಕೇಳಿದರೆ ಆತ ನೆಂದ "ಈ ಸಂಸ್ಥೆಯಲ್ಲಿ ಆ ಹೆಸರಿನವರಾರೂ ಕೆಲಸಕ್ಕಿಲ್ಲ." ಆಗ ಪುನಃ ನೆನಪಾದದ್ದೇ ಈ ನಿಕ್‌ನೇಮ್. "ಅಲ್ಲಿ ಮಹಾರಾಯ ಅದ್ದು ಮತ್ತು ಆಂಡ್ಯೂನ ಕರೀತಿಯಾ?" "ಓ ಅವರ ಸಾರ್" ಅಂತ ಹೊರಗ್ಹೋದ.

ಬೇರೊಂದು ಪಜೀತಿ ಪ್ರಸಂಗ ಕರ್ತವ್ಯದ ಸಮಯದಲ್ಲಿ ನಡೆಯಿತು. ಆಸ್ಪತ್ರೆಯ ಬಿಲ್ಲು, ಬಾಣ ಎಲ್ಲಾ ಬಾಕಿ ಇಟ್ಟು, ಗದೆ ಮಾತ್ರ ಹೆಗಲಿಗಿಟ್ಟು ಓರ್ವ ಪುಣ್ಯಾತ್ಮ ಸ್ವಯಂ ಡಿಸ್‌ಚಾರ್ಜ್ ಆಗಿ ಪರಾರಿ ಯಾಗಿದ್ದ. ಆತನ ಹೆಸರು ವಾಸುದೇವ ಎಂದು ನಮೂದಾಗಿತ್ತು. ಆತನ ವಿಳಾಸ ಹಾಗೂ ನನ್ನ ಸ್ನೇಹಿತನ ವಾಸಿಸುವ ಸ್ಥಳ ತುಂಬಾ ಹತ್ತಿರವಾಗಿತ್ತು. ಎಂ.ಡಿ. ಈ ಬಗ್ಗೆ ಸ್ವಲ್ಪ ನನ್ನನ್ನು ತಲೆ ಹಾಕಲು ಹೇಳಿದ್ದಕ್ಕೆ ನಾ ನನ್ನ ಸ್ನೇಹಿತನಿಗೆ ಕರೆ ಮಾಡಿದೆ. ಆತ ಕೇಳಿದ್ದೇ ತಡ, ಯಾವ ವಾಸು, ಕೋರಿವಾಸಾ, ಚಮಚವಾಸಾ, ಬೀಸತ್ತಿ ವಾಸಾ, ಅಂಬಡೆ ವಾಸಾ, ನೀರುಳ್ಳಿ ವಾಸಾ"- ತಲೆಚಿಟ್ಟು ಹಿಡಿ ಯುವುದೊಂದೇ ಬಾಕಿ. "ಅಲ್ಲ ಮಾರಾಯಾ ಅಲ್ಲಿ ವಾಸುದೇವ S/o. ಬೀರಂದ ಅಂತ ಯಾರೂ ಇಲ್ಲವಾ?" ಅಂದದ್ದಕ್ಕೆ "ಓ ಚಟ್ಟಿ ವಾಸುವಾ?" ಅಂದು ಬಿಟ್ಟ.

ಈ ಇತಿಹಾಸವೇ ಈ ಅಡ್ಡ ಹೆಸರಿಗೆ ಪ್ರೋತ್ಸಾಹ ನೀಡಿದಂತೆ ಕಾಣುತ್ತದೆ. ಕಳಿಂಗ

ಶಬ್ದ

ಮನುಷ್ಯನ
ಹೊಡೆತಕ್ಕೆ
ಇದೆ ಶಬ್ದ.
ಆದರೆ
ದೇವನ
ಹೊಡೆತಕ್ಕೆ
ಇಲ್ಲ ಶಬ್ದ

ಮುಝ್ನಾ

ಯುದ್ಧ ಗೆದ್ದ ಅಶೋಕನನ್ನು, ಕೇವಲ ಅಶೋಕನೆಂದರೆ ಯಾರಿಗೂ ಅರ್ಥವಾಗು ವುದು ಸ್ವಲ್ಪ ಕಷ್ಟನೇ, ಚಂಡ ಅಶೋಕ ನೆಂದಾಗ ಆತ ಇತಿಹಾಸ ಪ್ರಸಿದ್ಧನಾಗುತ್ತಾನೆ.

ಪಿಂಕಿ, ವಿಕ್ಕಿ, ಲಕ್ಕಿ, ಎಜ್ಜಿ, ಪಪ್ಪ, ಪಿಪ್ಪಿ- ಇದೆಲ್ಲಾ ಸಣ್ಣದಿರುವಾಗ ಇಟ್ಟ ಹೆಸರು. ಮುದುಕ, ಮುದುಕಿಯಾಗುವ ವರೆಗೂ ಉಳಿದದ್ದು ಇದೆ. ಸ್ವಲ್ಪ ಬದ ಲಾವಣೆ ಅಷ್ಟೇ. ಲಕ್ಕಿ ಇದ್ದದು ಲಕ್ಕಕ್ಕ, ವಿಜ್ಜಿ ಇದ್ದದ್ದು ವಿಜ್ಜಣ್ಣ, ಅಣ್ಣ ಗಿಣ್ಣ ಸೇರಿಸಿ ಸ್ವಲ್ಪ ಮಟ್ಟಿನ ಬದಲಾವಣೆ.

ಹೇಗೂ ಮದುವೆ ನಿಶ್ಚಯವಾಯಿತು. ತಂದೆ, ತಾಯಿಯ ಸಂಬಂಧಿಕರೆಲ್ಲಾ, ದೂರದೂರಿನಲ್ಲಿರುವುದರಿಂದ ಒಂದು ವಾರ ಅದಕ್ಕೆ ಮೀಸಲಿರಿಸಿದೆ.

ಅಪ್ಪ, ನಾರಾಯಣನನ್ನು ಭೇಟಿಯಾಗಿ ಅವರ ಕೈಗೇ ನೀ ಲಗ್ನ ಪತ್ರಿಕೆ ನೀಡ ಬೇಕೆಂದ್ರು. ಆದರೆ ಹೊಸೂರಿನಲ್ಲಿ ನಾರಾಯಣರನ್ನು ವಿಚಾರಿಸಿದಾಗ, ಪುನಃ ಅದೇ ಸಮಸ್ಯೆ. ಯಾವ ನಾರಾಯಣ, ದೆಂಜ ನಾರಾಯಣ, ನಂಗ್ ನಾರಾಯಣ, ಕಂಗ್ ನಾರಾಯಣ- ಅವರ ದೇಹಕ್ಕೆ ಅನುಗುಣ ವಾಗಿ, ವೃತ್ತಿಗನುಗುಣವಾಗಿ ಜನರು ಹೆಸರನ್ನು ಬಿಟ್ಟು ಕೇವಲ ನಂಗ್, ದೆಂಜ, ಗಂಗ್, ಅಂತ ಕರೆಯುತ್ತಿದ್ದರು. ಅದು ಎರಡನೇ ತಲೆಮಾರನ್ನು ಅವರ ಹೆಸರಿನಿಂದ ವಂಚಿಸಿ ಬಿಟ್ಟಿತು. ಕೊನೆಗೆ ತಂದೆ ಫೋನು ಮಾಡಿದಾಗ, "ಲೋ ಮಗಾ 'ನಂಗ್' ಕಣೋ" ಅಂದುಬಿಟ್ರು. ಅವರು ಹೇಳಿದ್ದು ಸರೀನೇ. ಆ ವ್ಯಕ್ತಿ ತುಂಬಾ ತೆಳ್ಳಗಿದ್ದರು!

ಬಾಲ್ಯದ ಗೆಳೆಯನ ನೆನಪಾಗಿ ವಸಂತನ ಮನೆಯಿಲ್ಲಿ ಎಂದು ಕೇಳಿದಾಗ, ಯಾರು ಬೋರಿ(ಹೋರಿ) ವಸಂತನಾ ಅಂದದ್ದನ್ನು ಸ್ನೇಹಿತ ಸಿಕ್ಕಿದಾಗ, ಹೇಳಿ ನಕ್ಕು ಸಾಕೋ ಸಾಕಾಗಿತ್ತು. "ಯಾರೋ ನಿನ್ನ ಬೋರಿ ಅಂತಾರೆ" ಅಂದ್ರೆ, "3 ಹೆಂಡಿರು ಇದ್ದಾರೆ. ಒಟ್ಟು 16 ಮಕ್ಕಳಿವೆ. ಇವ್ರ ಗಂಟೇನು ಹೋಗುತ್ತೆ. ನಾ ಕೃಷಿ ಮಾಡಿ ಸಾಕ್ತಿದ್ದೀನಿ, ನಿಯತ್ತಿನಿಂದಿದ್ದೇನೆ. ಇವ್ರಂತೆ ಕೆಟ್ಟ ಸಂಪರ್ಕವಿಡಲಿಲ್ಲ" ಎಂದು ಕೆಂಡ ಕಾರಿದ.

ನನ್ ಅಪ್ಪನಿಗೂ ಅಡ್ಡ ಹೆಸರಿದೆ ಅಂತ ಗೊತ್ತಾದದ್ದು **(50ನೇ ಪುಟಕ್ಕೆ)**

ದಾಂಪತ್ಯ ಬದುಕು

ಶಹನಾಝ್ ಎಂ.

ಭಾಗ– 6

"ದೇವನು ಪ್ರೀತಿಯಿಂದ ಭೂಮಿಗೆ ಕಳುಹಿಸಿದ ಜೀವವೇ ತಾಯಿ"
(ವಿಲಿಯಮ್)
"ಮಹಿಳೆಯ ಎಲ್ಲ ಹಕ್ಕುಗಳಿಗಿಂತ ಶ್ರೇಷ್ಠವಾದ ಹಕ್ಕು ತಾಯಿಯಾಗುವ ಹಕ್ಕು"
(ಲಿನ್ ಯುತಂಗ್)

ತಾಯಿಯಾಗುವ ಮಹಾ ಭಾಗ್ಯ

ಲೋಕದ ಪ್ರಸಿದ್ಧ ವ್ಯಕ್ತಿಗಳು 'ತಾಯಿ' ಬಗ್ಗೆ ಹೇಳಿರುವ ಈ ಮೇಲಿನ ವಾಕ್ಯ ಅರ್ಥಪೂರ್ಣವಾದದ್ದು. ಪತ್ನಿಯು ಗರ್ಭ ಧರಿಸಿದ ಸಮಯದಲ್ಲಿ ಪುರುಷನು ಭಾವನಾತ್ಮಕವಾದ ಸಂಬಂಧ ಪತ್ನಿಯೊಟ್ಟಿಗೆ ಇಡುತ್ತಾನೆ. ಅವಳ ಬಗ್ಗೆ ಪತಿಗೆ ಚಿಂತೆ, ಕಾಳಜಿ ಇರುತ್ತದೆ. ಮನೆಗೆ ಮರಳುವಾಗ ಹಣ್ಣು ಹಂಪಲು, ಹಾಲು ತರಲು ಮರೆಯಲಾರ. ಗರ್ಭಿಣಿಗೆ ದಿನನಿತ್ಯ 'ಹಾಲು' ನೀಡುವುದನ್ನು ಮರೆಯಬಾರದು. ಐದು ತಿಂಗಳಲ್ಲಿ ವೈದ್ಯರಲ್ಲಿ 'ಟೈಟಾನಸ್' ನಿರೋಧಕ ಶಕ್ತಿಗಾಗಿ ಇಂಜೆಕ್ಷನ್ ಪಡೆಯುವುದು ಅಗತ್ಯ. ಪತಿಯು ಗರ್ಭಿಣಿ ಪತ್ನಿಯನ್ನು ವೈದ್ಯರ ಹತ್ತಿರ ಕರೆದೊಯ್ಯುವುದು ಉತ್ತಮ. ಇದರಿಂದ ಪತ್ನಿಗೆ ಮಾನಸಿಕ ನೆಮ್ಮದಿ ಮೂಡುತ್ತದೆ. ವೈದ್ಯರು ಸೂಚಿಸುವ(ಆದೇಶಿಸುವ) ಮಾತನ್ನು ಪತಿಯು ಕೇಳಿ ಅದರಂತೆ ನಡೆಯುವುದನ್ನು ಪತ್ನಿ ಆಶಿಸುತ್ತಾಳೆ.

ಪ್ರಥಮವಾಗಿ ಗರ್ಭಿಣಿಯಾದ ಹೆಣ್ಣಿನ ಮುಂದೆ ಹೆರಿಗೆಯ ಕುಳಿತು ಭೀಕರವಾಗಿ ವರ್ಣಿಸದಿರುವುದು ಆಕೆಯ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಮನೆಯಲ್ಲಿ ಬಾಭಿಯರು, ನಾದಿನಿಯರು ತಮ್ಮ ಅನುಭವವನ್ನು ತಿಳಿಸಿ ಬೆದರಿಸುವುದು ಸರಿಯಲ್ಲ. ಹೆರಿಗೆ ಸುಲಭ ಆಗುವ ಕುರಿತು ಇರುವ ವಿಧಾನ ಹೇಳುವುದರಲ್ಲಿ ತಪ್ಪಿಲ್ಲ. ಏಳು ತಿಂಗಳು ಕಳೆಯುವಾಗ ಮಗುವಿಗೆ ಬೇಕಾದ ವಸ್ತ್ರಗಳನ್ನು ಸಿದ್ಧಪಡಿಸಿಡುವುದು ಉತ್ತಮ. ತವರಿನಲ್ಲಿದ್ದರೆ ಅಮ್ಮ ಈ ಕುರಿತು ಸಹಾಯ ಮಾಡುತ್ತಾಳೆ. ಗಂಡನ ಮನೆಯಲ್ಲಿದ್ದರೆ ಅತ್ತೆಗೆ ಇದರ ಜವಾಬ್ದಾರಿ ಇರುತ್ತದೆ. ಪತಿಯು ಗಲ್ಫ್‌ನಲ್ಲಿದ್ದರೆ, ಗರ್ಭಿಣಿ ಪತ್ನಿಯನ್ನು ನೋಡುವ ಆಸೆ, ಬಯಕೆ ಅವನಿಗಿರುತ್ತದೆ. ತುಂಬು ಗರ್ಭಿಣಿಯರಿಗೆ ಪತಿಯು

ಒಮ್ಮೆ ತನ್ನನ್ನು ನೋಡಬೇಕೆಂದು ಖಂಡಿತಾ ಆಶಿಸುತ್ತಾಳೆ. ಈ ಅಪೂರ್ವವಾದ ದೃಶ್ಯ ಪತಿ ಕಳೆದುಕೊಳ್ಳಬಾರದು. ಹೆರಿಗೆಗೆ ಒಂದು ತಿಂಗಳಿರುವಾಗ ಗಲ್ಫ್ ಪತಿಯು ಊರಿಗೆ ಬಂದು ಪತ್ನಿಯನ್ನು ಉಲ್ಲಾಸಿತಗೊಳಿಸ ಬಹುದು. ಹೆರಿಗೆಯ ಸಮಯದಲ್ಲಿ ಪತಿಯು ತನ್ನ ಕರುಳ ಕುಡಿಯ ಆಗಮನಕ್ಕಾಗಿ ಕಾತರದಿಂದ ಕಾಯುವುದು, ಪತ್ನಿಯನ್ನು ಸಂತೈಸುವುದು, ಉಪಚರಿಸುವುದು ಮಾಡುವು ದರಿಂದ ಪತ್ನಿಗೆ ಮಾನಸಿಕ ಸಂತೃಪ್ತಿ ದೊರೆಯುತ್ತದೆ.

ಮಗುವಿನ ಆಗಮನದಿಂದ ದಾಂಪತ್ಯ ಸಂಬಂಧ ಸ್ಥಿರಗೊಳ್ಳುತ್ತದೆ. ಹೆಚ್ಚಾಗಿ ತವರಿ ನವರೇ ಪ್ರಥಮ ಹೆರಿಗೆಯ ಹೊಣೆ ವಹಿಸು ತ್ತಾರೆ. ಮಗು ದಂಪತಿಗಳ ನಡುವಿನ ಪ್ರೀತಿ-ವಿಶ್ವಾಸದ ಬೆಸುಗೆಯನ್ನು ಗಟ್ಟಿಗೊಳಿಸುತ್ತದೆ. ಮಗುವಿಗೆ ಅರ್ಥಪೂರ್ಣವಾದ ಸುಂದರ ಹೆಸರನ್ನು ಇಡುವುದು ಮುಖ್ಯ. ಈ ಹೆಸರನ್ನು ಮಗುವಿನ ತಂದೆಯ ಒಪ್ಪಿಗೆ ಪಡೆದೇ ಇಡಬೇಕು. ಯಾಕೆಂದರೆ ಮಗುವಿನ ಮೇಲೆ ತಂದೆಗೆ ಎಲ್ಲಾ ವಿಧದಲ್ಲೂ ಹಕ್ಕು ಇದೆ. ಕೆಲವು ವೇಳೆ ಮಗುವಿನ ತಂದೆ ಹಾಗೂ ಮನೆಯವರು ಸೂಚಿಸಿದ ಹೆಸರನ್ನು ತಿರಸ್ಕರಿಸಿ ಪತ್ನಿಯ ತವರಿನವರೇ ನಾಮಕರಣ ಮಾಡಿ ಬಿಟ್ಟಾಗ ಅಸಮಾಧಾನ, ಬೇಸರದ ಹೊಗೆ ಏಳಬಹುದು. ಮಗಳ ಬಗ್ಗೆ ಎಷ್ಟೇ ಹಕ್ಕು, ಅಧಿಕಾರ, ಪ್ರೀತಿ ಹೆಣ್ಣು ಹೆತ್ತವರಿಗೆ ಇದ್ದರೂ ಆಕೆಯ ಮಗುವಿನ ವಿಷಯದಲ್ಲಿ ಅಳಿಯನ ಮನೆಯವರಿಗೆ ಅಧಿಕ ಅಧಿಕಾರ ವಿರುತ್ತದೆ. ಕೌನ್ಸಿಲಿಂಗ್ ಸೆಂಟರ್‌ಗೆ ಬಂದ ಕೇಸ್‌ನಲ್ಲಿ ಮಗುವಿನ ನಾಮಕರಣವನ್ನು ಸೊಸೆಯ ತವರಿನವರೇ ನಿಭಾಯಿಸಿದರು ಎಂದು ಎರಡೂ ಪಾರ್ಟಿಯವರ ನಡುವೆ ಜಗಳವಾಗಿ ಸೊಸೆಯನ್ನು ತವರಿಗೇ ಅಟ್ಟಿದ್ದರು.

ನಲ್ವತ್ತು ದಿವಸಗಳ ಬಾಣಂತನದ ಆರಾಮದ ನಂತರ ಗಂಡನ ಮನೆಯವರು ಕರೆದೊಯ್ಯಲು ಬಂದಾಗ ಗೌರವದಿಂದಲೇ ತಾಯಿ-ಮಗುವನ್ನು ಕಳುಹಿಸಿ ಕೊಡಬೇಕು. ಕೆಲವು ವೇಳೆ ಹೆಣ್ಣಿನ ತವರಿನವರು ಮಗಳು ಇನ್ನಷ್ಟು ದಿವಸ ತವರಿನಲ್ಲಿರಲಿ ಎಂದೇ ಆಶಿಸುತ್ತಾರೆ. ಕಾರಣ.... ಮಗಳಿಗೆ ಇನ್ನಷ್ಟು ವಿಶ್ರಾಂತಿ, ಕಾಳಜಿ ಸಿಗಲಿ ಎಂದಾಗಿರುತ್ತದೆ. ತವರಿನವರ ಪ್ರೀತಿ, ಕಾಳಜಿ ಮಗಳ ದಾಂಪತ್ಯದಲ್ಲಿ 'ಕಹಿ' ಭಾವನೆಗೆ ಅವಕಾಶ ನೀಡದಿರಲಿ. ಅತ್ತೆ ಮನೆಯಲ್ಲಿ ಮಗಳಿಗೆ ಕೆಲಸ ಮಾಡಿಸುತ್ತಾರೆ. ಪುಟ್ಟ ಶಿಶುವನ್ನು ನೋಡಿಕೊಳ್ಳಲು ಆಕೆಗೆ ಕಷ್ಟವಾಗಬಹು ದೆಂದು ಮಗಳನ್ನು ತವರಿನಲ್ಲೇ ಉಳಿಸಿ ಕೊಳ್ಳಲು ಪ್ರಯತ್ನಿಸುತ್ತಾರೆ. ಇದು ಸರಿ ಯಲ್ಲ. ಪತ್ನಿ ಮತ್ತು ಶಿಶುವಿನ ಪೂರ್ಣ ಜವಾಬ್ದಾರಿ ಗಂಡನದ್ದಾಗಿರುತ್ತದೆ. ಪತ್ನಿ ಯನ್ನು ವಿಶ್ವಾಸಕ್ಕೆ ತಗೊಳ್ಳಬೇಕು. ಅವಳಿಗೆ ಪತಿಯ ಮನೆಗೆ ಹೋಗಲು ಅಂಜಿಕೆ ಏಕೆ? ಎಂಬ ವಿಷಯದಲ್ಲಿ ಚರ್ಚಿಸಿ ಅವಳ ಭೀತಿಯನ್ನು ದೂರೀಕರಿಸಬೇಕು. ಕೆಲವು ವಿವಾಹಿತೆಯರಿಗೆ ಹೆರಿಗೆಯಾಗಿ ತಾಯಿ ಮನೆಯಲ್ಲಿರುವಾಗ ಅಲ್ಲಿ ತನ್ನ ಸಂಬಂಧಿಕರಿಂದ ಲಭಿಸಿದ ಆರೈಕೆ, ಕಾಳಜಿ, ಪ್ರೀತಿ, ಉಪಚಾರ ನೋಡಿ ಗಂಡನ ಮನೆಗೆ ಹಿಂದಿರುಗಲು ಮನಸ್ಸು ಕೇಳುವುದಿಲ್ಲ. ಇದು ಸಲ್ಲದು. ತವರಿನಲ್ಲಿ ಎಷ್ಟೇ ಸುಖ-ಸಂತೃಪ್ತಿ ಲಭಿಸಿದರೂ ವಿವಾಹಿತೆಗೆ ಪತಿಯ ಮನೆಯೇ ಗೌರವದ ಸ್ಥಾನ. "ಗಂಜಿ ಕುಡಿದರೂ ಗಂಡನ ಮನೆ ಲೇಸು" ಎಂಬ ಗಾದೆ ಇದೆ. ತಾಯಿ ಮನೆಯ ಸುಖ ಶಾಶ್ವತವೂ ಅಲ್ಲ. ಹಲವು ಬಾರಿ ದಾಂಪತ್ಯದ ಜಗಳಕ್ಕೆ ಈ ಮನಸ್ಥಿತಿಯೂ ಒಂದು ಕಾರಣ ಆಗಿದೆ. ತಾಯಿಯು ಮಗಳನ್ನು ತನ್ನಲ್ಲೇ ಉಳಿಸಿ ಕೊಳ್ಳುವ ಮೂಲಕ ಮಗಳ 'ದಾಂಪತ್ಯ' ಬದುಕಿಗೆ ಕೊಡಲಿಯೇಟು ಹಾಕುತ್ತಾಳೆ. ಮಗಳ ಬಗ್ಗೆ ಕರುಣೆ, ಕಾಳಜಿ ಸಹಜವೇ. ಆದ್ರೆ... ಎಲ್ಲದಕ್ಕೂ ಒಂದು 'ಮಿತಿ' ಇದೆ. ಅಳಿಯ ಹಾಗೂ ಆತನ ಮನೆಯವರ ಸಮ್ಮತಿ ಇದ್ದಲ್ಲಿ ಮಗಳನ್ನೂ, ಶಿಶುವನ್ನೂ ಕೆಲ ಕಾಲ ತವರಿನಲ್ಲಿ ಉಳಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಅಳಿಯನೂ ಈ ಕುರಿತು ಬೇಸರ ವ್ಯಕ್ತಪಡಿಸದಿದ್ದರೆ ಉತ್ತಮವೇ. ಮಗುವಿನ ಖರ್ಚು ಅದರ ಆರೋಗ್ಯದ ಕುರಿತು ಕಾಳಜಿ ಮಗುವಿನ ತಂದೆಗೆ ಇರಬೇಕು. ಪುಟ್ಟ ಶಿಶುವಿಗೆ ಆಗಾಗ ಆರೋಗ್ಯ ಕೆಡಬಹುದು. ಅದರ ಎಲ್ಲಾ ಜವಾಬ್ದಾರಿಯನ್ನೂ ಕೇವಲ ಮಗುವಿನ ತಾಯಿಯ ಮೇಲೆ ಹಾಕಿ ನಿರಾಳವಾಗಿರುವ ನಡತೆ ಪುರುಷರು ಮಾಡಬಾರದು. ಒಂಬತ್ತು ತಿಂಗಳು ತನ್ನ ಉದರದಲ್ಲಿಟ್ಟು ರಕ್ಷಿಸಿದ ತಾಯಿಯು ಅದನ್ನು ಭೂಮಿಗೆ ಇಳಿಸಿದ ನಂತರ ಅದರ ರಕ್ಷಣೆಯ ಭಾರ ತಂದೆಯದ್ದಾಗಿದೆ. ಅಪ್ಪ-ಅಮ್ಮನ ಕಾಳಜಿಯಲ್ಲಿ ಮಗು ಬೆಳೆಯು ತ್ತದೆ. ಮಗುವಿಗೆ ಎದೆ ಹಾಲು ಕುಡಿಸು ವಲ್ಲಿ ಯಾವುದೇ ಹಿಂಜರಿಕೆ ಮಾಡ ಬಾರದು. ತಾಯಿ-ಮಗುವಿನ ನಡುವಿನ ಭಾವನಾತ್ಮಕವಾದ ಸಂಬಂಧ ಬೆಳೆಯುವುದೇ ಎದೆ ಹಾಲು ಉಣಿಸುವಿಕೆಯಲ್ಲಿ. ಅದೇ ರೀತಿ ಮಗುವಿನ ಹಾಲಿನ ಹಕ್ಕನ್ನು ಪೂರ್ತಿಯಾಗಿ ಮಗುವಿಗೆ ನೀಡಿರಿ. ಪತಿ-ಪತ್ನಿಯು ಪುಟ್ಟ ಶಿಶುವಿನ ಉತ್ತಮ ಆರೋಗ್ಯ ಹಾಗೂ ಪಾಲನೆಯ ಚಿಂತನೆ ಯನ್ನು ನಡೆಸಬೇಕು. ಹಾಲು ಕುಡಿಯುವ ಮಗುವಿರುವಾಗ ಬೇಗನೇ ಮಗದೊಮ್ಮೆ ಗರ್ಭ ಧರಿಸದಿರುವುದು ತಾಯಿ ಮಗುವಿನ ಆರೋಗ್ಯದ ದೃಷ್ಟಿಯಿಂದ ಉತ್ತಮ. ತಿಂಗಳ ಹಸುಳೆ ಮಡಿಲಲ್ಲಿರುವಾಗ ಪತ್ನಿಯು ಪುನಃ ಗರ್ಭ ಧರಿಸುವುದರಿಂದ ಆಕೆಯ ಆರೋಗ್ಯ ಕೆಡುತ್ತದೆ. ಸುಸ್ತಾದ ತಾಯಿಯು, ರಕ್ತಹೀನ ತೆಗೆ ಒಳಗಾಗುವ ಭೀತಿಯೂ ತಲೆದೋರ ಬಹುದು. ಅನಾರೋಗ್ಯಳಾದ ತಾಯಿಯು ಪುಟ್ಟ ಮಗುವಿನ ಲಾಲನೆ, ಪಾಲನೆ ಮಾಡಲು ವಿಫಲಳಾಗುತ್ತಾಳೆ. ಆಕೆಯ ಆರೋಗ್ಯದ ಮೇಲೆ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಮಗುವಿನ ಹಾಲಿನ ಸಮಯದ ಅವಧಿಯಲ್ಲಿ ಗರ್ಭಧಾರಣೆಗೆ ಒಳಗಾಗ ದಂತೆ ಎಚ್ಚರ ವಹಿಸಬೇಕು. ಹೆಚ್ಚಿನ ಮಹಿಳಾ ಸಾವು ಮಹಿಳೆಯರ ರಕ್ತಹೀನತೆ ಮತ್ತು ಹಿಮೋಗ್ಲೋಬಿನ್ ಕೊರತೆ ಇರು ವುದರಿಂದ ಆಗುತ್ತದೆ ಎಂದು ವೈದ್ಯಲೋಕ ತಿಳಿಸುತ್ತದೆ. ■

ಮೂರ್ಖರೊಂದಿಗಿನ ವಾದ ಸೆಗಣಿಯ ಮೇಲೆ ಕಲ್ಲೆಸೆದಂತೆ ಸರಿ

ಇಹ್ಸಾನ್

ಅಪಸ್ಮಾರ ರೋಗವಲ್ಲ

ಕಾಲೇಜು ಹಾಗೂ ಮನೆಯಲ್ಲಿ ಚಿಟ್ಟೆಯಂತೆ ಹಾರಿ ನಲಿಯುತ್ತಿರುವ ಇಪ್ಪತ್ತು ವರ್ಷದ ರೀನಾಳ ಬಾಳು ಒಮ್ಮೆಗೆ ಹಳಿ ತಪ್ಪಿದಂತಾಗಿದೆ. ಒಂದು ದಿನ ಹೂದೋಟದಲ್ಲಿ ಹೂ ಕೀಳುತ್ತಿರುವಾಗ ಉನ್ಮಾದದ ಲಕ್ಷಣಗಳೊಂದಿಗೆ ಮೂರ್ಛೆ ಹೋಗಿ ಬಿದ್ದಳು. ಬಳಿಕ ಒಂದೆರಡು ವರ್ಷ ಹಲವಾರು ಸಲ ಇದೇ ರೀತಿಯಾಯಿತು. ರೋಗ ಅಪಸ್ಮಾರವೆಂದು ತಿಳಿದು ಕುಟುಂಬಿಕರು ಕಂಗಾಲಾದರು. ಪಾಠ, ಆಟೋಟಗಳಲ್ಲಿ ಪ್ರತಿಭಾವಂತಳಾದ ಮುದ್ದಿನ ಮಗಳ ಭವಿಷ್ಯದ ಬಗ್ಗೆ ಹೆತ್ತವರು ಚಿಂತಾಕ್ರಾಂತರಾದರು.

ವೈದ್ಯರ ಹಾಗೂ ಸ್ನೇಹಿತರ ಸಲಹೆಯಂತೆ ರೀನಾಳನ್ನು ಪ್ರಸಿದ್ಧ ನರರೋಗ ತಜ್ಞರ ಬಳಿ ಕರಕೊಂಡು ಹೋದರು. ವೈದ್ಯರ ನಿರ್ದೇಶ ಪ್ರಕಾರ ಔಷಧಿ ಸೇವನೆಯಿಂದ ರೋಗ ಸಂಪೂರ್ಣ ವಾಸಿಯಾಯಿತು. ಈಗ ಮದುವೆಯಾಗಿ ಎರಡು ಮಕ್ಕಳ ತಾಯಿಯಾಗಿ ಸುಖ ಸಂಸಾರ ನಡೆಸುತ್ತಾ ಉನ್ನತ ಹುದ್ದೆಯನ್ನು ಅಲಂಕರಿಸಿ ನೆಮ್ಮದಿಯಾಗಿ ಬಾಳುತ್ತಿದ್ದಾಳೆ.

ಅಪಸ್ಮಾರದ ಬಗ್ಗೆ ಸಮಾಜದಲ್ಲಿರುವ ತಪ್ಪು-ಕಲ್ಪನೆಗಳು ಅನೇಕ ಹೆಣ್ಮಕ್ಕಳ ಹೊಂಗನಸನ್ನು ಛಿದ್ರಗೊಳಿಸಿದೆ. ಸಂಪೂರ್ಣ ಗುಣಮುಖರಾದ ಅಪಸ್ಮಾರ ಬಾಧಿತರನ್ನು ಕೂಡಾ ಯುವಕರು ವಿವಾಹವಾಗಲು ತಯಾರಿಲ್ಲ. ಮೈಗ್ರೇನ್ ಹೃಸ್ವ ದೃಷ್ಟಿಯ ರೋಗದಂತೆ ಅಪಸ್ಮಾರವು ಕೂಡಾ ಸಂಪೂರ್ಣವಾಗಿ ವಾಸಿಯಾಗುವ ಕಾಯಿಲೆಯಾದರೂ ಸಮಾಜವು ಅಂಗೀಕರಿಸುವುದಿಲ್ಲ. ಇಂತಹ ರೋಗಿಗಳಿಗೆ ಗರ್ಭ ಧರಿಸಲು ಸಾಧ್ಯವಿಲ್ಲವೆಂದೇ ಹೆಚ್ಚಿನವರು ಭಾವಿಸಿದ್ದಾರೆ. ಎಪ್ಪತ್ತು ಶೇಕಡಾ ರೋಗಿಗಳಿಗೆ ಸಾಧ್ಯವೆಂದು ಆಧುನಿಕ ವೈದ್ಯ ವಿಜ್ಞಾನ ದೃಢಪಡಿಸಿದೆ. ಅಂತಹ ಸ್ತ್ರೀಯರು ಗರ್ಭಧರಿಸುವ ಮೊದಲು ಮತ್ತು ಗರ್ಭಿಣಿಯಾದ ನಂತರ ವೈದ್ಯರ ಸಲಹೆಯಂತೆ ಔಷಧ ಸೇವಿಸಿದರೆ ಯಾವ ತೊಂದರೆಯೂ ಇಲ್ಲ.

ಪ್ರಪಂಚದಲ್ಲಿ ಐದು ಕೋಟಿ ಅಪಸ್ಮಾರ ರೋಗಿಗಳು ಇದ್ದಾರೆಂದು ಲೆಕ್ಕಾಚಾರ. ಇದರಲ್ಲಿ ಹೆಚ್ಚಿನವರಿಗೆ ಸಾಧಾರಣ ಚಿಕಿತ್ಸೆ ಸಾಕು. 70% ರೋಗಿಗಳು ಗ್ರಾಮೀಣ ಪ್ರದೇಶದವರು. ಭಾರತದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು ಹಾಗೂ ಆರೋಗ್ಯಾಧಿಕಾರಿಗಳಿಗೆ ಈ ವಿಷಯದಲ್ಲಿ ಮಹತ್ವದ ಜವಾಬ್ದಾರಿಕೆಯಿದೆ.

ಮೆದುಳಿನ ನಿಬಿಡ ಕಾರ್ಯ ಚಟುವಟಿಕೆಗಳಲ್ಲಿ ಕೆಲವು ಭಾಗಗಳ ಕೋಶಗಳು ಕ್ರಮರಹಿತವಾಗಿ ವಿದ್ಯುತ್ ತರಂಗಗಳನ್ನು ಹೊರಡಿಸುವುದೇ ಅಪಸ್ಮಾರಕ್ಕೆ ಕಾರಣ. ಪರೀಕ್ಷೆ ಮಾಡಿ ಇದಕ್ಕೆ ಚಿಕಿತ್ಸೆ ನೀಡಬಹುದು. ನಿಯಂತ್ರಣಕ್ಕೆ ಸಿಗದ ಕೆಲವು ಅಪರೂಪದ ರೋಗಿಗಳಲ್ಲಿ ಶಸ್ತ್ರಕ್ರಿಯೆಯ ಮೂಲಕ ಇಂತಹ ಕೋಶಗಳನ್ನು ತೆಗೆದು ಗುಣಮುಖಗೊಳಿಸುವ ವಿಧಾನವೂ ಆವಿಷ್ಕರಿಸಲ್ಪಟ್ಟಿದೆ.

ದೇಶದ ವಿವಿಧ ಭಾಗಗಳಲ್ಲಿ ಅಪಸ್ಮಾರದ ಬಗ್ಗೆ ಸಂಶೋಧನೆಗಳು ತೀವ್ರಗತಿಯಿಂದ ನಡೆಯುತ್ತಿದೆ. ಅಪಸ್ಮಾರ ರೋಗಿಗಳಿಗೆ ದೀರ್ಘಕಾಲ ಚಿಕಿತ್ಸೆ, ಸಲಹೆಗಳನ್ನು ನೀಡುವ ಪ್ರತ್ಯೇಕ ವಿಭಾಗವೇ ಇದೆ. ಬಡ ರೋಗಿಗಳಿಗೆ ಸಹಾಯ ಮಾಡುವ ಸಂಘ ಸಂಸ್ಥೆಗಳೂ ಇವೆ.

ವ್ಯಕ್ತಿಗಳ ಬೆಳವಣಿಗೆ, ಪ್ರತಿಭೆ, ಕೌಶಲ್ಯಗಳ ಪ್ರಕಟಣೆಗೆ ಈ ರೋಗ ತಡೆಯಲ್ಲ ಎಂದು ಇತಿಹಾಸವೇ ಸಾಕ್ಷಿ. ವಿಲಿಯಮ್ ಶೇಕ್ಸ್‌ಪಿಯರ್, ಹೆಮಿಂಗ್‌ವೇ, ನೆಪೋಲಿಯನ್, ಐಸಾಕ್ ನ್ಯೂಟನ್ ಅಪಸ್ಮಾರ ರೋಗಿಗಳಾಗಿದ್ದರು. ಫೀಲ್ಡಿಂಗ್ ಹಾಗೂ ಬ್ಯಾಟಿಂಗ್‌ನಲ್ಲಿ ಪ್ರಬಲನಾದ ದಕ್ಷಿಣ ಆಫ್ರಿಕದ ದಾಂಡಿಗ ಜಾಂಟಿ ರೋಡ್ಸ್ ಕೂಡಾ ಇದೇ ಗುಂಪಿಗೆ ಸೇರುತ್ತಾರೆ. ■

– ಮುಖ್ಯಾ. ಕಂದಕ್

ಬಿಗಾ ಇದೆ ಓ

ಮಹಿಳಾ ಪೈಲಟ್‌ಳ ಸಮಯ ಪ್ರಜ್ಞೆ

ಆಗಸದಲ್ಲಿ ನಿರಾಯಾಸವಾಗಿ ಹಾರುತ್ತಿದ್ದ ವಿಮಾನ ಇನ್ನೇನು ಭೂಮಿಗೆ ಇಳಿಯಬೇಕೆನ್ನುವಷ್ಟರಲ್ಲಿ ಚಕ್ರವೇ ಕಳಚಿಕೊಂಡಿರುವ ವಿಷಯ ಪೈಲಟ್‌ಗೆ ಗೊತ್ತಾದರೆ ಪರಿಸ್ಥಿತಿ ಹೇಗಿರಬೇಡ ಊಹಿಸಿ.

ಇಂಥ ಸ್ಥಿತಿಯನ್ನು ಏರ್ ಇಂಡಿಯಾ ವಿಮಾನದ ಮಹಿಳಾ ಪೈಲಟ್‌ಗಳು ಭಾನುವಾರ ಎದುರಿಸಿದರು. ಆದರೆ ಸ್ವಲ್ಪವೂ ವಿಚಲಿತರಾಗದೆ ಸಮಯಪ್ರಜ್ಞೆ ತೋರಿ 48 ಪ್ರಯಾಣಿಕರ ಜೀವ ಕಾಪಾಡಿ ಸೈ ಎನಿಸಿಕೊಂಡರು.

ಸಿಲ್ಚೇರ್‌ನಿಂದ ಗುವಾಹಟಿಗೆ ಪ್ರಯಾಣ ಬೆಳೆಸಿದ್ದ ವಿಮಾನ ಗುವಾಹಟಿಯ ಲೋಕ ಪ್ರಿಯ ಗೋಪಿನಾಥ್ ಬೋರ್ಡೊಲಾಯ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಬೇಕೆನ್ನುವಾಗ ಚಕ್ರ ಕಳಚಿಕೊಂಡಿರುವ ವಿಷಯ ಗೊತ್ತಾಯಿತು. ಕೂಡಲೇ ವಿಮಾನ ನಿಲ್ದಾಣ ಅಧಿಕಾರಿಗಳು ಪೈಲಟ್‌ಗೆ ಸುದ್ದಿ ತಲುಪಿಸಿದರು.

ಈ ವಿಮಾನ ಚಾಲನೆ ಮಾಡುತ್ತಿದ್ದವರು ಮಹಿಳಾ ಪೈಲಟ್‌ಗಳಾದ ಊರ್ಮಿಳಾ ಯಾದವ್ ಮತ್ತು ಸಹ ಪೈಲಟ್ ಯಶೂ. ನಿಲ್ದಾಣದ ಅಧಿಕಾರಿಗಳಿಗೆ ಈ ವಿಷಯ ತಿಳಿಸಿದ ಊರ್ಮಿಳಾ, ನಿಲ್ದಾಣದ ಸಮೀಪವೇ ಹಾರಾಡುತ್ತಾ ಇಂಧನ ಖಾಲಿ ಮಾಡುವುದಾಗಿ ತಿಳಿಸಿದರು. ಇದಕ್ಕೆ ಕೂಡಲೇ ಅನುಮತಿ ದೊರೆಯಿತು. ಸುಮಾರು 40 ನಿಮಿಷ ಹಾರಾಟ ನಡೆಸಿದ ನಂತರ ಊರ್ಮಿಳಾ ವಿಮಾನವನ್ನು ಜಾಗರೂಕತೆಯಿಂದ ಇಳಿಸಿದರು. ವಿಮಾನದಲ್ಲಿದ್ದ ಪ್ರಯಾಣಿಕರು ನಿಟ್ಟುಸಿರು ಬಿಟ್ಟರು.

ಪರಿಸ್ಥಿತಿಯನ್ನು ಅತ್ಯಂತ ಅಚ್ಚುಕಟ್ಟಾಗಿ ನಿಭಾಯಿಸಿದ ಊರ್ಮಿಳಾ ಹಾಗೂ ಯಶೂಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬಂದಿದೆ.

ಸುರಕ್ಷಿತ ಭೂ ಸ್ಪರ್ಶದ ನಂತರ ಖುದ್ದು ಅಸ್ಸಾಂ ಮುಖ್ಯಮಂತ್ರಿ ತರುಣ್ ಗೊಗೋಯ್ ದೂರವಾಣಿ ಕರೆ ಮಾಡಿ ಊರ್ಮಿಳಾ ಮತ್ತು ಯಶೂಗೆ ಅಭಿನಂದನೆ ಸಲ್ಲಿಸಿದ್ದಾರೆ.

ಡ್ರೈವರ್ ಇಲ್ಲದೆ 4 ಕಿ.ಮೀ. ಚಲಿಸಿದ ರೈಲು

ಬಿಹಾರ ಯಾವುದಕ್ಕೆಲ್ಲ ಹೆಸರು ಗಳಿಸಿದೆ ಎಂಬುದನ್ನು ನಾವು ಬಲ್ಲೆವು. ಹಲವಾರು ರೈಲ್ವೆ ಮಂತ್ರಿಗಳನ್ನು ಈ ರಾಜ್ಯ ನಮಗೆ ನೀಡಿದೆ. ಇತ್ತೀಚೆಗಷ್ಟೇ ಶ್ರಮ ಜೀವಿ ಎಕ್ಸ್‌ಪ್ರೆಸ್ ಡ್ರೈವರ್ ಇಲ್ಲದೆ 4 ಕಿ.ಮೀ. ಚಲಿಸಿದೆ. ಸ್ಟೇಶನ್ ಒಂದರಲ್ಲಿ ನಿಲ್ಲಿಸಿದ ಟ್ರೈನ್ ನಿಧಾನಕ್ಕೆ ಚಲಿಸುವುದನ್ನು ಗಮನಿಸಿದ ಸ್ಟೇಶನ್ ಮಾಸ್ಟರ್ ತನ್ನ ಬುದ್ಧಿವಂತಿಕೆಯಿಂದಾಗಿ ಆ ಕಡೆಗೆ ಬರುವ ಎಲ್ಲ ರೈಲುಗಳನ್ನು ಬರುವುದನ್ನು ನಿಲ್ಲಿಸುವುದರ ಮೂಲಕ ಸಂಭವಿಸ ಬಹುದಾಗಿದ್ದ ಅವಘಡದಿಂದ ರಕ್ಷಿಸಿದ್ದಾರೆ. ರೈಲು ಮೆಲ್ಲನೇ ಚಲಿಸುತ್ತಿದ್ದುದ್ದರಿಂದ ಓಡಿಕೊಂಡು ಹೋಗಿ ಬ್ರೇಕ್ ಹಾಕಲು ಸಾಧ್ಯವಾಯಿತು. ಚಾಲಕನ ಅಚಾತುರ್ಯದಿಂದ ಈ ಘಟನೆ ಸಂಭವಿಸಿದೆ. ಇಬ್ಬರು ಚಾಲಕರನ್ನು ಹಾಗೂ ಸೂಪರ್‌ವೈಸರನ್ನು ಅಮಾನತು ಮಾಡಲಾಗಿದೆ. ಬಹುಶಃ ಶ್ರಮಜೀವಿ ರೈಲಿನ ಪ್ರಯಾಣಿಕರು ಏನೋ ಪುಣ್ಯ ಮಾಡಿರಬೇಕು.

ರೈಲಲ್ಲಿ ಹೆರಿಗೆ ಮಾಡಿಸಿದ ರಈಸ್ ದಂಪತಿ!

ಗೋವಾದಿಂದ ಮಂಗಳೂರಿನತ್ತ ಪಯಣಿಸುತ್ತಿದ್ದ ರೈಲು ಇನ್ನು ಅರ್ಧ ಗಂಟೆಯಲ್ಲಿ ತಲುಪಲಿದೆ ಎನ್ನುವಷ್ಟರಲ್ಲಿ ಬೋಗಿಯೊಂದರ ಶೌಚಾಲಯದಲ್ಲಿ ಮಹಿಳೆಯೊಬ್ಬಳ ಬೊಬ್ಬೆ ಕೇಳಿಸುತ್ತದೆ. ವಿಚಾರಿಸಿದಾಗ ಪ್ರಸವ ವೇದನೆ! ಎಲ್ಲರೂ ಅವರವರ ಪಾಡಿಗೆ ಇದ್ದರು. ಆದರೆ ರೈಲಿನಲ್ಲಿದ್ದ ಮುರ್ಡೇಶ್ವರದ ಯುವಕ ರಯೀಸ್ ಅಹ್ಮದನಿಗೆ ಸುಮ್ಮನೆ ಕುಳಿತು ಕೊಳ್ಳಲಾಗಲಿಲ್ಲ. ಇಕ್ಕಟ್ಟಾದ ಟ್ಯಾಲೆಟ್ ನಲ್ಲಿ ಅದೇ ರೀತಿ ಪ್ರಸವಕ್ಕೆ ಸೂಕ್ತವಲ್ಲದ ಜಾಗದಲ್ಲಿ ಪ್ರಸವ ಸರಿಯಲ್ಲವೆಂದು ಮನಗಂಡು ತಕ್ಷಣ ನಾಲ್ಕು ಸೀಟುಗಳನ್ನು ಖಾಲಿ ಮಾಡಿ ಅಲ್ಲಿ ಬಟ್ಟೆ ಅಡ್ಡ ಕಟ್ಟಿ ಪ್ರಸವಕ್ಕೆ ವ್ಯವಸ್ಥೆ ಮಾಡಿಸಿದ. ಟ್ಯಾಲೆಟ್‌ನ ಬಾಗಿಲು ತೆರೆದಾಗ ಅಲ್ಲಿನ ಸ್ಥಿತಿ ಹೃದಯ ವಿದ್ರಾವಕವಾಗಿತ್ತು. ಮಹಿಳೆಯ ಸೀರೆ ಟಾಯ್ಲೆಟ್ ಕೆಳಭಾಗದಲ್ಲಿ ಹಾಸಲಾಗಿತ್ತು. ಗಂಡನ ಮಡಿಲಲ್ಲಿ ತಲೆ ಇಟ್ಟು ಬಿಕ್ಕುತ್ತಿದ್ದಳು. ಗಂಡ ಆಕೆಯ ಹೊಟ್ಟೆಯನ್ನು ನೀವುತ್ತಿದ್ದ. ಮಹಿಳೆಯನ್ನು ಅಲ್ಲಿಂದೆತ್ತಿ ತಾತ್ಕಾಲಿಕ ಹೆರಿಗೆ ಕೋಣೆಗೆ ತರಲಾಯಿತು. ಬೋಗಿಯಲ್ಲಿ ಸುಮಾರು 25ಕ್ಕೂ ಹೆಚ್ಚು ಮಂದಿ ಮಹಿಳೆಯರೇ ಇದ್ದರು. ರಈಸ್ ಬೊಬ್ಬೆ ಹಾಕಿ ನೆರವಿಗೆ ಅಂಗಲಾಚಿದ. ಯಾರೊಬ್ಬರೂ ನೆರವಿಗೆ ಬರಲಿಲ್ಲ. ರಈಸ್ ಅನಿವಾರ್ಯವಾಗಿ ಪತ್ನಿಯನ್ನು ಕರೆದು ಮಹಿಳೆಯ ಕಿಬ್ಬೊಟ್ಟೆ ನೀವಲು ಹೇಳಿದರು. ಹತ್ತೇ ನಿಮಿಷದಲ್ಲಿ ನಾರ್ಮಲ್ ಡೆಲಿವರಿ ಆಯಿತು. ಹೊಕ್ಕುಳ ಬಳ್ಳಿ ಕತ್ತರಿಸಲು ಕತ್ತರಿ ಬೇಕಾಗಿತ್ತು. ಕತ್ತರಿಗಾಗಿ ಬೊಬ್ಬೆ ಹಾಕಿದಾಗ ಯಾರೋ ಪುಣ್ಯಾತ್ಮ ಕತ್ತರಿ ತಂದು ಕೊಟ್ಟ. ಹೊಕ್ಕುಳ ಬಳ್ಳಿ ಕತ್ತರಿಸಿ ಮಗುವನ್ನು ಮತ್ತು ತಾಯಿಯನ್ನು ಶುಚಿಗೊಳಿಸುತ್ತಾರೆ. ಮಾತ್ರವಲ್ಲ ಸಹ ಪ್ರಯಾಣಿಕರಿಂದ ರೂ. 4000/– ಸಂಗ್ರಹಿಸಿ ಆ ದಂಪತಿಗಳಿಗೆ ನೀಡುತ್ತಾನೆ. ಇವೆಲ್ಲವನ್ನು ಮಾಡಿದ್ದು ಗಡ್ಡಧಾರಿಯಾದ ರಈಸ್ ಅಹ್ಮದ್. ಆದರೆ ಈ ಘಟನೆ ಕೆಲವು ಪತ್ರಿಕೆಯನ್ನು ಬಿಟ್ಟರೆ ಪ್ರಮುಖ ಮಾಧ್ಯಮಗಳಲ್ಲಿ ವಿಷಯವೇ ಆಗದಿರುವುದು ಮಾಧ್ಯಮದವರ ಮುಸ್ಲಿಮ್ ದ್ವೇಷವನ್ನು ಎತ್ತಿ ತೋರಿಸುತ್ತದೆ. ಏನೇ ಆಗಲಿ ಹ್ಯಾಟ್ಸ್‌ಅಪ್ ರಈಸ್!

ಓ ಜನರೇ, ನಿಮ್ಮ ಪಾಲಕ ಪ್ರಭುವಿನ ವತಿಯಿಂದ ನಿಮ್ಮ ಬಳಿಗೆ ಸುವ್ಯಕ್ತ ಪ್ರಮಾಣವು ಬಂದು ಬಿಟ್ಟಿದೆ. ನಾವು ನಿಮಗೆ ಸ್ಪಷ್ಟವಾಗಿ ದಾರಿ ತೋರಿಸಿಕೊಡುವಂತಹ ಜ್ಯೋತಿಯನ್ನು ಕಳುಹಿಸಿದ್ದೇವೆ. (ಪವಿತ್ರ ಕುರ್‌ಆನ್ 4:174)

ಪ್ರೊ. ಯು. ಅನ್ವರ್‌ಅಲಿ ಸ್ಥಾಪನೆ : 1992

ತೌಹೀದ್ ಇಲೆಕ್ಟ್ರಿಕಲ್ಸ್

ಸರಕಾರದ ಅನುಮತಿಪಡೆದ ವಿದ್ಯುತ್‌ಗುತ್ತಿಗೆದಾರರು. Class I No. 3880

ಬಿಲ್ಡಿಂಗ್ ವಯರಿಂಗ್, ಪ್ಲಂಬಿಂಗ್, ಕೊಳವೆ ಬಾವಿ ತೋಡಿ ಸಬ್‌ಮರ್ಸಿಬಲ್ ಪಂಪುಗಳನ್ನು ಅಳವಡಿಸಿ ಕೊಡಲಾಗುವುದು.

ಹೊಸ ಆಕರ್ಷಣೆ
ಎಲ್ಲಾ ಋತುಗಳಲ್ಲಿ ಬಿಸಿ ನೀರಿನ ಚಿಲುಮೆಯೊಂದಿಗೆ ಸ್ನಾನ ಮಾಡಲು ಭರವಸೆಯ ಕಂಪೆನಿಯ ಉತ್ತಮ ಗುಣಮಟ್ಟದ ಸೋಲಾರ್‌ವಾಟರ್‌ಹೀಟರನ್ನು ಅಳವಡಿಸಿ ಕೊಡಲಾಗುವುದು.

ಮೊಬೈಲ್ : 94497 73786 / 99642 37860

ಶಾನ್‌ಮಾರ್ಕೆಟ್, ಕೊಂಬಗುಡ್ಡೆ, ಕಾಪು, ಉಡುಪಿ ಜಿಲ್ಲೆ, ಫೋನ್ : 0820 - 3201694 / 2552086

ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಖರ್ಚುಮಾಡಿದುದನ್ನು ಆಡಿಕೊಳ್ಳದವರ ಮತ್ತು ಪರಪೀಡನೆಗೈಯದವರ ಪ್ರತಿಫಲವು ಅವರ ಪ್ರಭುವಿನ ಬಳಿ ಇದೆ. ಅವರಿಗೆ ಯಾವತ್ತು ಭಯ ಮತ್ತು ವ್ಯಥೆಯ ಸಂಭವವಿಲ್ಲ.

ಒಂದು ಸವಿ ನುಡಿ ಮತ್ತು ಕ್ಷಮಾಗುಣವು ಮನನೋಯಿಸುವ ದಾನಕ್ಕಿಂತ ಉತ್ತಮ. ಅಲ್ಲಾಹ್ ನಿರಪೇಕ್ಷನು ಮತ್ತು ಸಹನಶೀಲತೆ ಅವನ ವಿಶೇಷತೆಯಾಗಿದೆ.

ಓ ಸತ್ಯ ವಿಶ್ವಾಸಿಗಳೇ, ತನ್ನ ಸಂಪತ್ತನ್ನು ಆಡಂಬರಕ್ಕಾಗಿ ಖರ್ಚು ಮಾಡುವವನಂತೆ ಹಾಗೂ ಅಲ್ಲಾಹ್ ಮತ್ತು ಪರಲೋಕದಲ್ಲಿ ವಿಶ್ವಾಸವಿರಿಸದವನ ಹಾಗೆ ಉಪಕಾರಭಾರವಿರಿಸಿಯೂ ನೋಯಿಸಿಯೂ ನಿಮ್ಮ ದಾನಧರ್ಮಗಳನ್ನು ನೀವು ನಿಷ್ಫಲಗೊಳಿಸಿಕೊಳ್ಳಬೇಡಿರಿ.

(ಪವಿತ್ರ ಕುರ್‌ಆನ್ 2: 262 – 64)

P.B. IBRAHIM

ENGINEERS & CONTRACTORS

HEAD OFFICE : BUNDER ROAD
BHATKAL - 581 320, DIST: U.K

Ph. : Office : 08385 - 225456, 228096, 226696
Resi. : 225236, 226236
Fax : 08385 - 225456 Grams : PEBECON



ಕಥೆ

ಚಾಂದಿನಿ

ಫ್ಲೋರ ಪ್ರಸಾದ್, ಕೆ.ಜಿ.ಎಫ್.

ಕತ್ತಲು ತುಂಬಿದ ಕೊಠಡಿಗೆ ಲೈಟು ಹಾಕುವ ಮನಸ್ಸು ಬರಲಿಲ್ಲ ಚಾಂದಿನಿಗೆ ಅಮ್ಮಾ... ನೀನು ಎಲ್ಲಿದ್ದೀಯಮ್ಮಾ ನನಗೆ ಭಯ ಆಗ್ತಾ ಇದೆ ಎಂದು ಒಂದೇ ಸಮನೆ ಅರಚುವ ಸಂಜೀವನ ಪ್ರಶ್ನೆಗೆ ಉತ್ತರಿಸುವ ಗೋಜಿಗೂ ಆಕೆ ಹೋಗಲಿಲ್ಲ. ಬದುಕಿನ ಬಗ್ಗೆ ಸುಂದರ ಆಶಾ ಸೌಧಗಳನ್ನು ಕಟ್ಟಿಕೊಂಡ ಚಾಂದಿನಿಗೆ ಬದುಕು ಏಕಾಏಕಿ ಹೀಗಾಗಬಹುದೆಂಬ ಕಲ್ಪನೆಯೂ ಇರಲಿಲ್ಲ.

ಇಪ್ಪತ್ತರ ಹರೆಯದಲ್ಲಿ ಆಕೆಯ ಚೆಲುವು ಇಮ್ಮಡಿಸಿತ್ತು. ದಪ್ಪನೂ ಅಲ್ಲದ ಕೃಶವೂ ಅಲ್ಲದ ಸುಕೋಮಲ ಶರೀರ. ಹಾಲು ಬಿಳುಪಿನ ಮುಖದಲ್ಲಿ ದಟ್ಟವಾಗಿ ಒಂದಕ್ಕೊಂದು ಕೂಡಿಕೊಂಡ ಹುಬ್ಬು. ಒಂದು ಮುಷ್ಠಿಯಲ್ಲಿ ಹಿಡಿಯಲಸಾಧ್ಯವಾದ ನೀಳ ಜಡೆ. ಮೃದು ಮಾತು. ತಿಳಿನಗು ಆಕೆ ಸುಂದರಿಯರ ಗುಂಪಿಗೆ ಸೇರುವುದರಲ್ಲಿ ಸಂದೇಹವಿರಲಿಲ್ಲ.

ಇಬ್ಬರು ಅಣ್ಣಂದಿರು ಮುದ್ದಿನ ತಂಗಿಗೆ ತಂದೆಯಿಲ್ಲದ ಕೊರತೆ ನೀಗಿದ್ದರು. ಒಬ್ಬಳೇ ಮಗಳಿಗೆ ಒಳ್ಳೆಯ ಕಡೆ ಸಂಬಂಧ ಬೆಳೆಸ ಬೇಕೆಂದು ತಾಯಿ ಇಬ್ಬರು ಗಂಡು ಮಕ್ಕಳನ್ನು ದುಬಾಯಿಗೆ ಕಳುಹಿಸಿದ್ದರು.

ತಂಗಿ ಮದುವೆಗೆ ಅಣ್ಣ ತಮ್ಮ ಬಹಳ ಜತನದಿಂದ ಹಣ ಸೇರಿಸುವ ಕಾರ್ಯ ಮಾಡಿದರೆ ತಾಯಿ ವರ ಹುಡುಕುವ ಕೆಲಸದಲ್ಲಿ ಮಗ್ನರಾದರು.

ಚಾಂದಿನಿ ಚೆಲುವೆಯಾದರೂ ಹೆಚ್ಚು ಓದಿದವಳಲ್ಲ. ಬರುವ ಗಂಡುಗಳಿಗೆಲ್ಲಾ ಓದಿದ ಹೆಣ್ಣು ಬೇಕು. ಹೀಗೆ ಮದುವೆ ಮುಂದೂಡುತ್ತಾ ಹೋಗುತ್ತಿತ್ತು.

ಒಂದು ದಿನ ದೂರ ಸಂಬಂಧಿ ಯೊಬ್ಬರು ಕೊಡಗಿನಿಂದ ಕೇರಳಕ್ಕೆ ಬಂದಿದ್ದರು. ನಮ್ಮೂರಿನಲ್ಲಿ ಒಬ್ಬ ಹುಡುಗ ಇದ್ದಾನೆ. ಆತನೂ ಹೆಚ್ಚು ಓದಿಲ್ಲ. ಮನೆಯಲ್ಲಿ ಸಾಧಾರಣ ಅನುಕೂಲವಿದೆ. ಸ್ವಲ್ಪ ಕಾಫಿ ತೋಟ, ಅಡಿಕೆ ತೋಟ, ಗದ್ದೆ ಹೀಗೆ ಜೀವನಕ್ಕೇನೂ ತೊಂದರೆ ಯಿಲ್ಲ. ಇಬ್ಬರು ಹೆಣ್ಣು ಮಕ್ಕಳ ಮದುವೆಯೂ ಆಗಿದೆ. ಯಾವುದಕ್ಕೂ ನೋಡಿ, ಎಂದಾಗ ಚಾಂದಿನಿಯ ತಾಯಿ ಚಿಂತಾಕ್ರಾಂತರಾದರು.

ಕರ್ನಾಟಕಕ್ಕೆ ಹೆಣ್ಣು ಮಗಳನ್ನು ಕೊಡುವ ಉತ್ಸಾಹ ಚಾಂದಿನಿ ತಾಯಿಗೆ ಇರಲಿಲ್ಲ.

ಸ್ವಲ್ಪ ಅನುಕೂಲವಾಗಿಯೇ ಇದ್ದಾರೆ ಎಂದಾಗ ಇದಕ್ಕಿಂತ ಒಳ್ಳೆಯ ವರ ಸಿಕ್ತಾನ? ಎಂಬ ಯೋಚನೆ ಬೇರೆ.

"ಸರಿ" ಯಾವುದಕ್ಕೂ ಬರ ಹೇಳಿ ಎಂದರು ಚಾಂದಿನಿ ತಾಯಿ. ಆ ದಿನ ಚಾಂದಿನಿಗೆ ಇನ್ನೂ ಹಸಿರಾಗಿದೆ. ಆಕೆ ಎಂದೂ ಆ ದಿನವನ್ನು ಮರೆಯಲಾರಳು!

ಅಂದು ಶುಕ್ರವಾರ ಚಾಂದಿನಿ 5 ಗಂಟೆಗೆಲ್ಲಾ ಎದ್ದು ಬಾವಿಯಿಂದ ನೀರು ಸೇದಿ ಹಾಕಿ ಸ್ನಾನಕ್ಕೆ ಹಂಡೆ ಉರಿ ಹಾಕಿ ನೀರು ಕಾಯಿಸಿದಳು.

ತನ್ನ ಮೈಕಾಂತಿ ಮಿರುಗುವಂತೆ ಮಾಡಲು ಶುದ್ಧವಾದ ತೆಂಗಿನ ಎಣ್ಣೆ ಯನ್ನು ತೀಡಿಸಿಕೊಂಡು ಸ್ನಾನ ಮಾಡಿದಳು. ಹಸಿರು ಒಡಲಿಗೆ ಮೆರುನ್ ಬಾರ್ಡರ್ ಇರುವ ಸೀರೆ ಉಟ್ಟುಕೊಂಡು ಬೆನ್ನು ತುಂಬಾ ಹರಡಿದ ನೀಳ ಕೂದಲನ್ನು ಒಣಗಿ ಸಲು ಮನೆಯ ಮುಂದಿನ ಕೈ ತೋಟದಲ್ಲಿ ನಿಂತಿದ್ದಳು.

ಮನೆ ಮುಂದೆ ಅಂಬಾಸಿಡರ್ ಕಾರೊಂದು ನಿಂತಾಗ ಮನೆಯ ಒಳಗೆ ಹೋಗಬೇಕೋ ಇಲ್ಲ ಅಲ್ಲೇ ನಿಲ್ಲಬೇಕೋ ತಿಳಿಯದ ಸಂದಿಗ್ಧತೆ. ಕೇರಳದ ಸೀರೆಯುಟ್ಟ ವೃದ್ಧೆ ಯೊಬ್ಬರು ಮೊದಲು ಕಾರಿನಿಂದ ಇಳಿದರು. ಅವರೊಂದಿಗೆ ಹೆಣ್ಣು ಮಕ್ಕಳಿಬ್ಬರೂ ಕೈಯಲ್ಲಿ ಮಗುವನ್ನು ಹಿಡಿದುಕೊಂಡು ಇಳಿದರು. ಅವರ ಹಿಂದೆ ಚಿಗುರು ಮೀಸೆಯ ಜೊಂಪ್ ಕೂದಲಿನ ಆರಡಿ ನಿಲುವಿನ ಸ್ಫುರದ್ರೂಪಿ ಯುವಕನೊಬ್ಬ ಇಳಿದ. ಚಾಂದಿನಿಯ ಮೈ ರೋಮಾಂಚನ ಗೊಂಡಿತು. ಇಂದಿಗೂ ಆ ಕ್ಷಣ

ಉದ್ಯೋಗಿ

ಗೆಳೆಯ: ನನಗೆ ನಾಲ್ಕು ಮಕ್ಕಳು.

ಇನ್ನೊಬ್ಬ ಗೆಳೆಯ: ಅವರೇನು ಮಾಡ್ತಾರೆ.

ಗೆಳೆಯ: ಒಬ್ಬ MBA, ಇನ್ನೊಬ್ಬ B.Com, 3ನೆಯವ B.Sc., ನಾಲ್ಕನೆಯವ ಕಳ್ಳ.

ಇನ್ನೊಬ್ಬ ಗೆಳೆಯ: ಕಳ್ಳನನ್ನು ಮನೆಯಿಂದ ಹೊರದಬ್ಬುವುದಿಲ್ಲವೇಕೆ?

ಗೆಳೆಯ: ಅವನೇ ದುಡಿಯುವ ವನು. ಬೇರೆಲ್ಲರೂ ನಿರುದ್ಯೋಗಿಗಳು.

ನೆನಪಿಸಿಕೊಂಡಾಗ ಮೈಯೆಲ್ಲಾ ರೋಮಾಂಚನ. ಈ ಸ್ಫುರದ್ರೂಪಿ ಯುವಕ ಓದಲಿಲ್ಲವೇ? ಚಾಂದಿನಿಗೆ ನಂಬಲಾಗಲಿಲ್ಲ. ಅವನ ಸೌಂದರ್ಯ ದಂತೆಯೇ ಅವನ ವೇಷಭೂಷಣವೂ ಇತ್ತು. ಬ್ಲೂ ಜೀನ್ಸ್ ಪ್ಯಾಂಟಿಗೆ ಬಿಳಿ ಚಕ್ಸ್ ಶರ್ಟ್ ತೊಟ್ಟ ಆತ ಒಬ್ಬ ಸಿನಿಮಾ ಹೀರೋನಂತೆ ಕಂಡ.

ಹಿಂದೆ ಮುಂದೆ ಯೋಚಿಸುವ ಪ್ರಶ್ನೆಯೇ ಉಳಿಯಲಿಲ್ಲ. ಮೊದಲ ನೋಟಕ್ಕೆ ಮಾರು ಹೋದ ಚಾಂದಿನಿ ತನ್ನ ಒಪ್ಪಿಗೆ ನೀಡಿದಳು. ಚಾಂದಿನಿಯನ್ನು ತಿರಸ್ಕರಿಸುವ ಕಾರಣಗಳೇನೂ ಇರಲಿಲ್ಲ. ಅದಲ್ಲದೆ ಏಳನೆಯ ತರಗತಿ ವರೆಗೆ ಓದಿದ ತನಗೆ ಇನ್ಯಾವ ಹೆಣ್ಣು ಸಿಕ್ಕೀತು? ನೋಡಲು ಸುಂದರವಾಗಿದ್ದಾಳೆ. ಆತನೂ ಒಪ್ಪಿಕೊಂಡ.

ಶುಭ ಮುಹೂರ್ತ ನೋಡಿ ಗುರು ಹಿರಿಯರು ಮದುವೆ ನಿಶ್ಚಯಿಸಿದರು. ಅಣ್ಣಂದಿರು ಶಕ್ತಿ ಮೀರಿ ತಂಗಿಗೆ ಚಿನ್ನಾಭರಣ ಮಾಡಿಸಿದ್ದರು. ಒಟ್ಟಿನಲ್ಲಿ ಮದುವೆ ಮುಗಿಯಿತು. ನೂರಾರು ಆಶಾ ಸೌಧಗಳನ್ನು ತನ್ನ ಪುಟ್ಟ ಹೃದಯದಲ್ಲಿ ತುಂಬಿಕೊಂಡ ಚಾಂದಿನಿ ಇನಿಯನ ಪ್ರೀತಿಯ ಸಾಗರದಲ್ಲಿ ತೇಲಾಡಿದಳು.

ದೂರದ ಚಿಟ್ಟೆ ನುಣ್ಣಗೆ ಎಂಬಂತೆ ಆ ಸವಿ ಬಹಳ ದಿನ ಉಳಿಯಲಿಲ್ಲ. ಅತ್ತೆ ಮನೆಯ ಕಹಿ ವಾತಾವರಣದ ಅರಿವು ಹಂತಹಂತ ವಾಗಿ ಚಾಂದಿನಿಗೆ ಅರಿವಾಯಿತು.

ಬೆಳಿಗ್ಗೆ 5 ಗಂಟೆಯಿಂದ ರಾತ್ರಿ 11 ಗಂಟೆಯ ವರೆಗೆ ಅವಿರತವಾಗಿ ಮೂಕೆತ್ತಿನಂತೆ ದುಡಿಯುವ ಸಂಬಳ ವಿಲ್ಲದ "ಆಳು" ನಾನು ಎಂಬ ಕಟು ಸತ್ಯ ಚಾಂದಿನಿಗೆ ತಿಳಿದು ಹೋಯಿತು.

ಅವಳ ಅರಳಿದ ಯೌವನ, ಸುಂದರ ಕಾಯ ಕೃಶವಾಯಿತು. ಅಷ್ಟೇ ಆಗಿದ್ದರೆ ಆಕೆ ದುಃಖಿಸುತ್ತಿರಲಿಲ್ಲವೇನೋ?

ಆದರೆ ತನ್ನ ಹೀರೊ ಸಂಜಯ್ ಒಬ್ಬ "ಕುಡುಕ" ಎಂಬುದು ಮಾತ್ರ ಅವಳ ಬಾಳಿಗೆ

ಕತ್ತಲು ಕವಿದಂತೆ ಆಗಿತ್ತು. ಬಿಡುವಿಲ್ಲದ ದುಡಿತ! ಅತ್ತೆಯ ಬಿರುನುಡಿ, ಕುಡುಕ ಗಂಡನ ಅನಾದರ ಇದನ್ನೆಲ್ಲಾ ಸಹಿಸುವ ಶಕ್ತಿ ಚಾಂದಿನಿಗೆ ಇರಲಿಲ್ಲ. ಬರ ಬರುತ್ತಾ ಬಾಳು ನರಕ ಸದೃಶವಾಯಿತು.

ಸಮಯ ಯಾರಿಗಾಗಿಯೂ ಕಾಯುವುದಿಲ್ಲ. ಪ್ರಕೃತಿ ಸಹಜವಾಗಿ ಆಗಬೇಕಾದುದೆಲ್ಲಾ ಆಗುತ್ತದೆ. ಈ ನಡುವೆ ಚಾಂದಿನಿಗೆ ನವಮಾಸ ತುಂಬಿ ಹೆರಿಗೆಯ ಸಮಯವೂ ಬಂದು ಬಿಟ್ಟಿತು.

ಚಾಂದಿನಿಗೆ ತವರು ಮನೆಗೆ ಹೋಗುವ ಉತ್ಸಾಹ ಹುಮ್ಮಸ್ಸು ಇರಲಿಲ್ಲ. ಆದರೂ ವಾಡಿಕೆಯಂತೆ ಆಕೆ ಕೇರಳಕ್ಕೆ ಹೋದಳು.

ಬೆಂದು ಬಸವಳಿದಂತೆ ಬಂದ ಮಗಳ ಮುಖ ಕಂಡು ತಾಯಿ ಕರುಳು ಚುರುಕ್ ಎಂದಿತು. ತನ್ನ ಬಾಳಿನ ನೋವಿನ ಕಹಿ ಕಂತೆಯನ್ನು ಚಾಂದಿನಿ ತವರು ಮನೆಯಲ್ಲಿ ಬಿಚ್ಚಿಡಲಿಲ್ಲ. ಆದರೂ ಮಗಳಲ್ಲಾದ ಗಮನಾರ್ಹ ಬದಲಾವಣೆ ಅವರನ್ನು ಅಧೀರರನ್ನಾಗಿಸಿತ್ತು.

ಚಾಂದಿನಿ ಗಂಡು ಮಗುವಿಗೆ ಜನ್ಮ ನೀಡಿದಾಗ ಮಗುವಿಗೆ ಒಂದು ಚೈನ್, ಉಂಗುರ ಇತ್ಯಾದಿ ನೀಡಿ ಸಂಜೀವ್ ಎಂದು ನಾಮಕರಣ ಮಾಡಿ ಅವಳನ್ನು ಮತ್ತೆ ಗಂಡನ ಮನೆಗೆ ಕಳುಹಿಸುವ ಶಾಸ್ತ್ರವನ್ನು ಪೂರೈಸಿದರು ಚಾಂದಿನಿ ತಾಯಿ!

ಮತ್ತೆ ಮೈ ಕೈ ತುಂಬಿಕೊಂಡು ಬಂದ ಚಾಂದಿನಿಗೆ; ಯಥಾಸ್ಥಿತಿ ಕೆಲಸದ ಹೊರೆಯೊಂದಿಗೆ ಮಗುವಿನ ಲಾಲನೆ ಪಾಲನೆಯೂ ಸೇರಿತು. ಮತ್ತೆ ಅದೇ ಬದುಕು. ಅದೇ ನರಕ ಸದೃಶ ಜೀವನ, ಒಂದೊಂದು ಕ್ಷಣವೂ ಬದುಕನ್ನು ಎಳೆಯಲಾರದೆ ಎಳೆಯುವ ಪ್ರಯತ್ನ ನೋವು, ನಿರಾಶೆ, ಕುಡುಕ ಗಂಡ!

ಕಾಲಚಕ್ರ ಉರುಳುತ್ತಲೇ ಇತ್ತು. ಚಾಂದಿನಿ ಮತ್ತೆ ಗರ್ಭಿಣಿಯಾದಳು. ಈ ಬಾರಿ ಮಾನಸಿಕವಾಗಿ ದೈಹಿಕವಾಗಿ ಸೋತ ಚಾಂದಿನಿಗೆ ತವರಿಗೆ ಹೋಗುವ ತವಕ ಹೆಚ್ಚಾಗಿತ್ತು. ತಾಯಿಯ ಆರೈಕೆ ಪ್ರೀತಿಯಲ್ಲಿ ತನ್ನೆಲ್ಲಾ ನೋವುಗಳನ್ನು ಮರೆಯುವ ತವಕ.

ಈ ಬಾರಿ ಹೆರಿಗೆಗೆ ಬಂದ ಚಾಂದಿನಿಗೆ ತವರಿನಲ್ಲಿ ಅದ್ದೂರಿಯ ಸ್ವಾಗತ ದೊರೆಯಲಿಲ್ಲ. ಅಣ್ಣಂದಿರಿಬ್ಬರೂ ಮದುವೆಯಾಗಿದ್ದರು. ಮನೆಗೆ ಬಂದ ಅತ್ತಿಗೆಯವರು ಮುಖ ಗಂಟಿಕ್ಕಿಕೊಂಡೇ ಚಾಂದಿನಿಯನ್ನು ಬರಮಾಡಿಕೊಂಡರು.

ತನ್ನ ಮಗ ಮೂರು ವರ್ಷದ ಸಂಜೀವನನ್ನು ಚಾಂದಿನಿ ತನ್ನೊಂದಿಗೆ ಕರೆದೊಯ್ದಿದ್ದಳು. ಸಂಜೀವನ ರಗಳೆ ಸ್ವಭಾವ, ರಟ್ಟೆ ಹಿಡಿಯುವುದು ಚಾಂದಿನಿಯ ಅತ್ತಿಗೆಯವರಿಗೆ ಬೇಸರ ತರಿಸಿತ್ತು.

ತನ್ನ ಮನೆಮಂದಿಯೊಂದಿಗೆ ಉತ್ತಮವಾಗಿ ವರ್ತಿಸುವವನೇ ನಿಮ್ಮ ಪೈಕಿ ಅತ್ಯುತ್ತಮನು.
(ಪ್ರವಾದಿ ಮುಹಮ್ಮದ್(ಸ))

With Best Wishes From;

CANARA TRADING CO.

All kinds of Timber and Centering Plywood

84, Lakdi Bunder Darukhana, MAZGAON, MUMBAI - 400 010
Phone: (022) 23745348 / 9821311353

Branch: CANARA WOODPLY

All kinds of Timbers, Centering Plywood, Bamboo, Poles and Stead Plates

Palaspa Phata, Opp. Mahindra Showroom, Old Mumbai, Pune Road, Panvel, Dist. - Raigadh
Phone : 9821044924 / 9821311353

ಇದೊಂದು "ಪೀಡೆ" ಎಂದು ಮಗುವನ್ನು ಬೈದಾಗ ತನ್ನ ಅಸಹಾಯಕ ಸ್ಥಿತಿಗೆ ಚಾಂದಿನಿ ಮೌನವಾಗಿ ಕಣ್ಣೀರು ಮಿಡಿಯುವಳು. ಪರಿಸ್ಥಿತಿ ವಿಕೋಪಕ್ಕೇರಿ ಮನೆಯಲ್ಲಿ ತಾಂಡವ ಪ್ರಾರಂಭವಾದಾಗ ವಿಧಿಯಿಲ್ಲದೆ ಸಂಜಯ್ ನನ್ನು ಕರೆಸಿ ಮಗುವನ್ನು ಅತ್ತೆಯ ಬಳಿಗೆ ಕಳುಹಿಸಿದಳು. ಇದು ಸಂಜಯನ ಪಾಲಿಗೆ ಮಹಾಪರಾಧವಾಯಿತು. ದಿನ ತುಂಬಿದ ಬಸುರಿ ಎಂದೂ ನೋಡದೆ ಬಾಯಿಗೆ ಬಂದಂತೆ ಬೈದು ಸಂಜಯ್ ಊರಿಗೆ ಮರಳಿದ.

ತನಗೆ ಪ್ರಪಂಚದಲ್ಲಿ ಪ್ರೀತಿ ತೋರುವ ಒಂದೇ ಒಂದು ಜೀವ ಇಲ್ಲ ಎಂಬ ಕಟು ಸತ್ಯದ ಅರಿವು ಚಾಂದಿನಿಗೆ ಆಯಿತು. ಬದುಕು ಅರಳುವ ಮುನ್ನವೇ ಕಮರಿ ಹೋಗುವ ತನ್ನ ಬದುಕಿನ ಬಗ್ಗೆ ಯೋಚಿಸಿ ಚಾಂದಿನಿಗೆ ಎಲ್ಲಿಲ್ಲದ ನೋವು!

ಒಂದು ದಿನ ರಾತ್ರಿ ಚಾಂದಿನಿಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಆಕೆಯೊಂದಿಗೆ ಆಸ್ಪತ್ರೆಗೆ ಮುದಿ ತಾಯಿ ಬಿಟ್ಟರೆ ಬೇರೆ ಯಾರೂ ಬರಲಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಚಾಂದಿನಿ ಮತ್ತೆ ಮುದ್ದಾದ ಗಂಡು ಮಗುವಿಗೆ ಜನ್ಮ ನೀಡಿದಳು. ಈ ಬಾರಿ ಬಾಣಂತನ ಅಷ್ಟಕಷ್ಟೇ ನಡೆಯಿತು. ಅತ್ತೆ ಎರಡು ಮೂರು ಬಾರಿ ಬಂದು ಮನೆಗೆ ಬರುವಂತೆ ಅಜ್ಞಾಪಿಸಿದಳು. ಆದರೆ ಅಲ್ಲಿಯ ಕೆಲಸದ ಹೊರೆ ಇಬ್ಬರು ಮಕ್ಕಳ ಪಾಲನೆ ಯೋಚಿಸಿ ಚಾಂದಿನಿ ಇನ್ನೂ ಸ್ವಲ್ಪ ಕಾಲ ತವರಿನಲ್ಲಿ ಉಳಿಯುವ ಭಂಡ ಧೈರ್ಯ ತೋರಿದಳು. ತವರಿನಲ್ಲಿ ಆಕೆಗೆ ಬಿರು ನುಡಿಗಳಿಗೇನೂ ಕಡಿಮೆ ಇರಲಿಲ್ಲ. ಎಲ್ಲವನ್ನೂ ನುಂಗುತ್ತಾ ಆಕೆ ದಿನ ದೂಡ ತೊಡಗಿದಳು.

ಮಗುವಿಗೆ 5 ತಿಂಗಳುಗಳಾದರೂ ಸಂಜಯ್ ಇತ್ತ ಸುಳಿಯಲಿಲ್ಲ. ಮನೆಗೆ ಬಾ ಎಂದೂ ಕರೆಯಲಿಲ್ಲ.

ಇವಳನ್ನು ಹೀಗೇ ಬಿಟ್ಟರೆ 'ಪರ್ಮನೆಂಟ್' ನಮ್ಮ ಮನೆಯಲ್ಲೇ ಇರುತ್ತಾಳೆ. ಹೋಗಿ ಬಿಟ್ಟು ಬನ್ರೀ



ಎಂಬ ಅತ್ತಿಗೆಯಂದಿರ ನೇರ ನುಡಿಗಳಿಗೆ ಹೆದರಿದ ಚಾಂದಿನಿ ಅಣ್ಣನೊಂದಿಗೆ ಕೊಡಗಿಗೆ ಹೋದಳು.

ಮನೆಯ ಗೇಟು ತೆಗೆದು ಒಳ ಹೋಗುತ್ತಿದ್ದಂತೆಯೇ ಏನೋ ಹೊಸ ವಾತಾವರಣ ಅನುಭವ ಅವಳಿಗಾಯಿತು.

ಮನೆಯ ಪಡಶಾಲೆಯಲ್ಲಿ ಮಗುವನ್ನು ಮಲಗಿಸಿ ಚಾಂದಿನಿ ಅಡಿಗೆ ಮನೆಗೆ ಹೋದಾಗ ಅಪರಿಚಿತ ಹೆಣ್ಣೊಬ್ಬಳನ್ನು ಕಂಡು ಆಶ್ಚರ್ಯ ಚಕಿತಳಾದಳು. ನೆಂಟರಿಷ್ಟರಲ್ಲಿ ಎಲ್ಲೂ ಆ ಮುಖ ನೋಡಿದ ನೆನಪಿಲ್ಲ! ಯಾರಿರಬಹುದು.

ಮುಖ ಗಂಟಕ್ಕಿದ್ದ ಆಕೆ ಹೊರಗೆ ಹೋಗಿ ತೋಟದಲ್ಲಿದ್ದ ಅತ್ತೆಯನ್ನು ಕರೆದಳು.

ಗೂಳಿಯಂತೆ ನುಗ್ಗಿ ಬಂದ ಅತ್ತೆ ಚಾಂದಿನಿಯ ಮೇಲೆ ಹೌಹಾರಿದರು. ಯಾರನ್ನು ಕೇಳಿ ನೀನಿಲ್ಲಿ ಬಂದೆ? ನಾನು ಇವನಿಗೆ ಇನ್ನೊಂದು ಮದುವೆ ಮಾಡಿದ್ದೇನೆ. ಈ ಕ್ಷಣ ಹೊರಟು ಹೋಗು ಎಂದು ಗುಡುಗಿದರು. ಹೂವಿನಂತಹ ಮಗು ಮಲಗಿದ್ದರೂ ಆ ಕಡೆ ದೃಷ್ಟಿ ಹಾಯಿಸಲಿಲ್ಲ. ಅಷ್ಟರಲ್ಲಿ ಕುಡಿದು ಕಣ್ಣು ಕೆಂಪಗೆ ಮಾಡಿಕೊಂಡು ಬಂದ ಸಂಜಯ್ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಚಾಂದಿನಿಯ ಮುಡಿ ಹಿಡಿದು ಜಗ್ಗಾಡಿ ಹೊರ ಹಾಕಿದ!

ಮಲಗಿದ್ದ ಮಗುವನ್ನು ಎತ್ತಿ ಕೊಂಡು ಅಣ್ಣ, 'ನಡಿಯಮ್ಮ' ಎನ್ನುತ್ತಾ ಬಸ್ ನಿಲ್ದಾಣದತ್ತ ಹೆಜ್ಜೆ ಹಾಕಿದ. ಚಾಂದಿನಿ ಗರಬಡಿದವಳಂತೆ ಅಳಲಾರದೆ ನೋವನ್ನು ಹೊರ ಹಾಕಲಾರದೆ ಗೊಂಬೆಯಂತೆ ಆತನನ್ನು ಹಿಂಬಾಲಿಸಿದಳು.

ಮನೆಗೆ ಬಂದಿದ್ದೇ ಅಣ್ಣಂದಿರು, ಅತ್ತಿಗೆಯಂದಿರು ಚಾಂದಿನಿ ಮತ್ತು ತಾಯಿಯನ್ನು ತರಾಟೆಗೆ ತೆಗೆದು ಕೊಂಡರು. ಅವರು ಕರೆದಾಗ ಹೋಗಿದ್ದರೆ ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ. ಇದೊಂದು ಪ್ರಾರಬ್ಧ ಕರ್ಮ ಎಂದು ಗೊಣಗಿದರು.

ಮಾನಸಿಕವಾಗಿ ದೈಹಿಕವಾಗಿ ಅಸ್ಥಿರಳಾದ ಚಾಂದಿನಿಯ ಕಣ್ಣಿನಿಂದ ನೀರು ಸುರಿಯುತ್ತಿತ್ತೇ ವಿನಃ ಮಾತು ಹೊರಡುತ್ತಿರಲಿಲ್ಲ. ದಿನೇ ದಿನೇ ಪರಿಸ್ಥಿತಿ ಹದಗೆಡುತ್ತಿತ್ತು. ಚಾಂದಿನಿ ಮತ್ತು ಮಗು ಸಂದೀಪನಿಗೆ ಬೇಕಾದ ವಸ್ತುಗಳು ಮಗುವಿನ ಔಷಧಿ ಎಲ್ಲವೂ ದುರ್ಲಭವಾದಾಗ ಚಾಂದಿನಿ ಕೂಲಿ ಕೆಲಸಕ್ಕೆ ಹೋಗುವ ನಿರ್ಧಾರ ಮಾಡಿದಳು.

ಕೂಲಿ ಬಿಟ್ಟರೆ ಓದದ ತನಗೆ ಯಾವ ಕೆಲಸವೂ ಸಿಗುವುದಿಲ್ಲ ಎಂಬ ಸತ್ಯವನ್ನು ಆಕೆ ತಿಳಿದಿದ್ದಳು. ಸಂಜೆಯವರೆಗೆ ಮನೆ ಕಟ್ಟುವ ಮೇಸ್ತ್ರಿಯ ಬಳಿ ಚಾಂದಿನಿ ಕೂಲಿ ಕೆಲಸಕ್ಕೆ ಸೇರಿಕೊಂಡಳು. ಹಾಗೂ ಹೀಗೂ ತಿಂಗಳಿಗೆ 5000/– ರೂ. ಗಳಿಸಿ ಚಾಂದಿನಿ

ಮಗುವನ್ನು ಸಾಕುವ ಮಟ್ಟಕ್ಕೆ ತಲುಪಿದಾಗ ತನ್ನದೇ ಆದ ಪುಟ್ಟ ಮನೆ ಮಾಡಿದಳು. ಈ ನಡುವೆ ವಯಸ್ಸಾದ ತಾಯಿಯ ಜವಾಬ್ದಾರಿಯೂ ಚಾಂದಿನಿಯ ಪಾಲಿಗೆ ಬಂತು.

ಅಣ್ಣ ಪರಿಹಾರ ಕೋರಿ ಹಾಕಿದ ಕೇಸ್ ಎಲ್ಲೋ 'ಪುಸ್' ಎಂದು ಮಾಯವಾಗಿತ್ತು. ಲಾಯರ್ ಫೀಸ್ ಕಟ್ಟಿ 'ಕೇಸ್' ನಡೆಸುವ ಸಾಮರ್ಥ್ಯ ಚಾಂದಿನಿಗಿರಲಿಲ್ಲ.

ಶಕ್ತಿಹೀನರ ಬದುಕೇ ಹೀಗೆ ಎನ್ನುತ್ತಾ ಚಾಂದಿನಿ ಮೌನಕ್ಕೆ ಶರಣಾದಳು. ತಾನು ಕೂಲಿ ನಾಲಿ ಮಾಡಿ ನನ್ನ ಮಗುವನ್ನು ವಿದ್ಯಾವಂತನನ್ನಾಗಿ ಮಾಡಬಲ್ಲೆನೇ? ಎಂಬ ಸಂದೇಹ ಪ್ರತಿ ನಿಮಿಷಕ್ಕೂ ಆಕೆಯನ್ನು ಚಿತ್ರ ಹಿಂಸೆ ನೀಡುತ್ತಿತ್ತು.

ದೊಡ್ಡ ಮಗ ಸಂಜೀವ ಅತ್ತೆ ಮನೆಯಲ್ಲೇ ಉಳಿದ. ಒಂದೆರಡು ಬಾರಿ ಅವನನ್ನು ಕರೆ ತರುವ ಪ್ರಯತ್ನದಲ್ಲಿ ಚಾಂದಿನಿ ಸೋತಳು. ಎಲ್ಲರೂ ಇದ್ದು ಯಾರೂ ಇಲ್ಲದಂತಿರುವ ನನ್ನಂತಹ ಅನಾಥ ನತದೃಷ್ಟಳು ಇಲ್ಲ ಎಂಬ ಅವಳ ಕೂಗು ಹೃದಯದ ಗೂಡಿನಲ್ಲಿ ಪ್ರತಿಧ್ವನಿಸಿ ಮೌನಕ್ಕೆ ಶರಣಾಗುತ್ತಿತ್ತು.

ವಿದ್ಯೆ ಹಣವಿಲ್ಲದ ನಾನು ಪ್ರಪಂಚದಲ್ಲೇ ಏಕಾಂಗಿ. ತಂದೆ ಇದ್ದೂ ಸಂದೀಪ, ಅಪ್ಪನಿಲ್ಲದ ಮಗು ಅನಿಸಿಕೊಂಡ. ತಾಯಿ ಇದ್ದೂ ಸಂಜೀವ ಅಮ್ಮನಿಲ್ಲದ ಹುಡುಗ ಅನಿಸಿಕೊಂಡ.

ತನ್ನ ಪ್ರೀತಿಯನ್ನು ಮಕ್ಕಳಿಬ್ಬರಿಗೆ ಹಂಚಿಕೊಡುವ ಭಾಗ್ಯನೂ ಇಲ್ಲದ ನತದೃಷ್ಟ ವಿಧಿ ಬಾಳಲ್ಲಿ ಈ ರೀತಿಯ ನರ್ತನ ಮಾಡಬಹುದೆಂಬ ಕೇವಲ ಕಲ್ಪನೆಯೂ ಆಕೆಗಿರಲಿಲ್ಲ.

ತನ್ನ ಗತ ಜೀವನದ ಕ್ಷಣಗಳನ್ನು ನೆನೆದು ಕಣ್ಣೀರಧಾರೆ ಹರಿಯುತ್ತಿತ್ತು ಆಕೆಯ ಕಣ್ಣುಗಳಿಂದ.

ದೂರದ ಮಸೀದಿಯಿಂದ ಪ್ರಾರ್ಥನೆಯ ಶಬ್ದ ಬಂದಾಗ ಚಾಂದಿನಿ ಎಚ್ಚೆತ್ತುಕೊಂಡಳು. ತಾನಿನ್ನೂ ಮಲಗಿಲ್ಲ ಎಂಬುದು ಅವಳಿಗೆ ಅರಿವಾಯಿತು. ಗಾಬರಿಯಿಂದ ನೋಡಿದಾಗ ಅಳುತ್ತಿದ್ದ ಸಂದೀಪ ಅದ್ಯಾವಾಗಲೋ ನಿದ್ರೆಗೆ ಜಾರಿ ಬೆಕ್ಕಿನ ಮರಿಯಂತೆ ಮಂಚದ ತುದಿಯಲ್ಲಿ ಮುದುರಿ ಮಲಗಿದ್ದ. ಅವನ ಮೇಲೆ ಬೆಡ್‌ಶೀಟ್ ಎಳೆದು ಅಡಿಗೆ ಮನೆಗೆ ಹೋಗಲು ಯತ್ನಿಸಿದಾಗ ಮೈ ತೂರಾಡುತ್ತಿತ್ತು. ಮಾನಸಿಕ ದೈಹಿಕ ಹಿಂಸೆಯಿಂದ ಆಕೆಯ ಮೈ ಕೆಂಡದಂತೆ ಸುಡುತ್ತಿತ್ತು. ಪಕ್ಕದ ರೂಮಿನಿಂದ ಮುದಿ ತಾಯಿಯ ಖೊಕ್ ಖೊಕ್ ಕೆಮ್ಮಿನ ಶಬ್ದ ಅವಳನ್ನು ಮತ್ತೂ ಅಧೀರಳನ್ನಾಗಿಸಿತು. ತನಗೆ ಒಂದು ಲೋಟ ನೀರು ಕೊಡಲು ಸಹಾ ಯಾರೂ ಇಲ್ಲವಾದರಲ್ಲಾ ಎಂಬ ಕೊರಗು ಅವಳನ್ನು ಅಂಟಿಕೊಂಡಿತ್ತು. ಅಡುಗೆ ಮನೆಗೆ ಬಂದು ನಿಂತ ಆಕೆಗೆ ಇಡೀ ಪ್ರಪಂಚವೇ "ಗಿರ್" ಎಂದು ತಿರುಗಿದಂತೆ ಭಾಸವಾಗುತ್ತಿತ್ತು. ■

ನಾವು ಮಾನವನನ್ನು ಮಣ್ಣಿನ ಸತ್ವದಿಂದ ಸೃಷ್ಟಿಸಿದೆವು. ತರುವಾಯ ಅದನ್ನು ಒಂದು ಸುರಕ್ಷಿತ ಸ್ಥಳದಲ್ಲಿ ತೊಟ್ಟಿಕ್ಕಿದ ಹನಿಯಾಗಿ ಮಾರ್ಪಡಿಸಿದೆವು. ಅನಂತರ ಆ ಹನಿಗೆ ಮಾಂಸಪಿಂಡದ ರೂಪ ಕೊಟ್ಟೆವು. ಬಳಿಕ ಮಾಂಸಪಿಂಡವನ್ನು ಮಾಂಸಖಂಡವನ್ನಾಗಿ ಮಾಡಿದೆವು. ಆಮೇಲೆ ಮಾಂಸಖಂಡವನ್ನು ಎಲುಬುಗಳಾಗಿ ಮಾಡಿದೆವು. ತರುವಾಯ ಎಲುಬುಗಳ ಮೇಲೆ ಮಾಂಸ ತೊಡಿಸಿದೆವು. ಆ ಬಳಿಕ ಅದನ್ನೊಂದು ಬೇರೆಯೇ ಸೃಷ್ಟಿಯನ್ನಾಗಿ ಮಾಡಿ ನಿಲ್ಲಿಸಿದೆವು. ಅಲ್ಲಾಹನು ಮಹಾ ಸಮೃದ್ಧನು; ಸಕಲ ಶಿಲ್ಪಿಗಳಿಗಿಂತ ಶ್ರೇಷ್ಠ ಶಿಲ್ಪಿ.

(ಪವಿತ್ರ ಕುರ್‌ಆನ್, 23: 12-14)

With best compliments from

ARAFAT AHMED

ಶಿಹಾಬ್ ಇಂಗ್ಲಿಷ್ ಮೀಡಿಯಂ ಸ್ಕೂಲ್

CBSE Affiliation No. 930832

ಶಿಹಾಬ್ ರೆಸಿಡೆನ್ಸಿಯಲ್ ಸ್ಕೂಲ್

ಪ್ರೈಮರಿ, ಅಪ್ಪರ್ ಪ್ರೈಮರಿ ಮತ್ತು ಪ್ರೌಢ ಶಾಲಾ ಮಕ್ಕಳ ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ ಸಂಸ್ಥೆ



ಪ್ರತೀ ವರ್ಷ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುವ ಅತ್ಯುತ್ತಮ ಶಾಲೆ.

ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಯ ವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ★ ಸಿ.ಐ.ಎಸ್.ಇ. ಸಿಲೆಬಸ್ ★ ಇದರ ಜೊತೆಗೆ ಕುರ್‌ಆನ್, ಹದೀಸ್, ಇಸ್ಲಾಮಿಯತ್ ಮತ್ತು ತಫ್ಸೀರ್‌ಅನ್ನು ನುರಿತ ವಿದ್ವಾಂಸರಿಂದ ಕಲಿಸಲಾಗುವುದು ★ ಅರಬಿ ಮತ್ತು ಇಂಗ್ಲೀಷ್ ಭಾಷೆಗಳು ಕಡ್ಡಾಯವಾಗಿದ್ದು, ಉರ್ದು, ಕನ್ನಡ ಮತ್ತು ಹಿಂದಿ ಭಾಷೆಗಳು ಐಚ್ಛಿಕವಾಗಿವೆ ★ ಕಂಪ್ಯೂಟರ್ ಶಿಕ್ಷಣ ಹಾಗೂ ಪಠ್ಯೇತರ ಚಟುವಟಿಕೆಗಳು ★ ಮಕ್ಕಳ ವ್ಯಕ್ತಿತ್ವ ನಿರ್ಮಾಣಕ್ಕೆ ಹಾಗೂ ರಚನಾತ್ಮಕ ವಿಷಯಗಳ ಪ್ರೋತ್ಸಾಹಕ್ಕಾಗಿ ವಿವಿಧ ಕಾರ್ಯಕ್ರಮಗಳು ★ ಮಕ್ಕಳ ವಾಸ್ತವ್ಯಕ್ಕಾಗಿ ಸುಸಜ್ಜಿತವಾದ ವಸತಿಗೃಹ ಹಾಗೂ ಊಟ ಉಪಹಾರಗಳು ★ ವಿಶಾಲವಾದ, ಭವ್ಯ, ಸಕಲ ಸೌಕರ್ಯಗಳನ್ನೊಳಗೊಂಡ ಸುಸಜ್ಜಿತವಾದ ಮಸೀದಿ ★ ವಿಶಾಲವಾದ ಆಟದ ಮೈದಾನ ಹಾಗೂ ವೈದ್ಯಕೀಯ ಚಿಕಿತ್ಸೆ ಮುಂತಾದ ಸೌಕರ್ಯಗಳಿವೆ ★ ಪ್ರತಿಯೊಂದು ವಿದ್ಯಾರ್ಥಿಯ ವೈಯಕ್ತಿಕ ಪ್ರಗತಿಗಾಗಿ ವಿಶೇಷ ಗಮನ ನೀಡಲಾಗುವುದು ★ ಸಮವಸ್ತ್ರ, ಪುಸ್ತಕಗಳು ಮತ್ತು ಇತರ ವಸ್ತುಗಳನ್ನು ಶಾಲೆಯಲ್ಲಿಯೇ ನೀಡಲಾಗುವುದು ★ ಶಾಲಾ ವ್ಯಾನು / ಬಸ್‌ಗಳು ಲಭ್ಯವಿದೆ ★ ಪ್ರಥಮ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣ ನೀಡಲಾಗುವುದು.

ಪ್ರತೀ ವರ್ಷದಂತೆ ಈ ವರ್ಷವೂ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಶೇಕಡಾ 100% ಫಲಿತಾಂಶ ಪಡೆದಿರುತ್ತದೆ.

ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ.

- ❖ ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ.
- ❖ ಉತ್ತಮ ತರದ ಕಂಪ್ಯೂಟರ್ ತರಬೇತಿ.
- ❖ ಅರ್ಹತೆಗನುಸಾರ ವಿದ್ಯಾರ್ಥಿವೇತನ.
- ❖ ಮಂಗಳೂರಿನಿಂದ **30 km.** ದಕ್ಷಿಣದಲ್ಲಿ ರಾಷ್ಟ್ರೀಯ ಹೆದ್ದಾರಿ ಪಕ್ಕದ ಪ್ರಶಾಂತ ವಾತಾವರಣ.

ದಾಖಲಾತಿಗಾಗಿ ಸಂಪರ್ಕಿಸಿರಿ

ಚೇಯರ್‌ಮೆನ್, ಶೇಕ್ ಅಬ್ದುಲ್ಲಾ, ಬಿ.ಎ; ಎಫ್.ಸಿ.ಎ., ಚಾರ್ಟರ್ಡ್ ಅಕೌಂಟೆಂಟ್, ಚರ್ಚ್ ಬಿಲ್ಡಿಂಗ್, ಕೊಡಿಯಾಲ್ ಬೈಲ್, ಮಂಗಳೂರು – 575 003. ಫೋನ್ : 0824 – 2440339 (0), 2495121(R).

ಇಮೈಲ್ : sheikhabdullah111@gmail.com, shihabfoundation@yahoo.com

ಫ್ಯಾಕ್ಸ್ : 0824–4256762 ವೆಬ್‌ಸೈಟ್ : www.shihabschool.org **ಮೊಬೈಲ್ : 98440 35786**

ಪ್ರಾಂಶುಪಾಲರು, ಶಿಹಾಬ್ ರೆಸಿಡೆನ್ಸಿಯಲ್ ಸ್ಕೂಲ್, ಅಡ್ಕ ಬಂದಿಯೋಡ್, ಮಂಗಲಪಾಡಿ – 671 324 ಉಪ್ಪಳ, ಕಾಸರಗೋಡ್ ಜಿಲ್ಲೆ, ಫೋನ್.: 04998 – 240222, 240333, ಫ್ಯಾಕ್ಸ್ : 04998 – 240333

■ ಇಂದು ನಾರಾಯಣ್

ಕ್ಯಾರೆಟ್ ಹಲ್ವಾ

ಬೇಕಾಗುವ ಸಾಮಗ್ರಿಗಳು:

ಕ್ಯಾರೆಟ್– 200 ಗ್ರಾಂ
ತುಪ್ಪ– 50 ಗ್ರಾಂ
ಸಕ್ಕರೆ– 100 ಗ್ರಾಂ
ಹಾಲು– 400 ಎಂ.ಎಲ್.
ಏಲಕ್ಕಿ ಹುಡಿ– $^1/_4$ ಟಿ.ಸ್ಪೂ.
ಬಾದಾಮಿ, ಪಿಸ್ತ, ಗೋಡಂಬಿ, ಒಣದ್ರಾಕ್ಷೆ – 4
ಕೋವಾ 1 ಟಿ.ಸ್ಪೂ.

ಮಾಡುವ ವಿಧಾನ:–

ಕ್ಯಾರೆಟನ್ನು ತುರಿದು ಹಾಲು ಸೇರಿಸಿ ಬೇಯಿಸಿ. ಅದು ಆರುತ್ತಾ ಬರುವಾಗ ತುಪ್ಪಹಾಕಿ. ಸಕ್ಕರೆ, ಕೋವ ಸೇರಿಸಿ ಕೈಯಾಡಿಸಿ ಇಳಿಸಿ. ಡ್ರೈಫ್ರುಟ್‌ಗಳಿಂದ ಅಲಂಕರಿಸಿ ಬಿಸಿಯಾಗಿ ಸವಿಯಿರಿ.

ಪಪ್ಪಾಯಿ ಹಲ್ವಾ

ಬೇಕಾಗುವ ಸಾಮಗ್ರಿಗಳು:

ಪಪ್ಪಾಯ ತುರಿದದ್ದು– 200 ಗ್ರಾಂ
ಸಕ್ಕರೆ– 100 ಗ್ರಾಂ
ತುಪ್ಪ– 50 ಗ್ರಾಂ
ಗೋಡಂಬಿ– 8
ಹಾಲು– 400 ಎಂ.ಎಲ್.
ಏಲಕ್ಕಿ ಹುಡಿ– $^1/_2$ ಟಿ.ಸ್ಪೂ.

ತಯಾರಿಸುವ ವಿಧಾನ:–

ಪಪ್ಪಾಯವನ್ನು ಗ್ರೇಟ್ ಮಾಡಿ ತಣ್ಣಗಿನ ನೀರಲ್ಲಿ ಹಾಕಿ. ನೀರನ್ನು ಬಸಿಯಿರಿ. ಇದಕ್ಕೆ ಹಾಲು ಹಾಕಿ ಹಾಲು ಆರುವವರೆಗೆ ಒಲೆಯಲ್ಲಿ ಇರಿಸಿ. ನಂತರ ತುಪ್ಪ ಹಾಕಿ ಸಕ್ಕರೆ, ಏಲಕ್ಕಿ ಹುಡಿ ಸೇರಿಸಿ ಮಿಕ್ಸ್ ಮಾಡಿ. ಒಣ ಹಣ್ಣುಗಳಿಂದ ಅಲಂಕರಿಸಿ.

ಅನನಾಸು ಟೋಫಿ

ಬೇಕಾಗುವ ಸಾಮಗ್ರಿಗಳು:–

ಅನನಾಸು ಅರೆದದ್ದು– 2 ಕಪ್
ಹಾಲಿನ ಹುಡಿ– 1 ಕಪ್
ಸಕ್ಕರೆ– 1 ಕಪ್
ಗೋಡಂಬಿ– 1 ಕಪ್ ಹುಡಿ ಮಾಡಿದ್ದು
ಬೆಣ್ಣೆ– 2 ಟಿ.ಸ್ಪೂ.
ವೆನಿಲಾ ಎಸೆನ್ಸ್– ಸ್ವಲ್ಪ ಹನಿ.

ಬಟಾಣಿ ಕೋಫ್ತಾ ಕರಿ

ಬೇಕಾಗುವ ಸಾಮಗ್ರಿಗಳು:

ಬಟಾಣಿ– 300 ಗ್ರಾಂ.
ಬಟಾಟೆ– 300 ಗ್ರಾಂ.
ಟೊಮೆಟೋ– 2
ನೀರುಳ್ಳಿ– 1
ಕೆಂಪುಮೆಣಸು– 6
ಬೆಳ್ಳುಳ್ಳಿ– 6 ಎಸಳು
ಅರಶಿನ ಹುಡಿ– $^1/_2$ ಚಮಚ
ಜೀರಿಗೆ (ಹುರಿದ) – $^1/_4$ ಚಮಚ
ಕೊತ್ತಂಬರಿ ಹುಡಿ– 2 ಚಮಚ
ಗರಂ ಮಸಾಲೆ– 1 ಚಮಚ
ಬಿಳಿ ಗಸಗಸೆ– 1 ಚಮಚ
ಕಡಲೆ ಹಿಟ್ಟು– ಬೇಕಾಗುವಷ್ಟು
ಉಪ್ಪು ರುಚಿಗೆ ಬೇಕಾದಷ್ಟು.

ತಯಾರಿಸುವ ವಿಧಾನ:

ಬೇಯಿಸಿಟ್ಟ ಬಟಾಣಿ, ಬೇಯಿಸಿ ಸಿಪ್ಪೆ ಸುಲಿದ ಬಟಾಟೆ ಮತ್ತು ಬಿಳಿ ಗಸಗಸೆಯನ್ನು ರುಬ್ಬಿ ಉಂಡೆ ಮಾಡಿ ಇಡಿ. ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ ಈ ಉಂಡೆಗಳನ್ನು ಚೆನ್ನಾಗಿ ಕಾಯಿಸಿ ತೆಗೆಯಿರಿ. ಸಣ್ಣಗೆ ಕೊಚ್ಚಿದ ನೀರುಳ್ಳಿ ಕಂದು ಬಣ್ಣ ಬರುವವರೆಗೆ ಕಾಯಿಸಿ, ಕೊಚ್ಚಿದ ಟೊಮೆಟೋ ಹಾಕಿ ನಂತರ ಬೆಳ್ಳುಳ್ಳಿ ಹಾಕಿ, ಉಳಿದ ಹುಡಿಗಳನ್ನೂ ಹಾಕಿ ಸ್ವಲ್ಪ ನೀರು ಹಾಕಿ ಕುದಿಸಿ. ಕೊನೆಗೆ ಕಾಯಿಸಿಟ್ಟ ಬಟಾಣಿ ಕೋಫ್ತಾಗಳನ್ನು ಹಾಕಿ ಸಣ್ಣ ಉರಿಯಲ್ಲಿ 2 ನಿಮಿಷ ಬೇಯಿಸಿ ಕೆಳಗಿಳಿಸಿ.

ತಯಾರಿಸುವ ವಿಧಾನ:–

ಒಂದು ಪಾತ್ರೆಯಲ್ಲಿ ಸಕ್ಕರೆ, ಹಾಲಿನ ಹುಡಿ, ಅನನಾಸ್ ಪಲ್ಪನ್ನು ಸೇರಿಸಿ. ಅದನ್ನು ಒಲೆಯಲ್ಲಿರಿಸಿ ಕೆಳಗಿಳಿಸಿ. ಅದರಿಂದ ಒಂದು ಹನಿ ತೆಗೆದು ತಣ್ಣೀರಿಗೆ ಹಾಕುವಾಗ ಉರುಳುವಷ್ಟು ಪಾಕವಾದರೆ ಅದಕ್ಕೆ ಗೋಡಂಬಿ, ವೆನಿಲ ಎಸೆನ್ಸ್ ಸೇರಿಸಿ ಚೆನ್ನಾಗಿ ಕೈಯಾಡಿಸಿ

ಅನುಪಮ
ಚಂದಾ ವಿವರ

	ಭಾರತದಲ್ಲಿ	ಗಲ್ಫ್ ರಾಷ್ಟ್ರಗಳಲ್ಲಿ
ವಾರ್ಷಿಕ	ರೂ. 170/-	ರೂ. 750/-
ದ್ವೈ ವಾರ್ಷಿಕ	ರೂ. 340/-	ರೂ. 1500/-
ಬಿಡಿ ಪ್ರತಿ	ರೂ. 15/-	---

ಒಂದು ಪ್ಲೇಟ್‌ಗೆ ಸುರಿಸಿರಿ. ನಿಮಗೆ ಇಷ್ಟ ವಿರುವ ಆಕಾರದಲ್ಲಿ ಕತ್ತರಿಸಿ.

ರಸಗುಲ್ಲ

ಬೇಕಾಗುವ ಸಾಮಗ್ರಿಗಳು:

ಹಾಲು– $^1/_2$ ಲೀಟರ್
ಲಿಂಬೆ– 3 ಟಿ.ಸ್ಪೂ.
ಮೈದಾ– 2 ಟಿ.ಸ್ಪೂ.
ಸಕ್ಕರೆ ನೀರು– 1 ಕಪ್
ಏಲಕ್ಕಿ ಹುಡಿ– $^1/_4$ ಟಿ.ಸ್ಪೂ.

ಮಾಡುವ ವಿಧಾನ: ಸಕ್ಕರೆ ನೀರು ಹಾಕಿ ಸಿರಪ್ ತಯಾರಿಸಿ ಇಡಿ. ಹಾಲು ಕುದಿಸಿ ಲಿಂಬೆ ನೀರು ಹಾಕಿ ಕೆಳಗಿಳಿಸಿ. ಹಾಲಿನಿಂದ ಪನೀರ್ ಬೇರ್ಪಡಿಸಿ ಪಾತ್ರೆಗೆ ಹಾಕಿ. ನೀರು ಸಂಪೂರ್ಣವಾಗಿ ಇಂಗಿದ ಬಳಿಕ ಪನೀರನ್ನು ಒಂದು ಬೌಲ್‌ಗೆ ಹಾಕಿ ಚೆನ್ನಾಗಿ ಅದನ್ನು ನಾದಬೇಕು. ಬಳಿಕ ಇದಕ್ಕೆ ಮೈದಾ ಸೇರಿಸಿ ಚೆನ್ನಾಗಿ ನಾದಿರಿ. ನಂತರ ಅದನ್ನು ಸಣ್ಣ ಉಂಡೆ ಗಳಾಗಿ ಮಾಡಿ. ಇದರಲ್ಲಿ ಬಿರುಕುಂಟಾಗ ದಂತೆ ನೋಡಿಕೊಳ್ಳಿ. ಈ ಉಂಡೆಗಳನ್ನು ಬಿಸಿಯಾದ ಸಿರಪ್‌ಗೆ ಹಾಕಿರಿ. 30 ನಿಮಿಷ ಮುಚ್ಚಿ ಬೇಯಿಸಿ. ಏಲಕ್ಕಿ ಹುಡಿ ಹಾಕಿ ಕೆಳಗಿಳಿಸಿ. ತಣ್ಣಗಾದ ಬಳಿಕ ಫ್ರಿಡ್ಜ್‌ನಲ್ಲಿಟ್ಟು ಬೌಲ್‌ಗೆ ಹಾಕಿ. ಒಂದು ರಸಗುಲ್ಲ ಸ್ವಲ್ಪ ಸಕ್ಕರೆ ಸಿರಪ್ ಎಂಬ ರೀತಿಯಲ್ಲಿ ಅದನ್ನು ಉಪಯೋಗಿಸಿ.

ಜ್ವರ, ಕೆಮ್ಮು ಬಂದಾಗ ಮನೆ ಮದ್ದು

ಬೇಕಾಗುವ ಸಾಮಗ್ರಿಗಳು:

ಒಳೆ ಮೆಣಸು– 10 ಗ್ರಾಂ, ಹಿಪ್ಪಲಿ– 10 ಗ್ರಾಂ, ಅಮೃತ ಬಳ್ಳಿ– 10 ಗ್ರಾಂ, ನೆಲ್ಲಿಕಾಯಿ– 10 ಗ್ರಾಂ, ಆಡು ಸೋಗೆ ಬೇರು– 10 ಗ್ರಾಂ, ಭದ್ರ ಮುಷ್ಟಿ– 10 ಗ್ರಾಂ, ಜೇಷ್ಠ ಮಧು– 10 ಗ್ರಾಂ

ಮಾಡುವ ವಿಧಾನ:

ಎಲ್ಲಾ ವಸ್ತುಗಳನ್ನು ಒಂದು ಪಾತ್ರೆಗೆ ಹಾಕಿ ಮುಳುಗುವಷ್ಟು ನೀರಿನಲ್ಲಿ ಕುದಿಸಿ. ಕಾಲು ಭಾಗ ಆದಾಗ ಒಲೆಯಿಂದ ಇಳಿಸಿ ಸೋಸಿರಿ. ಇದಕ್ಕೆ ಸಕ್ಕರೆ ಹಾಕಿ ಸೇವಿಸಬಹುದು.

ಶೃಂಗಾರ

■ ಸಯ್ಯದ್ ಅಫ್ರೀನ್
ಗಾಂಧಿನಗರ, ಬೈಕಾಡಿ

■ ನಿಝೂಫರ್ (I B.Com)
ಹಿರಾ ಕಾಲೇಜು

ವೀಣಾ, ಬೆಂಗಳೂರು

● **ನಿತ್ಯಾನಂದನ 'ಪುರಾಣ' ಗೊತ್ತಾದರೂ ಜನರೇಕೆ ಈಗಲೂ ಅವನನ್ನು ನಂಬ್ತಾರೆ?**

❍ ಮಲಯಾಳದಲ್ಲಿ 'ಪೊದುಜನಂ ಪೋತುಜನಂ ಅಂತ ಮಾತಿದೆ. ಅಂದರೆ 'ಜನಗಳು ದನಗಳು' ಅಂತ. ಅದಕ್ಕೆ...

ಸಮೀಹಾ ರೋಣ

● **ಪೆಟ್ರೋಲ್ ಬೆಲೆ ಏರಿಸಿದಾಗ ಭಾರತ ಬಂದ್‌ನಿಂದ ಸಾಧಿಸಿದ್ದೇನು?**

❍ ರಾಜಕಾರಣಿಗಳು ರೈಲು ಮಾತ್ರವಲ್ಲ ಸೈಕಲೂ ಬಿಡ್ತಾರೆ ಅಂತ ಗೊತ್ತಾದ್ದು!

ನಿಶಾ ಮುಂಬಯಿ

● **ಪುಟ್ಟ ಮಕ್ಕಳನ್ನು ಬಂಗಾರ, ಬೆಳ್ಳಿ ಎಂದು ಕರೆಯುವುದೇಕೆ?**

❍ ಮಕ್ಕಳು ಈಗೀಗ ಹುಟ್ಟಿ ಬರೋದು ಬಂಗಾರದ ರೇಟಲ್ಲೇ... ಅದಕ್ಕಿರಬೇಕು.

ವಾಣಿಶ್ರೀ, ತೀರ್ಥಹಳ್ಳಿ

● **ಎಲ್ಲ ಪಕ್ಷಗಳಲ್ಲೂ ಭಿನ್ನಮತ ಬಿರುಗಾಳಿಯಂತೆ ಸುಳಿದಾಡುತ್ತಿದೆಯಲ್ಲ. ಇದು ಯಾವುದರ ಲಕ್ಷಣ?**

❍ ಕೇಡುಗಾಲ. ಚುನಾವಣೆ ಸನ್ನಿಹಿತವಾಗುವ ಲಕ್ಷಣ.

ಸಫಿಯಾ, ಅಬುದಾಬಿ

● **ಬಾಬಾ ರಾಮ್‌ದೇವ್‌ಗೆ ಭ್ರಷ್ಟಾಚಾರದ ವಿರುದ್ಧ ಮಾತನಾಡಲು ನೈತಿಕ ಹಕ್ಕಿದೆಯೇ?**

❍ ನೈತಿಕ ಹಕ್ಕಿಗೆ ಮಣ್ಣು! ಅವರನ್ನೂ ಜನ ನಂಬ್ತಾರಲ್ಲ ಅಷ್ಟು ಸಾಕಾಗದೇ.

ಪ್ರಮೀಳಾ, ದಾವಣಗೆರೆ

● **ಕಾಂಗ್ರೆಸ್ ವಿರುದ್ಧ ಸಿಡಿದೆದ್ದ ಸಿದ್ರಾಮಯ್ಯ ತಣ್ಣಗಾದದ್ದು ಯಾಕೆ?**

❍ ಅದು ರಾಜಕೀಯ ಕಣ್ರೀ... ಸದ್ಯಕ್ಕೆ ಇನ್ನೊಬ್ಬ ಬಂಗಾರಪ್ಪ ಆಗೋದು ತಪ್ಪಿ ಹೋಯ್ತು.

ಅಬೂಬಕರ್ ವಿಟ್ಲ

● **ಯಡ್ಡಿಗೆ ಅರಳು–ಮರುಳು, ಡಿ.ವಿ.ಗೆ...?**

❍ ಕೊರಳಿಗೆ ಉರುಳು!

ಜಾನ್ ಪಿ., ಕಾಸರಗೋಡು

● **ಎಸ್ಸೆಸ್ಸೆಲ್ಸಿ, ಪಿ.ಯು.ಸಿ. ಪರೀಕ್ಷೆಯಲ್ಲಿ ಹುಡುಗಿಯರದ್ದೇ ಮೇಲುಗೈ ಯಾಕೆ?**

❍ ಎಲ್ಲ ಐ.ಪಿ.ಎಲ್. ಕಮಾಲ್ ಕಣ್ರೀ. ('ಇಂಟರೆಸ್ಟ್' ಇನ್ 'ಪೀರಿಯೆಡ್ಸ್' ಆ್ಯಂಡ್ 'ಲೆಕ್ಚರ್ಸ್')

ಹರ್ಷಿತಾ, ಸಕಲೇಶಪುರ

● **ಮಾನವನ ಅಂಗಗಳಲ್ಲಿ ಅತ್ಯಂತ ಅಪಾಯಕಾರಿ ಅಂಗ ಯಾವುದು?**

❍ ನಾಲಗೆಯಂತ ಅನುಭವಿಗಳ ಮಾತು. ಆದ್ರೂ ಈಶ್ವರಪ್ಪೊಣ್ಣರಲ್ಲಿ ಕೇಳಿ ಹೇಳ್ತೀನ್ರೀ ಮೇಡಂ!

ಗಾಯತ್ರಿ, ಹುಬ್ಬಳ್ಳಿ

● **ಜೈಲು ಸೇರಿದವರಿಗೆ ಬಿಳಿ ಸಮವಸ್ತ್ರ ಯಾಕೆ ಕೊಡುತ್ತಾರೆ?**

❍ ಇನ್ನೇನು ಕೋಟು–ಗೀಟು ಹಾಕಿ ಪೀಠದ ಮೇಲೆ ಕೂರಿಸ್ಬೇಕಾ.

ಅನ್ಸಾರ್ ಭಟ್ಕಳ

● **ಹಾದಿ ಬದಿಯಲ್ಲಿದ್ದವರನ್ನು, ಹೋಗುವವರನ್ನು ಪಕ್ಷಕ್ಕೆ ಕರೆದು ಸಚಿವರನ್ನಾಗಿ ಮಾಡಿದೆವು ಎಂಬ ಈಶ್ವರಪ್ಪರ ಹೇಳಿಕೆ ಯಾರ ಕಡೆಗೆ ಸೂಚನೆ?**

❍ 'ಗೂಳಿ'ಯ ಗುಟುರು ಮತ್ತು 'ಕತ್ತಿ'ಯ ಮೊನಚು ಕಂಡು ಕೇಳಿಯೂ ಈ ಪ್ರಶ್ನೆ ಕೇಳ್ತೀರಲ್ಲ!

ಇಸ್ಲಾಮ್: ಸಂಶಯ ನಿವಾರಣೆ ಬಯಸುವಿರಾ?

ಇಸ್ಲಾಮ್, ಪವಿತ್ರ ಕುರ್‌ಆನ್, ಪ್ರವಾದಿ ಮುಹಮ್ಮದ್(ಸ), ಜಿಹಾದ್ ಇತ್ಯಾದಿ ವಿಷಯಗಳ ಕುರಿತು ನಿಮ್ಮ ಸಂಶಯಗಳು ಮತ್ತು ಪ್ರಶ್ನೆಗಳಿಗೆ ಸೂಕ್ತ ಪರಿಹಾರ ಬಯಸುವಿರಾ?

ಹಿಂದೂ, ಕ್ರೈಸ್ತ ಮತ್ತಿತರ ದೇಶ ಬಾಂಧವರಿಗೆ ಓದಲು ಉಚಿತವಾಗಿ ಪುಸ್ತಕಗಳನ್ನು ರವಾನಿಸಲಾಗುವುದು.

ಸಂಪರ್ಕಿಸಿರಿ : ISMIKA, P.B. No. 229, Mangalore

ಸಂಬಂಧಗಳು

ಧಾರಾವಾಹಿ

ಭಾಗ–2

ಶಮು

ಅನಾಥ ಪ್ರಶ್ನೆ

ರುಕಿಯಾಳಿಗೆ ಮಗಳನ್ನು ನೋಡದೆ ಮನಸ್ಸು ಭಾರವಾಗಿತ್ತು. ಮನೆಯಲ್ಲಿ ಏಳೆಂಟು ಜನರು. ಪತಿಯ ಚಿಕ್ಕಮ್ಮ ಮನೆಯ ಹಿರಿಯ ಮಹಿಳೆ. ಮೈ ತುಂಬಾ ಒಡವೆ ಹಾಕಿಕೊಂಡು ಬೊಜ್ಜು ದೇಹದೊಂದಿಗೆ ಸೋಫಾದಲ್ಲಿ ಕುಳಿತು ಇಡೀ ಮನೆಯ ಜನರ ಚಲನವಲನದ ಮೇಲೆ ಕಣ್ಣಿಡುತ್ತಿದ್ದರು. ರುಕಿಯಾ ಮಲ ತಾಯಿಯಾಗಿ ಆ ಮನೆಗೆ ಬಂದಾಗ ಪತಿಯ ಬೆಳೆದ ಮಕ್ಕಳು ಅವಳೊಂದಿಗೆ ಆತ್ಮೀಯ ವರ್ತನೆ ತೋರಿಸಲಿಲ್ಲ. ತಂದೆಗೆ ಆಕೆ ಸಂಗಾತಿ, ತಮಗೆ ಅವಳು 'ತಾಯಿ' ಅಲ್ಲ ಎಂಬ ಮನಸ್ಥಿತಿ ಅವರದಾಗಿತ್ತು. ಎಲ್ಲದಕ್ಕೂ ಚಿಕ್ಕಮ್ಮನನ್ನೇ ನೆಚ್ಚಿಕೊಂಡಿದ್ದರು. ರುಕಿಯಾಳ

ಪತಿ ಗಂಭೀರ ವ್ಯಕ್ತಿ. ಅವರ ಕಾರು ಬಾರುಗಳೆಲ್ಲಾ ಗಲ್ಫ್ ದೇಶದಲ್ಲಿ. ರುಕಿಯಾಳೊಂದಿಗೆ ಗಲ್ಫ್‌ಗೆ ಹೋಗಲು ರೆಡಿ ಆಗುವಂತೆ ರಾತ್ರಿ ತಿಳಿಸಿದಾಗ ಅವಳು ದಿಗ್ಭ್ರಮೆಗೊಂಡಳು.

ನಾನೂ... ಬರಬೇಕೆ? ನನ್ನ ಮಗಳು ಇಲ್ಲಿರುವಾಗ ಅವಳಿಂದ ಹೇಗೆ ದೂರ ಇರಲಿ? ಅವಳನ್ನು ನೋಡದೆ ತಿಂಗಳು ಕಳೆಯಿತು. ನನಗೆ ಅವಳನ್ನು ನೋಡಬೇಕು. ನನ್ನ ಮಗಳು ನನ್ನನ್ನು ನೆನಪು ಮಾಡಿ ಕೊರಗುತ್ತಿರಬಹುದು...

ನಿನ್ನನ್ನು ವಿವಾಹ ಆಗುವ ಮೊದಲು ನಿನ್ನ ಅಣ್ಣನೊಂದಿಗೆ ಎಲ್ಲಾ ಮಾತುಕತೆ ಆಗಿತ್ತು. ಪಾಸ್‌ಪೋರ್ಟ್ ಎಲ್ಲಾ ಮಾಡಿಸಿದ್ದು ನಿನ್ನನ್ನು ನನ್ನ ಜೊತೆಗೆ ಕರೆದೊಯ್ಯಲು. ನಿನ್ನ ಮಗಳನ್ನು ನಿನ್ನ ಅಣ್ಣಂದಿರು ನೋಡಿ ಕೊಳ್ಳುತ್ತಾರೆಂದು ತಿಳಿಸಿದ್ದರು. ವಿವಾಹದ ನಂತರ ಯಾವುದೇ ಭೇಟಿ ಇಲ್ಲ ಎಂದು ತಿಳಿಸಿದ್ದೆ. ನಿನ್ನ ಅಣ್ಣ ನನ್ನೊಂದಿಗೆ ಮಾಡಿದ್ದ 'ಸಾಲ'ವನ್ನು ನಾನು ಮನ್ನಾ ಮಾಡಿದ್ದೇನೆ. ನಿನ್ನ ಮಗಳನ್ನು ನೀನು ಮರೆತು ಬಿಡು. ಅವಳ ಮದುವೆ ವಯಸ್ಸು ಆದಾಗ ನಾವು ಖರ್ಚಿಗೆ ಕೊಡುವ. ಈಗ ನೀನು ನನ್ನ ಮಕ್ಕಳ ತಾಯಿ. ನನ್ನ ಎರಡು ಮಕ್ಕಳು ದೊಡ್ಡದಿದ್ದಾರೆ. ಮೂರನೆಯವ ಚಿಕ್ಕವನನ್ನು ನೀನು ಚೆನ್ನಾಗಿ ನೋಡಿ ಕೊಳ್ಳಬೇಕು. ಅವನನ್ನು ನಾನು ಗಲ್ಫ್‌ನಲ್ಲೇ ಶಾಲೆಗೆ ಹಾಕಿದ್ದೇನೆ. ಕೆಲಸದವರ ಹತ್ತಿರ ಬಿಟ್ಟು ಬಂದಿದ್ದೇನೆ. ಅವನ ಎಲ್ಲಾ ಜವಾಬ್ದಾರಿ ನಿನಗೆ ಸೇರಿದ್ದು.

ಪತಿಯ ಮಾತುಗಳನ್ನು ಕೇಳುತ್ತಾ ರುಕಿಯಾ ಶಿಲೆಯಂತಿದ್ದಳು. ತನ್ನ ಅಣ್ಣಂದಿರು ಮಾಡಿದ 'ಸಾಲ'ಕ್ಕೆ ನಾನು ವಿವಾಹ ಆದದ್ದೇ?! ನನ್ನ ಮಗಳನ್ನು ಎಂದಿಗೂ ಭೇಟಿ ಆಗಲಿಕ್ಕಿಲ್ಲ... ಎಂಬ ವಾಗ್ದಾನ ಅಣ್ಣನೇ ನೀಡಿದನೇ? ನನ್ನ ಮಗಳನ್ನು ನನ್ನಿಂದ ದೂರ ಮಾಡುವ ಈ ವಿವಾಹ ಸಂಬಂಧ ನನಗೆ ಬೇಕಾಗಿತ್ತೇ? ಇವರ ಚಿಕ್ಕ ಮಗನ ಲಾಲನೆ-ಪಾಲನೆ ಮಾಡಲು ಓರ್ವ ಆಯಾಳ ಅಗತ್ಯ ಇತ್ತು. ನನ್ನನ್ನು ಗಲ್ಫ್‌ಗೆ ಕರೆದುಕೊಂಡು ಹೋಗುವ

(ಕಳೆದ ಸಂಚಿಕೆಯಲ್ಲಿ)

[ರುಕಿಯಾ ಮನಸ್ಸಿಲ್ಲದ ಮನಸ್ಸಿನೊಂದಿಗೆ ಮರು ಮದುವೆಗೆ ಒಪ್ಪುತ್ತಾಳೆ. ಚಿಕ್ಕಮಗಳು ಅಸ್ಮಾಳನ್ನು ಬಿಟ್ಟಿರಬೇಕಾಗುತ್ತಲ್ಲ ಎಂಬುದನ್ನು ಯೋಚಿಸಿದಾಗ ಕಣ್ಣು ತುಂಬಿ ಬರುತ್ತಿತ್ತು. ಅಂತೂ ಶ್ರೀಮಂತ ವ್ಯಕ್ತಿಯೊಂದಿಗೆ ಅಸ್ಮಾಳ ಮದುವೆ ಆಗುತ್ತದೆ. ಅಜ್ಜಿಯ ಆಸರೆಯಲ್ಲಿ ಅಸ್ಮಾ ಬೆಳೆಯುತ್ತಾಳೆ...]

ಇನ್ನು ಮುಂದೆ

ವಿಷಯವೇ ತನಗೆ ತಿಳಿದಿರಲಿಲ್ಲ! ರುಕಿಯಾ ಹಾಸಿಗೆಯಲ್ಲಿ ಹೊರಳಾಡುತ್ತಾ ಮಗಳ ಮುದ್ದು ಮುಖವನ್ನು ನೆನೆಸಿ ಕಂಬನಿ ಸುರಿಸಿದಳು.

ಅಸ್ಮಾ ಸಂಜೆ ಶಾಲೆಯಿಂದ ಹೊರಟು ದಿವ್ಯಾಳನ್ನು ಕಾಯುತ್ತಾ ಗೇಟಿನತ್ತಿರ ನಿಂತಳು. ಅವಳು ಮನದಲ್ಲಿ ಒಂದು ನಿರ್ಧಾರ ನೆಲೆಸಿತ್ತು. ದಿವ್ಯಾ ಎದುರಿಗೆ ಬಂದೊಡನೆ ಅವಳ ಕೈ ಹಿಡಿದು ವೇಗದಲ್ಲಿ ನಡೆಯ ತೊಡಗಿದಳು.

ಎಲ್ಲಿಗೆ... ಎಳೆದುಕೊಂಡು ಹೋಗುತ್ತಿದ್ದೀಯಾ ಅಸ್ಮಾ? ದಿವ್ಯಾ ಅಚ್ಚರಿಯಿಂದ ಪ್ರಶ್ನಿಸಿದಳು.

ಶೂ... ಸುಮ್ಮನೇ ನನ್ನೊಂದಿಗೆ ಬಾ. ನೀನು ನನಗೆ ಒಂದು ಹೆಲ್ಪ್ ಮಾಡಬೇಕು. ನಿನ್ನ ಮನೆಯಾಚೆಯೇ ನನ್ನ ಅಮ್ಮನ ಬಂಗಲೆ ಇರುವುದು. ನನಗೆ ಇವತ್ತು ಅಮ್ಮನನ್ನು ನೋಡಲೇ ಬೇಕು. ಮಾಮ, ಮಾಮಿಯ ಹತ್ತಿರ ಅಮ್ಮನ ಬಳಿ ನನ್ನನ್ನು ಕರೆದುಕೊಂಡು ಹೋಗಿ ಎಂದು ಎಷ್ಟು ಅತ್ತರೂ ಅವರಿಗೆ ಕರುಣೆಯೇ ಬರಲಿಲ್ಲ. ನಿನಗೆ ಗೊತ್ತಾ...? ಇವತ್ತು ನನ್ನ ಹುಟ್ಟಿದ ಹಬ್ಬ. ಅಮ್ಮ ನನಗೆ ಪ್ರತೀ ವರ್ಷ ಗಿಫ್ಟ್ ಕೊಡ್ತಾ ಇದ್ದಳು. ಈ ಬಾರಿ... ಯಾರಿಗೂ ನನ್ನ ಹುಟ್ಟಿದ ಹಬ್ಬದ ನೆನಪಿಲ್ಲ. ಅಸ್ಮಾಳ ಮಂಕಾದ ಮುಖ, ನೋವಿನ ಧ್ವನಿಗೆ ದಿವ್ಯಾ ಕರಗಿ ಹೋದಳು. ಗೆಳತಿಯ ಕೈಯನ್ನು ಅದುಮಿ... ನಾನು ನಿನಗೆ ಹೆಲ್ಪ್ ಮಾಡ್ತೇನೆ... ಕಣೇ... ನಡೆ, ನಿನ್ನ ಅಮ್ಮನ ಹತ್ತಿರ ಹೋಗುವ ಎಂದಳು.

ತೆಂಗಿನ ತೋಟ, ಗದ್ದೆ ಬದಿಯಲ್ಲಿ ಎರಡು ಬಾಲಕಿಯರೂ ಜಿಂಕೆಯಂತೆ ಜಿಗಿಯುತ್ತಾ ನಡೆದರು. ದೂರದಲ್ಲಿ ನೀಲಿ ಬಣ್ಣದ ಬಂಗಲೆ ಕಾಣಿಸಿತು. ಅದರ ಗೇಟು ಎತ್ತರಕ್ಕೆ ಇತ್ತು. ಬಾಲಕಿಯರಿಬ್ಬರೂ ಗೇಟಿನ ಹತ್ತಿರ ನಿಂತಾಗ ಅವರಿಗೆ ಭಾರೀ ಗಾತ್ರದ ಗೇಟ್‌ನ ಒಳಗಿರುವ ಮನೆಯೇ ಕಾಣಿಸುತ್ತಿರಲಿಲ್ಲ. ತುಂಬಾ ಹೊತ್ತು ಗೇಟ್ ಬಡಿದರೂ ಯಾರೂ ತೆಗೆಯಲು ಬರಲಿಲ್ಲ. ಅಸ್ಮಾಳ ಮುಖ ಚಿಕ್ಕದಾಗಿತ್ತು. ಅಲ್ಲಿಂದಲೇ ಜಿಗಿಯುತ್ತಾ ಅಮ್ಮಾ... ಎಂದು ಮೂರು ನಾಲ್ಕು ಸಾರಿ ಚೀರಿ ಕರೆದಳು.

ಮುಚ್ಚಿದ ಕಿಟಕಿಯ ಬಾಗಿಲು ತೆರೆಯಲೂ ಇಲ್ಲ. ಜನರೇ ಇಲ್ಲದಂತೆ ಇದ್ದ ಆ ಬಂಗಲೆಯನ್ನು ನೋಡಿ ದಿವ್ಯಾಳಿಗೆ ಅಂಜಿಕೆಯಾಗ ತೊಡಗಿತ್ತು.

ಈಗ ನಾನು ಹೇಗೆ ಅಮ್ಮನನ್ನು ನೋಡಲಿ? ಒಳಗೆ ಹೋದರೆ ಅಮ್ಮ ಖಂಡಿತಾ ನೋಡಲು ಸಿಗುತ್ತಾಳೆ.

ಓ.ಕೆ... ಒಂದು ಪ್ಲಾನು ಇದೆ. ಆ ಗೋಡೆಯ ಪಕ್ಕದಲ್ಲಿ ಪೇರಳೆಯ ಮರ ಇದೆಯಲ್ಲಾ... ನೀನು ನನ್ನ ಬೆನ್ನ ಮೇಲೇರಿ ಕೊಂಡು ಪೇರಳೆ ಮರ ಹತ್ತಿ ಕಂಪೌಂಡಿಗೆ ಜಿಗಿದು ಮನೆ ಒಳಗೆ ಹೋಗು. ನಾನು ಇಲ್ಲೇ ನಿಂತಿರುತ್ತೇನೆ. ದಿವ್ಯಾ ಹೇಳಿದಾಗ ಅಸ್ಮಾಳ ಮುಖ ಅರಳಿತು.

ಗೆಳತಿಯ ಬೆನ್ನು ಹತ್ತಿ ಗೋಡೆಯನ್ನು ಹಿಡಿದ ಮರವನ್ನು ಏರಿ ಅಸ್ಮಾ ಕಂಪೌಂಡು ಒಳಗೆ ಜಿಗಿದಳು. ಮೆಲ್ಲನೇ ಮನೆಯ ಹಿಂದಿರುವ ಹಿತ್ತಲಿನ ಕಡೆ ನಡೆದಳು. ಎಲ್ಲಾ ದೊಡ್ಡ ದೊಡ್ಡ ಕಿಟಕಿ. ಒಂದು ಕಿಟಕಿಯ ಬಾಗಿಲು ತೆರೆದು ಕೊಂಡಿತ್ತು. ಮೆಲ್ಲನೇ ಒಳಗೆ ಇಣುಕಿದಳು. ದಢೂತಿ ಹೆಂಗಸೊಬ್ಬರು ಮಂಚದಲ್ಲಿ ಮಲಗಿಕೊಂಡಿದ್ದಳು. ಇದು ನನ್ನ ಅಮ್ಮ ಅಲ್ಲ... ಎಂದು ಗುನುಗುತ್ತ ಇನ್ನೊಂದು ಕಿಟಕಿಯ ಹತ್ತಿರ ನಿಂತಳು. ಅದರ

PRESTIGE Engineering Industries LLC

ISO 9001 : 2008 Certified Company

Fabrication, Galvanizing, Painting and Erection of Light to Medium Steel Structures. Our Products include Storage Tanks, Heavy Industrial Gratings, Anchor Bolts, Industrial Filter Housing, Pipe Saddles, Crane Girders, Construction Buckets, SS Gratings & SS Tanks

☎ +971-2-4124757 / 700, Fax: +971-2-4124777 / 778

P.O. Box 13180 Abu Dhabi, United Arab Emirates

E-Mail: nafoosen@emirates.net.ae presteng@emirates.net.ae

Website: prestigeuae.com I CAD III, Plot No. 42 NR 32

PRESTIGE Steel Construction Co. LLC

Laser Jet, Water Jet, Sheet Perforation, Sheet Engraving & CNC Machining

☎ +971-2-5544975 / 77, Fax: +971-2-5547380

P.O. Box 9468 Abu Dhabi, United Arab Emirates, M-11 Mussafah

Associate Company

U-LOC

UNILOC FASTENERS

ISO 9001 : 2008

Manufacturers & Exporters of Fasteners, High Tensile & Stainless Steel - Standard & Specials

☎ +91-250-2480082 / 2480106, +91-9326699287, Fax: +91-250-2481556, Mobile: +91-9892108201

9, Godavari, Tungareshwar Industrial Complex No. 1, Village Sativali, Vasai (East), Dist. Thane-401208 Mumbai - India

E-Mail: uniloc9@gmail.com / unilocindia@yahoo.com Website: www.unilocindia.net

ಗ್ಲಾಸಿನ ಮೂಲಕ ಒಳಗೆ ದೃಷ್ಟಿ ಹಾಯಿಸಿದಳು. ಮಹಿಳೆಯೊಬ್ಬರ ಬೆನ್ನು ಕಾಣುತ್ತಿತ್ತು. ಆಕೆ ಸೂಟುಕೇಸಿನೊಳಗೆ ಬಟ್ಟೆ ಬರೆಯನ್ನು ಬಗ್ಗಿ ತುಂಬಿಸುತ್ತಿದ್ದಳು. ಎತ್ತರದ ಕಟ್ಟು ಮಸ್ತಿನ ಗಂಡಸೋರ್ವರು ಹೆಂಗಸು ನಿಂತಲ್ಲಿಗೆ ಬಂದು ಏನೋ ಹೇಳಿದ.

ಹೆಂಗಸು ತಿರುಗಿ ನೋಡಿದಳು. ಅಮ್ಮಾ... ಅಸ್ಮಾ ಖುಷಿಯಿಂದ ಬಾಯಿ ಬಿಟ್ಟಳು. ಮುಚ್ಚಿದ ಕಿಟಕಿಯನ್ನು ಆ ಧ್ವನಿ ಭೇದಿಸಲಿಲ್ಲ. ಸೂಟುಕೇಸ್ ಹಿಡಿದ ಗಂಡಸು ಬಾಗಿಲು ದಾಟಿದಾಗ ಅಮ್ಮನೂ ಅವರ ಹಿಂದೆಯೇ ಹೊರಟು ಹೋದಾಗ ಅಸ್ಮಾಳಿಗೆ ಅಳು ಬಂತು. ಅಮ್ಮ ಎಷ್ಟು ಸುಂದರವಾಗಿ ಕಾಣುತ್ತಿದ್ದಳು... ಆಕೆ ಎಲ್ಲಿಗೆ ಹೊರಟಿರ ಬಹುದು... ನಮ್ಮ ಮನೆಗೇ ಹೋಗುತ್ತಿರಬಹುದೋ... ಎಂದು ಯೋಚಿಸುತ್ತಾ ಮರ ಹತ್ತಿ ಗೋಡೆ ಜಿಗಿದು ಗೆಳತಿ ನಿಂತ ಕಡೆಗೆ ಜಿಗಿದು ಬಿಟ್ಟಳು.

ದಿವ್ಯಾ... ನನ್ನ ಅಮ್ಮ ಎಲ್ಲಿಗೋ ಹೊರಟ ಹಾಗೆ ಕಂಡಿತು. ಗೇಟು ತೆರೆದು ಕಾರು ಭರ್ರನೇ ಅವರ ಮುಂದಿನಿಂದ ಹೊರಟು ಹೋದಾಗ ಗೆಳತಿಯರಿಬ್ಬರೂ ಮುಖಮುಖ ನೋಡಿ ಕೊಂಡರು. ವಾಚ್‌ಮ್ಯಾನ್ ಗೇಟು ಹಾಕುವುದನ್ನು ನೋಡಿ ದಿವ್ಯಾ ಅವನತ್ತಿರ ಪರಿಚಯದ ನಸು ನಗೆ ಬೀರಿ... ಅವರು ಕಾರಲ್ಲಿ ಹೋದರಲ್ಲಾ ಎಲ್ಲಿಗೆ? ಎಂದು ಪ್ರಶ್ನಿಸಿದಳು.

ಓ... ಡಾಕ್ಟರ್ ಸಾಹೇಬರ ಮಗಳಲ್ಲವೇ... ನೀನು? ನೀನು ಇಲ್ಲೇನು ನಿಂತಿದ್ದು...? ಎಂದು ಆತ ಮರು ಪ್ರಶ್ನೆ ಹಾಕಿದ.

ನನಗೆ... ಮಾವಿನ ಕಾಯಿ ಬೇಕಾಗಿತ್ತು... ಈ ಮರದಲ್ಲಿ ತುಂಬಾ ಮಾವಿನ ಕಾಯಿ ಕಾಣುತ್ತಿದೆ... ಕೊಡುತ್ತೀರಾ?

ನಮ್ಮ ಧಣಿ ಸಾಹೇಬರು ಈಗ ತಾನೇ ದುಬ್ಯಾಗೆ ಅವರ ಹೆಂಡತಿ

ಸಹಾಯ

ತೌಸೀಫ್: ನಾನು ಪರ್ಸ್ ಬಿಟ್ಟು ಬಂದೆ. ಒಂದು 500 ರೂಪಾಯಿ ಕೊಡು.

ಶಿಹಾಬ್: ಗೆಳೆಯನ ಕಷ್ಟದ ಸಂದರ್ಭದಲ್ಲಿ ಸಹಾಯ ಮಾಡದಿದ್ದರೆ ನಾನೆಂತ ಗೆಳೆಯ. ತಗೋ 20 ರೂಪಾಯಿ. ಆಟೋದಲ್ಲಿ ಹೋಗಿ ಪರ್ಸ್ ತಾ.

ಯೊಟ್ಟಿಗೆ ಹೋದರು. ಅವರ ಅಕ್ಕನವರು ಇದ್ದಾರೆ ಒಳಗೆ... ಅವರ ಹತ್ತಿರ ಕೇಳಿ ಬರ್ತೇನೆ... ಎನ್ನುತ್ತಾ ವಾಚ್‌ಮ್ಯಾನ್ ಒಳಗೆ ಹೆಜ್ಜೆ ಹಾಕಿದ.

ಅಸ್ಮಾ ದಿವ್ಯಾಳ ಕೈ ಹಿಡಿದು ಮನೆಗೆ ಹೋಗೋಣ... ನನಗೆ ಮಾವಿನಕಾಯಿಯೂ ಬೇಡಾ... ಏನೂ ಬೇಡಾ... ಅಮ್ಮ ನನ್ನನ್ನು ಬಿಟ್ಟು ದುಬ್ಯಾಗೆ ಹೋಗಿ ಬಿಟ್ಟಳು! ಎನ್ನುತ್ತಾ ಗದ್ಗದಿತ ಳಾದಳು. ದಿವ್ಯಾ ಮೌನವಾಗಿ ಅವಳನ್ನು ಹಿಂಬಾಲಿಸಿದಳು. ಮನೆಗೆ ಬಂದ ಮೊಮ್ಮಗಳು ಮುಖ ಬಾಡಿಸಿ ವರಾಂಡದಲ್ಲಿ ಕುಳಿತದ್ದು ನೋಡಿ ಅಜ್ಜಿಗೆ ಕಸಿವಿಸಿ ಆಯಿತು. ಶಾಲೆಯಿಂದ ಬಂದು ತಿಂಡಿ ತಿನ್ನದೇ ಕುಳಿತಿದ್ದಿಯೇಕೆ? ಬಾ... ಮಗಾ... ಬಿಸಿ ಬಿಸಿ ಅಂಬಡೆ ಮಾಡಿದ್ದಾಳೆ ನಿನ್ನ ಮಾಮಿ. ಅಜ್ಜಿ ಮೊಮ್ಮಗಳ ಹೆಗಲು ಮುಟ್ಟುತ್ತಾ ಕರೆದರು.

ಅಜ್ಜೀ... ನನ್ನ ಅಮ್ಮ ಇನ್ನೆಂದಿಗೂ ಇಲ್ಲಿಗೆ ನನ್ನನ್ನು ನೋಡಲು ಬರುವುದಿಲ್ಲ. ಅವರು ದುಬ್ಯಾಗೆ ಹೋದರು! ನನ್ನ ನೆನಪೇ ಅವರಿಗಿಲ್ಲ! ನನ್ನ ಹುಟ್ಟಿದ ಹಬ್ಬದ ನೆನಪೇ ಅವಳಿಗಿಲ್ಲ! ಅಸ್ಮಾ ಅಜ್ಜಿಯನ್ನು ಅಪ್ಪಿ ಹಿಡಿದು ಬಿಕ್ಕಳಿಸಿದಳು. ಅಜ್ಜಿ ಮೊಮ್ಮಗಳ ಕಣ್ಣೀರು ಒರೆಸುತ್ತಾ ಮುದ್ದಿಸಿ ಸಮಾಧಾನ ಪಡಿಸತೊಡಗಿದರು. ಅಡಿಗೆ ಮನೆಗೆ ಕರೆತಂದು ಮೊಮ್ಮಗಳ ಮುಂದೆ ತಿಂಡಿ, ಕಾಫಿ ಇಟ್ಟು ತಲೆ ನೇವರಿಸುತ್ತಾ "ನಿನ್ನ ಅಮ್ಮ ದುಬ್ಯಾಯಿಂದ ವಾಪಾಸ್ ಬರುವಾಗ ನಿನಗೆ ತುಂಬಾ ಬಂಗಾರ, ಡ್ರೆಸ್, ಚಾಕಲೇಟು ಎಲ್ಲಾ ತರಬಹುದು. ನೀನು ಚೆನ್ನಾಗಿ ಕಲಿತು ದೊಡ್ಡವಳಾಗುವಾಗ ನಿನಗೂ ದುಬ್ಯಾಗೆ ಹೋಗಬಹುದು." ಅಜ್ಜೀ ನೀನು ಸುಳ್ಳು ಹೇಳಬೇಡಾ... ಅಮ್ಮ ನನ್ನನ್ನು ನೋಡಲು ಇನ್ನು ಬರಲಾರಳು. 'ಸುಳ್ಳು' ಹೇಳಲೇಬಾರದು ಎಂದು ನೀನೇ ತಾನೇ ನನಗೆ ಬುದ್ಧಿ ಹೇಳುತ್ತಿದ್ದದ್ದು.

ಅಸ್ಮಾ ಮುಖ ಊದಿಸಿ ಹೇಳಿದಾಗ ಅಜ್ಜಿ ಮೊಮ್ಮಗಳನ್ನು ಬಲವಾಗಿ ಅಪ್ಪಿಕೊಂಡರು. ಅವರ ಕಣ್ಣಲ್ಲಿ ಹರಿದ ಕಂಬನಿ ನೋಡಿ ಅಸ್ಮಾ ಹುಬ್ಬೇರಿಸಿದಳು. ನಾನಿದ್ದೇನೆ ಮಗಳೇ... ನಿನಗೆ. ಅವರು ಪಿಸು ನುಡಿದರು. ಅವರಿಗೆ ಮೊಮ್ಮಗಳನ್ನು ತನ್ನ ಮನೆಯಲ್ಲಿ ಮಗಂದಿರು ನಡೆಸಿಕೊಳ್ಳುವ ರೀತಿ ನೆನೆದು ಮನಸ್ಸು ಭಾರವಾಯಿತು. ತನ್ನ ಪತಿಯ ಮೊದಲ ಪತ್ನಿಯ ಮಕ್ಕಳು (ಮಗಂದಿರು) ತನ್ನ ಕರುಳ ಕುಡಿ ರುಕಿಯಾಳಿಗೆ ಸಹೋದರನ ಪ್ರೀತಿಯನ್ನು ಎಂದಿಗೂ ನೀಡಲಿಲ್ಲ. ರುಕಿಯಾ ವಿಧವೆಯಾಗಿ ತವರು ಸೇರಿದಾಗ ಬಾಭಿಯಂದಿರು ಅವಳನ್ನು 'ಪೀಡೆ' ಎಂಬಂತೆ ನಡೆಸಿಕೊಂಡರು. ಇದೀಗ ಮಗಳು ಮರು ಮದುವೆ ಆಗಿ ಶ್ರೀಮಂತನ ಪತ್ನಿಯಾಗಿ ಈ ನರಕದಿಂದ ಪಾರಾದರೂ

ಹಣದಿಂದ ದುರ್ಬಲನಾಗುವುದಕ್ಕಿಂತ, ಚಾರಿತ್ರ್ಯದಿಂದ ದುರ್ಬಲನಾದರೆ ಆತ ಸರ್ವನಾಶಗೊಂಡಂತೆ

ಆಕೆಯ ಮಗಳು ಇಲ್ಲಿ ಎಲ್ಲರಿಗೂ 'ಭಾರ' ಎಂಬಂತಾಗಿದ್ದಾಳೆ. ತನ್ನ ಆಯುಷ್ಯ ಇರುವ ತನಕ ಈ ಮಗುವನ್ನು ಈ ಪೀಡಕರಿಂದ ತಾನು ರಕ್ಷಿಸಬಹುದು. ನಂತರ...? ಅಸ್ಮಾಳ ಭವಿಷ್ಯ ಏನು? ರುಕಿಯಾಳ ಎರಡನೇ ಪತಿ ಈ ಮಗಳನ್ನೂ ತನ್ನದಾಗಿಸಿ ಕೊಂಡು ಬಿಟ್ಟಿದ್ದರೆ ಅಸ್ಮಾಳ ಕುರಿತು ಚಿಂತೆಯೇ ಇರುತ್ತಿರಲಿಲ್ಲ. ಆದ್ರೆ... ಆತನಿಗೆ ಹೆಂಡತಿ ಮಾತ್ರ ಬೇಕಾಗಿತ್ತು! ಎಂತಹ ಸ್ವಾರ್ಥ ಜನರು... ಯಾ ಅಲ್ಲಾಹ್! ಅವರು ಚಿಂತಿಸುತ್ತಾ ನಿಟ್ಟಿಸಿರು ಬಿಟ್ಟರು.

ಅಸ್ಮಾ ನಿದ್ರೆಯಲ್ಲಿ ಅಮ್ಮಾ... ಎಂದು ಬಿಕ್ಕಳಿಸುತ್ತಿರುವುದನ್ನು ಕಂಡು ಅಜ್ಜಿ ಮೊಮ್ಮಗಳ ತಲೆ ಸವರುತ್ತಾ ನಿಟ್ಟಿಸಿರು ಬಿಟ್ಟರು. ದೇವಾ... ನೀನು ಇಂತಹ ಮುದ್ದು ಮಕ್ಕಳನ್ನು ತಾಯಿಯ ಮಡಿಲಿನಿಂದ ಯಾಕೆ ದೂರ ಮಾಡಿ ಬಿಟ್ಟೆ!? ನನ್ನ ಮೊಮ್ಮಗಳಿಗೆ ತಂದೆ–ತಾಯಿ ಇಬ್ಬರೂ ಇಲ್ಲದೇ ಹೋಯಿತಲ್ಲಾ! ಅಜ್ಜಿಯ ಕಣ್ಣು ಒದ್ದೆಯಾಯಿತು.

ಅಸ್ಮಾ ಹದಿಹರೆಯಕ್ಕೆ ಕಾಲಿಟ್ಟಳು. ಅಜ್ಜಿ ಹಾಸಿಗೆಯ ರೋಗಿಯಾಗಿ ಮಲಗಿದ್ದರು. ಅಜ್ಜನ ಸಾವು ಅವರನ್ನು ಇನ್ನಷ್ಟು ಶಕ್ತಿಹೀನಳಾಗಿಸಿತ್ತು. ತಾಯಿ ರುಕಿಯಾ ಮಗಳೊಂದಿಗೆ ಫೋನಿನಲ್ಲಿ ಮಾತನಾಡುತ್ತಾ ಯೋಗ ಕ್ಷೇಮ ವಿಚಾರಿಸುತ್ತಿದ್ದರು. ದುಂಡಗೆ ಬೆಳ್ಳಗೆ ಸುಂದರವಾಗಿ ಬೆಳೆಯುತ್ತಿರುವ ಮೊಮ್ಮಗಳನ್ನು ಕಂಡು ಅವರಿಗೆ ಚಿಂತೆ ಉಂಟಾಗುತ್ತಿತ್ತು. ತಾನು ಸಾಯುವ ಮೊದಲು ಈ ಹುಡುಗಿಗೆ ಮದುವೆ ಮಾಡಬೇಕು... ಇಲ್ಲವಾದ್ರೆ ಈ ಮನೆಯಲ್ಲಿ ಇವಳು ಶಾಶ್ವತವಾಗಿ ಕೆಲಸದಾಳಾಗಿ ಉಳಿಯಬಹುದು.

ದಿವ್ಯಾ, ಅಸ್ಮಾಳ ಮನೆಗೆ ಬಂದಾಗ ಅಸ್ಮಾ ದೊಡ್ಡ ರಾಶಿ ಪಾತ್ರೆಯನ್ನು ಹರಡಿ ತೊಳೆಯುತ್ತಿದ್ದಳು. ತನ್ನ ಗೆಳತಿಯ ಈ ಸ್ಥಿತಿಯನ್ನು ನೋಡಿ ದಿವ್ಯಾಳಿಗೆ ಸಂಕಟವಾಯಿತು. ತಾನು ಉಂಡ ಪಾತ್ರೆಯನ್ನೂ ತೊಳೆಯಲು ಕೆಲಸದವರಿದ್ದಾರೆ. ಮನೆಯಲ್ಲಿ ತನಗೆ ಎಷ್ಟು ಪ್ರೀತಿ, ಕಾಳಜಿ ದೊರೆಯುತ್ತಿದೆ. ತನ್ನ ಗೆಳತಿಗೆ ಎಂತಹ ಕಷ್ಟ!

ಅರೆ... ದಿವ್ಯಾ! ಅಲ್ಲೇ ನಿಂತು ಅದ್ಯಾಕೆ ನೋಡುತ್ತಿದ್ದಿಯಾ? ಬಾ ಇಲ್ಲಿ ಸ್ವಲ್ಪ ಹೊತ್ತು ಕುಳಿತು ಕೋ. ಬೇಗನೇ ನಾನು ಪಾತ್ರೆ ಶುಚಿ ಮಾಡಿಟ್ಟು ನಿನಗೆ ಲೆಕ್ಕ ಕಲಿಸುತ್ತೇನೆ. ನೀನು ಆರಾಮದಲ್ಲಿ ಕುಳಿತುಕೋ... ಈ ಪಾತ್ರೆ ತೊಳೆಯದೇ ಹೋದರೆ ನನ್ನ ಮಾಮಿಯ ಬಾಯಲ್ಲಿ ಬೈಗುಳ ಸುರಿಮಳೆ ಬರುತ್ತದೆ... ಎಂದು ನಕ್ಕಳು.

ಈ ಹೆಣ್ಣಿಗೆ ನಗು ಮಾಸದು, ಸದಾ ತಮಾಷೆ, ನಗು, ತುಂಟತನ! ದುಃಖ, ಕಷ್ಟದಲ್ಲೂ ಮಾಸದ ನಗು! ಅಸ್ಮಾಳ ಕುರಿತು ಯೋಚಿಸುತ್ತಾ ದಿವ್ಯಾ ಅಲ್ಲೇ ದಂಡೆಯ ಮೇಲೆ ಕುಳಿತಳು. ದಿವ್ಯಾ ಅಸ್ಮಾಳಿಗೆ ಟಿಫಿನ್ ಬಾಕ್ಸ್‌ನಲ್ಲಿ ತಂದ ಹೆಸರುಬೇಳೆ ಭಾತನ್ನು ನೀಡುತ್ತಾ ನನ್ನ ಅಮ್ಮ ನಿನಗೆ ಕೊಟ್ಟದ್ದು ಕಣೇ... ಅವರಿಗೆ ನಿನಗೆ ಕೊಡದೇ ತಿನ್ನಲೂ ಮನಸ್ಸಿಲ್ಲ. ನಿನ್ನ ಬಗ್ಗೆ ಪ್ರೀತಿ, ಕರುಣೆ.

ಹೌದು.. ಕಣೇ... ನನಗೆ ಅವರನ್ನು 'ಅಮ್ಮಾ' ಎಂದು ಕರೆಯಲು ತುಂಬಾ ಖುಷಿ ಆಗ್ತದೆ. ನೀನು ತುಂಬಾ ಲಕ್ಕೀ ಕಣೇ. ನಿನಗೆ ಪ್ರೀತಿಸುವ ಒಂದು ಪರಿವಾರ ಇದೆ... ಎಂದಳು.



ನನಗೆ ಅಜ್ಜಿಯ ಹೊರತು ಯಾರೂ ಆಪ್ತರಿಲ್ಲ. ಚಿಕ್ಕ ಮಾಮಿ ಗರ್ಭಿಣಿಯಾಗಿದ್ದಾರೆ. ಈ ಸಲ ನನ್ನನ್ನು ಶಾಲೆಯಿಂದ ಬಿಡಿಸುವುದಾಗಿ ಹೇಳ್ತಾ ಇದ್ದಾರೆ. ಅವರ ಚಾಕರಿ ಮಾಡಲು ನಾನು ಮನೆಯಲ್ಲಿರಬೇಕಂತೆ. ಹೈಸ್ಕೂಲ್ ಮುಗಿಸುವ ಭಾಗ್ಯನೂ ನನಗಿಲ್ಲ. ದಿವ್ಯಾ... ನೀನು ಚೆನ್ನಾಗಿ ಓದು. ನೀನು ನಮ್ಮೂರಿನಲ್ಲಿ ಡಾಕ್ಟರ್ ಆಗಿ ಇಲ್ಲೇ ನೆಲೆಸಬೇಕು. ನನಗೆ ಡಾಕ್ಟರ್ ಆಗುವ ಆಸೆ ಇತ್ತು. ಅದು ಕೇವಲ ಕನಸು ಮಾತ್ರ.

ದಿವ್ಯಾಳಿಗೆ ಗೆಳತಿಯ ಬಾಡಿದ ಮುಖದೊಂದಿಗೆ ಉದುರಿದ ಮಾತು ಕೇಳಿ ಮನಸ್ಸು ಭಾರವಾಯಿತು. ದಿವ್ಯಾ ಗೆಳತಿ ಅಸ್ಮಾಳಿಗೆ ಎರಡು ಹೊಸ ಸಲ್ವಾರ್ ಕಮೀಝ್ ತಂದು ಹುಟ್ಟಿದ ಹಬ್ಬಕ್ಕೆ ಉಡುಗೊರೆ ನೀಡಿದ್ದಳು. ಅಸ್ಮಾ ಮುದ್ದಿನಿಂದ ಸಾಕಿದ ಆಡಿನ ಮರಿ ಚಿನ್ನು ಅವಳ ಹಿಂದೆಯೇ ನಿಂತು ತಲೆಯಿಂದ ಆಕೆಯನ್ನು ಸ್ಪರ್ಶಿಸಿದಾಗ ಅಸ್ಮಾ ನಸುನಗುತ್ತಾ ದಿವ್ಯಾಳಿಗೆ ಚಿನ್ನು ಗುಣಗಾನ ಮಾಡುತ್ತಾ ನನ್ನ ಏಕಾಂತದ ಬೇಸರ ಕಳೆಯಲು ಚಿನ್ನುವಿನೊಂದಿಗೆ ಹರಟುವುದಾಗಿ ಹೇಳಿ ನಕ್ಕಳು. ಬೆಳಿಗ್ಗೆ ಮುದ್ದಾದ ಆಡಿನ ಮರಿಯನ್ನು ದಿವ್ಯಾ ಎತ್ತಿ ಮುದ್ದಿಸಿದಳು. ನಾನು ಹೋದಲ್ಲೆಲ್ಲಾ ಹಿಂಬಾಲಿಸುತ್ತಾ ಬರ್ತಾಳೆ ಈ ಚಿನ್ನು. ಆಕೆಗೆ ಬಾಯಿ ಬರಲ್ಲ, ನನ್ನ ಧ್ವನಿಯನ್ನು ಕೇಳುವವರಿಲ್ಲ! ಅಷ್ಟೇ ವ್ಯತ್ಯಾಸ.

ಹೇ... ಎಲ್ಲಿ ಹಾಳಾಗಿ ಹೋದಿಯೇ... ನಳ್ಳಿ ನೀರು ಟ್ಯಾಂಕಿ ತುಂಬಿ ಫೋಲಾಗುತ್ತಿದೆ. ತಿಂದು ಸೊಕ್ಕಿದೆ ನಿನಗೆ! ಹರಟೆ ಹೊಡೆಯುತ್ತಾ ಅಲ್ಲೇ ನಿಂತಿದ್ದೀಯಾ... ಬಾರೇ ಒಳಗೆ... ಮಾಮಿ ವರಾಂಡದಿಂದ ಗಡಸು ಧ್ವನಿಯಲ್ಲಿ ಚೀರಾಡಿದಾಗ ಅಸ್ಮಾ ದಿವ್ಯಾಳಿಗೆ 'ಬ್ಯಾ' ಹೇಳಿ ತೊಳೆದ ಪಾತ್ರೆಯನ್ನು ಎತ್ತಿ ಕೊಂಡು ಒಳಗೆ ಓಡಿದಳು. ದಿವ್ಯಾ ಭಾರವಾದ ಮನಸ್ಸಿನೊಂದಿಗೆ ತನ್ನ ಮನೆಯತ್ತ ಹೆಜ್ಜೆ ಹಾಕಿದಳು. 'ರಾಕ್ಷಸಿ ಮಾಮಿ' ಮೆಲ್ಲನೆ ಕೋಪದಿಂದ ಉದ್ಗರಿಸಿದಳು.

(ಮುಂದುವರಿಯುವುದು)



ಶಮು

"ಬಡ್ಡಿ ತಿನ್ನುವವರ ಅವಸ್ಥೆಯು ಶೈತಾನನ ಸೋಂಕಿನಿಂದ ಹುಚ್ಚನಾದವನಂತಿದೆ. ಅಲ್ಲಾಹನು ಬಡ್ಡಿಯ ವ್ಯವಹಾರವನ್ನು ಅಳಿಸಿ ಬಿಡುತ್ತಾನೆ ಮತ್ತು ದಾನ ಧರ್ಮಗಳನ್ನು ವೃದ್ಧಿಸುತ್ತಾನೆ"

(ಪವಿತ್ರ ಕುರ್‌ಆನ್, 2:275-276)

'ಬಡ್ಡಿ'ಯನ್ನು ಇಸ್ಲಾಮ್ ಎಷ್ಟು ಕಠೋರವಾಗಿ ದ್ವೇಷಿಸುತ್ತದೆ ಎನ್ನುವುದಕ್ಕೆ ಕುರ್‌ಆನ್‌ನಲ್ಲಿ ಬಂದ ಈ ವಾಕ್ಯವೇ ಸಾಕ್ಷಿ. 'ಬಡ್ಡಿ' ತಿನ್ನುವವರನ್ನು ಮತಿಭ್ರಾಂತ ಹುಚ್ಚನ ಹಾಗೆ ಎಂದು ವರ್ಣಿಸುತ್ತದೆ. ಅಂತ್ಯ ದಿನದಂದು ಮರಣ ಹೊಂದಿದ ಎಲ್ಲಾ ಮನುಷ್ಯರನ್ನು ದೇವನು ಪುನಃ ಎದ್ದೇಳಿಸುತ್ತಾನೆ. ಆತನ ಕರ್ಮಗಳ ವಿಚಾರಣೆಗಾಗಿ

ಮತಿಭ್ರಾಂತ ಹುಚ್ಚರಂತೆ ಎದ್ದೇಳುವರು

ಎಂದು ಪವಿತ್ರ ಕುರ್‌ಆನ್ ಹೇಳುತ್ತದೆ. ಅಂತಹ ಸಮಯದಲ್ಲಿ ಬಡ್ಡಿಯಲ್ಲೇ ಬದುಕಿದವರು ಹುಚ್ಚರಂತೆ ಎದ್ದೇಳಿಸಲ್ಪಡುತ್ತಾರೆ ಎಂದು ದೇವನು ತಿಳಿಸುತ್ತಾನೆ. ಬಡವರ ರಕ್ತ ಹೀರುವ ಈ ಬಡ್ಡಿಯ ವ್ಯವಹಾರದಿಂದ ಮನುಷ್ಯನು ಶ್ರೀಮಂತನಾಗಬಹುದು. ಆದ್ರೆ.... ಈ ಶ್ರೀಮಂತಿಕೆ ಬಡವರ ಬೆವರಿನ, ಅವರ ಕಣ್ಣೀರಿನ ಸಂಪತ್ತಾಗಿದೆ. ಬದುಕಿನ ಜಂಜಾಟದಲ್ಲಿ ಅಸಹಾಯಕತೆಯಿಂದ ಬಡವನು ತನ್ನ ಮನೆ, ಸಾಮಾನು, ಜಾಗ, ಬಂಗಾರವನ್ನು ಅಡವಿಡುತ್ತಾನೆ. ಬಡ್ಡಿಕೋರ ದಂಧೆಯವರು ಈ ಅಡವಿಟ್ಟ ವಸ್ತುವಿಗೆ 'ಬಡ್ಡಿ' ಸೇರಿಸುತ್ತಾ ಬಡವನ ಬದುಕನ್ನು ಬೀದಿಗೆ ತಳ್ಳುತ್ತಾರೆ. ತಾನು ಸಂಪತ್ತು ವೃದ್ಧಿಸುವ ಖುಷಿಯಲ್ಲಿ ಇನ್ನಷ್ಟು ಬಡ್ಡಿ ವ್ಯವಹಾರ ಮಾಡ್ತಾರೆ.

ಇಂದು ಈ ಸಮಾಜದಲ್ಲಿ ತಾವು ಮಾಡಿದ 'ಸಾಲ'ದ ಮೊತ್ತವನ್ನು ತೀರಿಸಲಾಗದೆ, ಅದರ ಮೇಲಿರುವ 'ಬಡ್ಡಿ' ಹೊರೆಯನ್ನೂ ಹೊತ್ತು ಕೊಳ್ಳಲಾಗದೆ ಅದೆಷ್ಟೋ ಜನರು ಆತ್ಮಹತ್ಯೆಗೆ ಶರಣಾಗುತ್ತಿ ದ್ದಾರೆ. ಕೇವಲ ಬಡವರು ಮಾತ್ರವಲ್ಲ ವಿದ್ಯಾರ್ಹತೆ ಇರುವ ಮಧ್ಯಮವರ್ಗದವರೂ ತಮ್ಮ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಸಾಲ ಮಾಡುತ್ತಾರೆ. ಮನೆ ಕಟ್ಟಲು, ಮದುವೆ ಮಾಡಿಸಲು ಸಾಲ ಮಾಡ್ತಾರೆ. ಕೊನೆಗೆ ಈ 'ಸಾಲ'ವೇ ಒಂದು ಪರ್ವತವಾಗಿ ಅದರ ಭಾರಕ್ಕೆ ಸಾವಿನ ದಾರಿ ಹುಡುಕುತ್ತಾರೆ. ಪ್ರವಾದಿಯವರು(ಸ) ಬಡ್ಡಿಕೋರರ ಮೇಲೆ ಶಾಪ ಹಾಕಿದ್ದಾರೆ. ಬಡವರನ್ನು ಕಂಗೆಡಿಸುವ ಈ ಬಡ್ಡಿ ವ್ಯಾಪಾರಸ್ಥರನ್ನು ನರಕದಲ್ಲಿ ರಕ್ತದ ಕಾಲುವೆಯಲ್ಲಿ ಹಾಕಿ ಶಿಕ್ಷಿಸಲಾಗುವುದು. ಕುರ್‌ಆನ್ ತಿಳಿಸುತ್ತದೆ: "ಜನರೇ! ನೀವು ನಿಜಕ್ಕೂ ಸತ್ಯವಿಶ್ವಾಸಿಗಳಾಗಿದ್ದರೆ, ಜನರಿಂದ ಬರತಕ್ಕ ಬಡ್ಡಿಯನ್ನು 'ಮನ್ನಾ' ಮಾಡಿರಿ" ಎಂದು. 'ಲಂಚ' ಪಡೆಯುವುದನ್ನು ನಾವಿಂದು 'ಭ್ರಷ್ಟಾಚಾರ' ಎಂಬ ಹೆಸರಲ್ಲಿ ಖಂಡಿಸುತ್ತಿದ್ದೇವೆ. ಅದೇ ರೀತಿ ಬಡ್ಡಿ ಎಂಬುದೂ ಭ್ರಷ್ಟಾಚಾರವೇ ಆಗಿದೆ. ಈ ರೀತಿಯಲ್ಲಿ ಸಂಪಾದಿಸಿದ ಸಂಪತ್ತು ಶಾಶ್ವತವಾಗಿರುವುದಿಲ್ಲ. ಅದು ಅಳಿದು ಹೋಗುತ್ತದೆ ಅಥವಾ ಇಂತಹ ಸಂಪತ್ತು ರೋಗಕ್ಕೆ ಖರ್ಚು ಮಾಡುವುದರಲ್ಲಿ ಕರಗಿ ಬಿಡಬಹುದು. ಬಡ್ಡಿಯ ಹಣಕ್ಕೆ ಸಮೃದ್ಧಿ ಇರದು. ಅದೇ ನಾವು ದಾನಧರ್ಮಕ್ಕಾಗಿ ವ್ಯಯ ಮಾಡುವ ಹಣಕ್ಕೆ ಬರ್ಕತ್(ಸಮೃದ್ಧಿ) ಇರುತ್ತದೆ. ಝಕಾತ್ ನೀಡುವವರಿಗೆ ಸಂಪತ್ತು ವೃದ್ಧಿಸುತ್ತದೆ. ಇಂದು ಕೆಲವು ದುರಾಸೆಯ ಮನಸ್ಸಿನವರು ಸಾಲ ನೀಡುವ ದಂಧೆ ಆರಂಭಿಸಿಕೊಂಡು ನಾಗರಿಕರೂ ಚಕ್ರಬಡ್ಡಿಗಳ ಬಲೆಯೊಳಗೆ ಒದ್ದಾಡು ವಂತೆ ಮಾಡ್ತಾರೆ. ಮಹಿಳೆಯರೂ ಇಂತಹ ಬಡ್ಡಿ ವ್ಯಾಪಾರದಲ್ಲಿ ಪಳಗಿರುತ್ತಾರೆ. ತಮ್ಮ ನೆರೆಕರೆಯವರಿಗೆ ಬಡ್ಡಿ ಸಾಲ ನೀಡುತ್ತಾ ಮನೆಯಲ್ಲಿದ್ದುಕೊಂಡೇ ಬಿಸಿನೆಸ್ ಶುರು ಮಾಡ್ತಾರೆ. ಬಂಗಾರ, ವಾಹನ, ಮನೆ ಸಾಮಾನುಗಳನ್ನು ಸಾಲದ ಬದಲಿಗೆ ಬಡ್ಡಿಕೋರರಿಗೆ ತಂದು ಒಪ್ಪಿಸುತ್ತಾರೆ. ಇಂದು ಸ್ವಾವಲಂಬನೆಯ ಹೆಸರಿನಲ್ಲಿ ಉದ್ಯೋಗದೊಂದಿಗೆ ಸಂಘಟನೆಗಳು 'ಸಾಲ'ನೀಡುವ ಉದಾರತೆಯ ಪ್ರಚಾರ ಮಾಡುತ್ತದೆ. ಮಹಿಳೆಯರು ಸಂಘ-ಸಂಸ್ಥೆಗಳ ಈ ಪ್ರಚಾರದಲ್ಲಿ ಹಣದ ಸಹಾಯ ಪಡೆದು ಬಡ್ಡಿಯನ್ನು ಸುಲಭ ವಾಗಿ ಕಟ್ಟಬಹುದೆಂಬ ಭ್ರಮೆಯಲ್ಲಿ ಬಿದ್ದು ಬಿಡುತ್ತಾರೆ. ಸಂಘ-ಸಂಸ್ಥೆಯ ಸದಸ್ಯೆಯರಾದ ಮಹಿಳೆಯರಿಂದ ವಸೂಲು ಮಾಡುವ ಬಡ್ಡಿಯ ಮೊತ್ತವೇ ಕೋಟ್ಯಾಂತರ ರೂಪಾಯಿಯ ಲಾಭ ಉಂಟು ಮಾಡಿ ಶ್ರೀಮಂತರಿಗೆ ಹೊಸ ಉದ್ಯಮಗಳಿಗೆ ಅನುವು ಮಾಡಿ ಕೊಡುತ್ತದೆ. ಇಂತಹ ವ್ಯವಹಾರಗಳಿಂದ ಬಡವರು ಬಡವರಾಗಿಯೇ ಉಳಿದು ಬಿಟ್ಟಿರುತ್ತಾರೆ. ಬಂಡವಾಳ ಇದ್ದವರು ಹಣ ವೃದ್ಧಿಸುತ್ತಾ ಹೋಗುತ್ತಾರೆ. ಆದ್ರೆ... ಹಣದ ಆಸೆಯಲ್ಲಿ ಹುಚ್ಚನಾಗುವವನು ಎಂದಿಗೂ 'ತೃಪ್ತಿ' ಪಡಲಾರ. ಈ ರೀತಿಯಲ್ಲಿ ಶೇಖರಿಸುವ ದುಡ್ಡು ಬದುಕಿನ ನಾನಾ ರೂಪದ ಆಪತ್ತುಗಳಿಂದಾಗಿ ಕರಗಿ ಹೋಗುತ್ತದೆ. ಈ ಆಪತ್ತು ಕಳ್ಳತನದಿಂದಾಗಿ, ರೋಗದಿಂದ, ಅಯೋಗ್ಯ ಮಕ್ಕಳಿಂದಾಗಿ, ಕೋರ್ಟು-ಕೇಸುಗಳಿಗೆ ಕರಗಿ ಹೋಗುವುದೇ ಅಧಿಕ. ನ್ಯಾಯದಿಂದ ಸಂಪಾದಿಸಿದ ಹಣ(ಶ್ರೀಮಂತಿಕೆ) ಶಾಶ್ವತ ವಾಗಿರುತ್ತದೆ. ದೇವನ ಅನುಗ್ರಹವೂ ಈ ಸಂಪತ್ತಿಗೆ ಇರುತ್ತದೆ. ಅಸಹಾಯಕರ ನಿಟ್ಟುಸಿರುಗಳ ಮೂಲಕ ಬಂದ ಹಣ ನೀರಿನ ಗುಳ್ಳೆಯ ಆಯುಷ್ಯ ಹೊಂದಿರುತ್ತದೆ.

'ಬಡ್ಡಿ'ಯ ಎಲ್ಲಾ ವ್ಯವಹಾರವನ್ನು ದೇವನು ಶಪಿಸಿದ್ದಾನೆ. ■

350 ವರ್ಷ ಹಳೆಯ ಗಣಿತವನ್ನು ಬಗೆಹರಿಸಿದ ಭಾರತೀಯ!

16 ವರ್ಷದ ಭಾರತೀಯ ಮೂಲದ ಶೌರ್ಯ ರೇ 350 ವರ್ಷ ಹಿಂದಿನ ನ್ಯೂಟನ್ ತಯಾರಿಸಿದ ಗಣಿತದ ಸಮಸ್ಯೆಗೆ ಉತ್ತರ ಕಂಡುಕೊಂಡಿದ್ದಾರೆ. ಶೌರ್ಯ ರೇ, ಜರ್ಮನಿಯ ಶಾಲೆಯಲ್ಲಿ ಕಲಿಯುತ್ತಿದ್ದಾನೆ. ಗಣಿತದ ಈ ಸಮಸ್ಯೆಯನ್ನು ಬಗೆಹರಿಸಲು ಅತ್ಯಾಧುನಿಕ ಕಂಪ್ಯೂಟರ್ ಬಳಕೆಯಾಗುತ್ತಿತ್ತು. ಈತ 5 ವರ್ಷಗಳ ಹಿಂದೆ ಭಾರತಕ್ಕೆ ಬಂದಿದ್ದಾಗ ಜರ್ಮನ್ ಭಾಷೆಯ ಜ್ಞಾನವಿರಲಿಲ್ಲ. ಆದರೆ ಈಗ ಈತ ನಿರರ್ಗಳವಾಗಿ ಜರ್ಮನ್ ಭಾಷೆ ಮಾತನಾಡಬಲ್ಲ. ಮಾತ್ರವಲ್ಲ, ಈತನ ಬುದ್ಧಿವಂತಿಕೆಯಿಂದಾಗಿ 2 ವರ್ಷ ಮುಂಚೆಯೇ ಆತನನ್ನು ಪರೀಕ್ಷೆ ಬರೆಯಲು ಅನುವು ಮಾಡಿ ಕೊಟ್ಟಿದೆ.

ದೋಹಾ ಅಗ್ನಿ ದುರಂತಕ್ಕೆ ಬಲಿಯಾದ ತ್ರಿವಳಿಗಳು!!!

ಇತ್ತೀಚೆಗೆ ದೋಹಾದಲ್ಲಿ ಸಂಭವಿಸಿದ ಶಾಪಿಂಗ್ ಮಾಲ್ ಅಗ್ನಿ ದುರಂತಕ್ಕೆ 13 ಮಕ್ಕಳು ಬಲಿಯಾಗಿದ್ದಾರೆ. ಅವರಲ್ಲಿ ನ್ಯೂಝಿಲ್ಯಾಂಡ್‌ನ ತ್ರಿವಳಿಗಳಾದ 2 ವರ್ಷ ಪ್ರಾಯದ ಲಿಲ್ಲಿ, ಜ್ಯಾಕ್‌ಸನ್ ಮತ್ತು ವಿಲ್ಯರ್ ಅಗ್ನಿ ದುರಂತದಿಂದಾಗಿ ದಮ್ಮು ಕಟ್ಟಿ ಜೀವ ಕಳೆದುಕೊಂಡಿದ್ದಾರೆ. ಜೇನ್ ಹಾಗೂ ಮಾರ್ಟಿನ್ ದಂಪತಿಗಳ ಮಕ್ಕಳಾಗಿದ್ದರು (ಬೇರೆ ಮಕ್ಕಳಿಲ್ಲ) ಈ ತ್ರಿವಳಿಗಳು. ಕಳೆದ 2 ತಿಂಗಳುಗಳಿಂದ ಡೇ ಕೇರ್ ಸೆಂಟರ್‌ಗೆ ವಾರದ 3 ದಿನ ಹೋಗುತ್ತಿದ್ದರು. ಶಾಲಾ ಬ್ಯಾಗ್‌ಗಳನ್ನು ತೋರಿಸುತ್ತಾ ತ್ರಿವಳಿಗಳು ಸಂತಸ ಪಡುತ್ತಿದ್ದರು ಎಂದು ಆ ದಂಪತಿಗಳು ಕಣ್ಣೀರು ಹರಿಸುತ್ತಿದ್ದಾರೆ.

ಆರು ಕಾಲಿನ ಮಗು

ಕರಾಚಿಯ ಆಸ್ಪತ್ರೆಯಲ್ಲಿ ಇತ್ತೀಚೆಗೆ 6 ಕಾಲಿನ ಗಂಡು ಮಗುವಿನ ಜನನವಾಯಿತು. ಇಂತಹ ಅಪರೂಪದ ಘಟನೆ ಮಿಲಿಯಕ್ಕೆ ಒಂದರಂತೆ ನಡೆಯುತ್ತದೆಯೆಂದು ವೈದ್ಯರೊಬ್ಬರು ಅಭಿಪ್ರಾಯ ಪಡುತ್ತಾರೆ. ಮಗುವಿನ ತಂದೆ ಎಕ್ಸರೇ ಟೆಕ್ನಿಶಿಯನ್ ಆಗಿದ್ದಾರೆ.

ಧ್ವನಿ: ನನ್ನ ಗೆಳತಿ ಗ್ರಾಮ ಪ್ರದೇಶದಲ್ಲಿರುವುದು. ಆಕೆ ಅದೇ ಊರಿನ ಯುವಕನನ್ನು ಪ್ರೀತಿಸಿದ್ದಳು. ಅವರು ಒಂದೇ ಧರ್ಮದಲ್ಲಿರುವ ಬೇರೆ ಬೇರೆ ಜಾತಿಯವರಾಗಿದ್ದಾರೆ. ಅವರ ಮದುವೆಯನ್ನು ವಿರೋಧಿಸಿದ ಕುಟುಂಬದವರು ಅಲ್ಲಿಯ ಪಂಚಾಯಿತಿಗೆ ದೂರು ನೀಡಿದರು. ಪಂಚಾಯಿತಿಯ ಸಭೆಯಲ್ಲಿ ಈ ದಂಪತಿಗಳಿಗೆ ಊರಿಗೆ ಕಾಲಿಡಬಾರದೆಂಬ ಬಹಿಷ್ಕಾರ ಹಾಕಿದರು. ತಮ್ಮ ಹುಟ್ಟೂರಿನಿಂದ ಅವರನ್ನು ಹೊರಗೆ ಓಡಿಸಲಾಯಿತು. ಈ ಯುವ ದಂಪತಿಗಳು ಇಂದು ನಿಲ್ಲಲು ತಾಣವಿಲ್ಲದೆ ಅಲೆದಾಡುವಂತಾಗಿದೆ. ಎರಡೂ ಮನೆಯ ಸದಸ್ಯರೂ ಪರಸ್ಪರರನ್ನು ಶತ್ರುಗಳಂತೆ ಕಾಣುತ್ತಿದ್ದಾರೆ. ತಮ್ಮವರಿಂದ ದೂರವಾಗಿ ಮಾನಸಿಕವಾಗಿ ನೊಂದ ಈ ವಿವಾಹಿತರು ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೂ ಬಂದಿದ್ದರು. ಅಷ್ಟರಲ್ಲಿ ಹೊಸ ಜೀವ ಒಂದು ಉದರದಲ್ಲಿ ರೂಪುಗೊಳ್ಳುವ ಸತ್ಯ ತಿಳಿದಾಗ ಈ ಅಮಾಯಕ ಮಗುವಿಗಾಗಿ ಬದುಕಿರಲು ನಿರ್ಧರಿಸಿದರು. ಯಾಕೆ ಈ ಸಮಾಜದಲ್ಲಿ ಪ್ರೀತಿಸಿದವರನ್ನು ದ್ವೇಷಿಸಲಾಗುತ್ತಿದೆ? ಈ 'ಬಹಿಷ್ಕಾರ' ಹಾಕುವ ಹಕ್ಕು ಈ ಪಂಚಾಯಿತಿಯವರಿಗೆ ಇದೆಯೇ? ದೇಶದ ಕಾನೂನು ಇವರಿಗೆ ಅನ್ವಯಿಸದೇ?

ಬಹಿಷ್ಕಾರ ಹಾಕುವುದು ಸರಿಯೇ?

ಸಾಂತ್ವನ: ಪ್ರಾಚೀನ ಕಾಲದಿಂದಲೂ ಪ್ರೇಮಿಸಿದವರನ್ನು ಶಿಕ್ಷಿಸುವ, ಹತ್ಯೆ ಮಾಡುವ ಒಂದು ಕ್ರೂರ ಮನಃಸ್ಥಿತಿ ಕೆಲವು ಜನಾಂಗಗಳಲ್ಲಿ ನಡೆಯುತ್ತಾ ಬಂದಿದೆ. ಈ ಆಧುನಿಕ ಕಾಲದಲ್ಲೂ ನಾವಿದನ್ನು ಹೆಚ್ಚಾಗಿ ಉತ್ತರ ಭಾರತದ ಕೆಲವು ಘಟನೆಗಳಿಂದ ವೀಕ್ಷಿಸುತ್ತಿದ್ದೇವೆ. ಒಂದೇ ಸಮುದಾಯದ ಗಂಡು-ಹೆಣ್ಣು ಮೆಚ್ಚಿ ವಿವಾಹ ಆದ ಬಳಿಕ ಅವರು ಗೌರವದಿಂದಲೇ ಪತಿ-ಪತ್ನಿ ಆಗಿರುತ್ತಾರೆ. ಈ ದಂಪತಿಗಳಿಗೆ ಊರಿಗೆ ಕಾಲಿಡಬಾರದೆಂಬ ಬಹಿಷ್ಕಾರ ಹಾಕಿರುವುದು ಮಾನವೀಯತೆ ಖಂಡಿತಾ ಅಲ್ಲ. ವಿವಾಹ ಆದ ಬಳಿಕ ಅವರ ಸಂಬಂಧ ಪವಿತ್ರವೆಂದೇ ಅರ್ಥ. ಬಾವಿಯೊಳಗಿನ ಕಪ್ಪೆಯಂತೆ ಇಂತಹ ಪಂಚಾಯಿತಿಯವರ ಜ್ಞಾನ. ಜಗತ್ತು ವೈಜ್ಞಾನಿಕವಾಗಿ ಎತ್ತರಕ್ಕೆ ಬೆಳೆಯುತ್ತಿರುವಾಗ ಜಾತಿ-ಪಂಗಡದ ಹೆಸರಲ್ಲಿ ಬಹಿಷ್ಕಾರ, ಫತ್ವಾ ಕೊಡುವುದರಲ್ಲೇ ತಮ್ಮ 'ಪ್ರತಿಷ್ಠೆ'ಯನ್ನು ಗುರುತಿಸುತ್ತಾರೆ. ದೇಶದ ಕಾನೂನು ಇವರಿಗೆ ಅಗತ್ಯವೆನಿಸುವುದಿಲ್ಲ. ಅವರ ಮೂಗಿನ ನೇರದ ಸ್ವಯಂ ಜ್ಞಾನದ ಕಾನೂನನ್ನು ಮುಗ್ಧ ಜನರ ಮೇಲೆ ಪ್ರಯೋಗಿಸುತ್ತಾರೆ. ದಲಿತ ವ್ಯಕ್ತಿಯು ಮೇಲು ಜಾತಿಯವನ ಮನೆಯ ಬಾವಿ ನೀರು ಉಪಯೋಗಿಸಿದನೆಂದು ಛಡಿಯೇಟು ವಿಧಿಸುವುದು. ಯುವ ಪ್ರೇಮಿಗಳಿಗೆ ಅರೆನಗ್ನ ಮಾಡಿ ಮೆರವಣಿಗೆ ನಡೆಸುವುದು, ಹತ್ಯೆ ಮಾಡುವುದು ಇಂತಹ ಆಚ್ಛೆಯು ಪಂಚಾಯಿತಿಯ ಗಣ್ಯರಿಂದ ನಡೆಯುತ್ತದೆ.

ಇಂದು ನೂರಾರು ಪ್ರೇಮಿಗಳನ್ನು, ದಂಪತಿಗಳನ್ನು ಈ ಕ್ರೂರ ಮನಸ್ಥಿತಿಯ ಜನಾಂಗದವರು ಕೊಂದು ಹಾಕಿದ್ದಾರೆ. 'ಪ್ರೀತಿ' ದೇವಗುಣ, 'ದ್ವೇಷ' ಶೈತಾನನ ಗುಣ ಅನ್ನುತ್ತಾರೆ. ಹೃದಯವು ಯಾರನ್ನಾದರೂ ಮೆಚ್ಚಿದರೆ ಅದು ಪ್ರಕೃತಿಯಾಗಿದೆ. ಪ್ರೀತಿಯಲ್ಲಿ ಇಲ್ಲಸಲ್ಲದ ಕೆಡುಕುಗಳನ್ನು ಮಾಡುವ ಮೊದಲೇ ಅವರನ್ನು ವಿವಾಹ ಬಂಧನದಲ್ಲಿ ಒಂದಾಗಿಸಬೇಕು. ಪ್ರೇಮವು ಅನೈತಿಕತೆಗೆ ದಾರಿ ಮಾಡಿಸಬಾರದು. 'ಹತ್ಯೆ'ಯಂತಹ ಮಹಾಪಾಪವು ಪ್ರೇಮಿಗಳನ್ನು ಕೊಂದವರಿಗೆ ಬಾಧಿಸುತ್ತದೆ. ಹೆತ್ತವರಿಗೆ ತಮ್ಮ ಮಕ್ಕಳು ಆಯ್ಕೆ ಮಾಡಿದ ದಾರಿ ಮೆಚ್ಚಿಗೆ ಆಗದಿದ್ದಲ್ಲಿ ಅವರನ್ನು ಅವರ ದಾರಿಗೆ ಬಿಟ್ಟು ಬಿಡಲಿ. ದ್ವೇಷ, ಶಿಕ್ಷೆ, ಪ್ರತೀಕಾರ ತೀರಿಸುವುದು ರಾಕ್ಷಸೀಯ ಮನಃಸ್ಥಿತಿಯಾಗಿದೆ. ಅವರನ್ನು ಕ್ಷಮಿಸುವ ವಿಶಾಲತೆ ಇಲ್ಲವಾದ್ರೆ ಉಪದ್ರವ ನೀಡುವ ಗುಣವೂ ಬೇಡ. ಕೊಲ್ಲುವ ಅಧಿಕಾರ ಹೆತ್ತವರಿಗೂ ಇಲ್ಲ. ಗ್ರಾಮ-ಹಳ್ಳಿಗಳ ಪಂಚಾಯಿತಿ ಮುಖಂಡರು ತಮ್ಮ ಮೂಗಿನ ನೇರಕ್ಕೇ ತೀರ್ಪು ನೀಡುವುದು ಹಾಸ್ಯಾಸ್ಪದ. ನಮಗೆ ಕಾನೂನು ಇದೆ. ನಮ್ಮದೇ ಸಂವಿಧಾನವಿದೆ. ಉತ್ತರ ಭಾರತದ ರಿಝ್ವಾನ್ ಎಂಬ ಯುವಕನ ಹತ್ಯೆಯನ್ನು ನಾವಿಂದೂ ಮರೆತಿಲ್ಲ. ವಿವಾಹವಾದ ಬಳಿಕ ದಂಪತಿಗಳನ್ನು ಪೀಡಿಸುವುದು ನ್ಯಾಯವಲ್ಲ. ಗೌರವ ಹತ್ಯೆಯು ಇಂದು ನಮ್ಮ ಉತ್ತರ ಭಾರತದಲ್ಲಿ ಅಧಿಕವಾಗಿ ಘಟಿಸುತ್ತಿದೆ. ಕಳೆದ ವಾರವೇ ಲಕ್ನೋದಲ್ಲಿ ಹದಿನಾರು ವರ್ಷದ ಮಗಳನ್ನು ಹೆತ್ತವನೇ ಕತ್ತು ಹಿಸುಕಿ ಕೊಲೆ ಮಾಡಿದ ಸುದ್ದಿ ವರದಿಯಾಗಿದೆ. ಮಕ್ಕಳು ಹೆತ್ತವರ ಮಾತು, ಬುದ್ಧಿವಾದ ಕೇಳದಿದ್ದರೆ, 'ಸಂಬಂಧ'ವನ್ನು ಮರೆತು ಹೋಗುವಲ್ಲಿಗೆ ಅಟ್ಟಿ ಬಿಡುವುದೇ ಹೊರತು, ಅವರ ಸರ್ವನಾಶದ ಬಗ್ಗೆ ಚಿಂತಿಸುವುದು ಸರಿಯಲ್ಲ. ಒಂದಾ ಮಕ್ಕಳನ್ನು ಕ್ಷಮಿಸಿ ಅವರ ಭವಿಷ್ಯದ ಯಶಸ್ಸಿಗೆ ಹಾರೈಸುವುದು ಅಥವಾ 'ಮೌನ' ವಹಿಸುವುದು ಹೆತ್ತವರ ಕೆಲಸ. 'ಪ್ರೀತಿ' ಕುರುಡು ಅನ್ನುತ್ತಾರೆ. ಹಾಗಿರುವಾಗ ಕುರುಡರನ್ನು ಶಿಕ್ಷಿಸಿ ಏನು ಲಾಭ? ನಿಮ್ಮ ಗೆಳತಿ ಹಾಗೂ ಆಕೆಯ ಪತಿಯನ್ನು ಊರಿಗೆ ಕಾಲಿಡದಂತೆ ಬಹಿಷ್ಕಾರ ಹಾಕಿರುವುದು ಪಂಚಾಯಿತಿ ಮುಖಂಡರ ಮೂರ್ಖತನವೇ ಆಗಿದೆ. ಇದು ಪ್ರಜಾಪ್ರಭುತ್ವ ದೇಶ. ಇಲ್ಲಿ ಮದುವೆ, ಮತಾಂತರ, ಓಟಿನ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂವಿಧಾನವೇ ನಾಗರಿಕರಿಗೆ ನೀಡಿದೆ. ಅವರು ಈ ಕುರಿತು ಕಾನೂನು ಸಮರ ಹೂಡಲಿ. ಇತ್ತೀಚೆಗೆ ಒಂದು ಜೋಡಿ ವಿವಾಹ ಆಗಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಬಂದಿತ್ತು. ಅದು ಕೂಡಾ ಹೆತ್ತವರು ತಮ್ಮನ್ನು ಸ್ವೀಕರಿಸಲಿಲ್ಲವೆಂಬ ಕೊರಗಿನಿಂದ ಈ ಜೋಡಿ ಆತ್ಮಹತ್ಯೆ ಮಾಡಿದ್ದರು. ಇಂತಹ ದ್ವೇಷದಿಂದ ಏನು ಪ್ರಯೋಜನ? ಮಕ್ಕಳ ಸುಖ, ಸಂತೋಷಕ್ಕಿಂತಲೂ ಮಿಗಿಲೇ ಈ ಜಾತಿ-ವರ್ಗ-ಪಂಗಡ ಪ್ರೇಮ!!? ■

ಅಹಂಕಾರವು ರಾತ್ರಿಯ ಕತ್ತಲೆಗಿಂತಲೂ ಗಾಢವಾದುದು

24 ಗಂಟೆಯೂ ರಸ್ತೆ ನಿಯಮಗಳ ಪಾಲನೆ ಅಗತ್ಯ

ಡಾ। ಲಲಿತ

ರಸ್ತೆ ಅಪಘಾತಗಳ ಸಾವಿನ ಸುದ್ದಿ ಗಳಿಲ್ಲದ ದಿನಪತ್ರಿಕೆಗಳು ನೋಡಲು ಸಿಗುವುದು ವಿರಳ. ದಿನಂಪ್ರತಿ ಈ ಸಾವಿನ ಸಂಖ್ಯೆಯು ಏರುತ್ತಿರುವುದು ದುರಂತ ಸತ್ಯ. ಇತ್ತೀಚೆಗೆ ರಸ್ತೆ ಅಪಘಾತಗಳ ಕುರಿತು ಓದಲು ಸಿಕ್ಕಿದ ಲೇಖನದಲ್ಲಿ ಲೇಖಕರು ರಸ್ತೆ ಅಪ ಘಾತಗಳಿಗೆ ಕಾರಣಗಳನ್ನು ಪಟ್ಟಿ ಮಾಡಿದ್ದರು. ಇವುಗಳಲ್ಲಿ ನಮ್ಮ ದೇಶದ ರಸ್ತೆಗಳ ದಯನೀಯ ಅವಸ್ಥೆ, ವಾಹನ ಚಾಲನೆಯಲ್ಲಿ ಪೈಪೋಟಿ, ತಪ್ಪಾದ ಓವರ್‌ಟೇಕ್‌ಗಳು, ಮದ್ಯಪಾನ, ನಿರ್ಲಕ್ಷ್ಯ, ಅತಿಯಾದ ವೇಗ, ಸೀಟ್ ಬೆಲ್ಟ್, ಹೆಲ್ಮೆಟ್ ಧರಿಸದಿರುವುದು, ವಾಹನದ ದೀಪಗಳನ್ನು ನಿಯಂತ್ರಿಸ ದಿರುವುದು, ಟ್ರಾಫಿಕ್ ನಿಯಮಗಳನ್ನು ಅಲಕ್ಷಿಸು ವುದು. ಇತ್ಯಾದಿಗಳು ಗಮನಾರ್ಹ ಕಾರಣಗಳಾಗಿವೆ.

ಮೂವತ್ತು ಕೋಟಿಗೂ ಅಧಿಕ ವಾಹನಗಳಿರುವ ಅಮೇರಿಕ ದೇಶದಲ್ಲಿ ವರ್ಷಕ್ಕೆ ವಾಹನ ಅಪಘಾತಗಳಿಂದ ಸಾಯುವವರ ಸಂಖ್ಯೆ 50,000. ಆದರೆ ಹತ್ತು ಕೋಟಿ ವಾಹನಗಳು ಮಾತ್ರ ಇರುವ ಭಾರತ ದೇಶದಲ್ಲಿ ವರ್ಷವೊಂದಕ್ಕೆ ವಾಹನ ಅಪಘಾತಗಳಲ್ಲಿ ಪ್ರಾಣ ತೆರು ವವರ ಸಂಖ್ಯೆ ಒಂದೂ ಕಾಲು ಲಕ್ಷ ಕ್ಕಿಂತಲೂ ಅಧಿಕ. ಈ ಅಂಕಿ ಅಂಶವು ವಾಹನ ಅಪಘಾತಗಳ ಕುರಿತು ನಾವು ಕೂತು ಆಲೋಚಿಸಲು ನಿರ್ಬಂಧಿಸುತ್ತಿದೆ. ಕೇವಲ ಕೇರಳ ರಾಜ್ಯವೊಂದರಲ್ಲೇ ವರ್ಷಕ್ಕೆ 4,000 ಜನರು ರಸ್ತೆ ಅಪಘಾತಗಳಿಗೆ ಬಲಿಯಾಗುತ್ತಿದ್ದಾರೆ. ಪ್ರತಿದಿನ ಸರಾಸರಿ 12 ಜನ ಜೀವ ಕಳೆದುಕೊಳ್ಳುತ್ತಿದ್ದಾರೆ. ಇವರ ಪೈಕಿ ಪಾದಚಾರಿಗಳು ಅಪ ಘಾತಕ್ಕೀಡಾಗುವುದು ಹೆಚ್ಚು.

ಈ ಮೇಲೆ ಸೂಚಿಸಲಾದ ಕಾರಣಗಳು ರಸ್ತೆ ಅಪಘಾತಕ್ಕೆ ಕಾರಣವಾಗುವುದು ನೂರು ಶೇಕಡ ಸತ್ಯ ಸಂಗತಿ. ನಮ್ಮಲ್ಲಿ ಕೆಲವೆಡೆ ರಸ್ತೆಗಳು ಮತ್ತು ನೀರು ಹರಿಯುವ ತೋಡುಗಳ ಮಧ್ಯೆ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಅದರ ಜೊತೆ ಕೇಬಲ್ ಅಳವಡಿಕೆ, ಒಳಚರಂಡಿ, ನೀರಿನ ಪೈಪು ಅಳವಡಿಸಲು ಎಂಬಿತ್ಯಾದಿ ಕಾರಣ ಗಳನ್ನೊಡ್ಡಿ ಸಾಮಾನ್ಯವಾಗಿ ರಸ್ತೆ ಬದಿಗಳಲ್ಲಿ ಹೊಂಡಗಳ ನಿರ್ಮಾಣ ಸರ್ವೇಸಾಮಾನ್ಯ ವಿಷಯವಾಗಿದೆ. ಇದೂ ಅಪಘಾತಕ್ಕೆ ಕಾರಣವಾಗುತ್ತದೆ. ರಸ್ತೆಗಳು ದೇಶದ ಅಭಿವೃದ್ಧಿಯನ್ನು ತೋರಿಸುವ ಒರೆಗಲ್ಲು ಗಳು ಎಂಬ ಸತ್ಯವನ್ನು ನಮ್ಮ ಜನರು ಇನ್ನೂ ಅರ್ಥಮಾಡಿಕೊಂಡಂತಿಲ್ಲ.

ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ಸಂಖ್ಯೆಯೂ ನಮ್ಮ ದೇಶದಲ್ಲೇ ಅಧಿಕ. ಕೇವಲ ಮಂಗಳೂರು ನಗರವನ್ನೇ ಗಮನದಲ್ಲಿರಿಸಿದ್ದರೂ ಇತ್ತೀಚಿನ ಕೆಲವು ವರ್ಷಗಳಲ್ಲಿ ಅನೇಕ ಬಾರ್‌ಗಳು ಹೈಟೆಕ್ ರೂಪದಲ್ಲಿ ತಲೆ ಎತ್ತಿವೆ. ಮದ್ಯಪಾನ ಮಾಡಿ ವಾಹನ ಚಲಾಯಿಸುವಾಗ ಎಡ ಬಲಗಳ ವ್ಯತ್ಯಾಸ ವಿಲ್ಲದೆ ಓವರ್‌ಟೇಕ್ ಮಾಡುವುದೇ ಸಾಮಾನ್ಯ. ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸುವವರ ಸಂಖ್ಯೆಯೂ ನಮ್ಮ ದೇಶದಲ್ಲೇ ಅಧಿಕ. ಏಕೆಂದರೆ ಇತರ ದೇಶಗಳಿಗೆ ಹೋಲಿಸಿದರೆ ಈ ಅಪ ರಾಧಗಳಿಗೆ ನಮ್ಮಲ್ಲಿ ಸಿಗುವ ಶಿಕ್ಷೆ ಬಹಳ ಸರಳ. ಈ ಶಿಕ್ಷೆಯಿಂದ ಜನರು ಯಾವುದೇ ರೀತಿಯ ಪಾಠ ಕಲಿಯುವುದಿಲ್ಲ.

ಯಾವುದೇ ನಿಯಮಗಳನ್ನಾದರೂ ಉಲ್ಲಂಘಿಸುವುದರಲ್ಲಿ ಸಂತೋಷ ಕಾಣುವ ಪ್ರವೃತ್ತಿ ನಮ್ಮ ಸಂಸ್ಕೃತಿಯ ಭಾಗವಾಗುತ್ತಿದೆ. ಪಾದಚಾರಿಗಳು ಸದಾ ರಸ್ತೆಯ ಬಲ ಭಾಗದಲ್ಲಿ ನಡೆಯಬೇಕೆಂದು ನಿಯಮ. ಆದರೆ ಈ ಬಗ್ಗೆ ಎಷ್ಟು ಮಂದಿಗೆ ಅರಿವಿದೆ? ಎಷ್ಟು ಮಂದಿ ಅದನ್ನು ಪಾಲಿಸುತ್ತಿದ್ದಾರೆ? ಒಂದು ವೇಳೆ ಸರಿಯಾದ ಪಾದಚಾರಿ ರಸ್ತೆಗಳಿದ್ದರೆ ನಿಯಮಗಳನ್ನು ಪಾಲಿಸುತ್ತಿದ್ದರೆ, ಪಾದ ಚಾರಿಗಳ ಸಾವಿನ ಸಂಖ್ಯೆಯನ್ನು ನಿಯಂತ್ರಿಸಬಹುದಾಗಿತ್ತು. ಆದರೆ ಈ ಸಂಖ್ಯೆ ದಿನೇದಿನೇ ಹೆಚ್ಚುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ದ್ವಿಚಕ್ರ ವಾಹನ ಚಾಲಕರು ಹೆಲ್ಮೆಟ್ ಧರಿಸಬೇಕೆಂದು ನಿಯಮ ಜಾರಿಯಾದ ಬಳಿಕವೂ ಅದನ್ನು ಕೈಯಲ್ಲಿ ನೇತು ಹಾಕಿ ದೂರದಲ್ಲಿ ಟ್ರಾಫಿಕ್ ಪೊಲೀಸರಿರುವುದನ್ನು ಕಂಡರೆ ಮಾತ್ರ ಅದನ್ನು ತಲೆಯ ಮೇಲೇರಿಸುವ ಯುವಕರು ಧಾರಾಳ ಸಂಖ್ಯೆಯಲ್ಲಿದ್ದಾರೆ. ಇವರಿಗೆ ತಮ್ಮ ಜೀವನ ರಕ್ಷಣೆಗಿಂತ ಪೊಲೀಸರ ಕಣ್ಣಿಗೆ ಮಣ್ಣೆರೆಚುವ ಕೆಲಸ ಹೆಚ್ಚು ಮುದ ನೀಡುತ್ತದೆ. ಇವೆಲ್ಲವುಗಳ ಹೊರತಾಗಿ ಕೆಲವು ಗಮನಾರ್ಹ ಅಂಶಗಳಿವೆ.

1. ಅವೈಜ್ಞಾನಿಕವಾದ ಹಂಪುಗಳ ರಚನೆ. ಕೆಲವು ರಸ್ತೆಗಳಲ್ಲಿ ದಿನ ಬೆಳಗಾಗುವಾಗ ಹಂಪುಗಳ ರಚನೆ ಯಾಗಿರುತ್ತದೆ. ಚಾಲಕರಿಗೆ ಅದರ ಬಗ್ಗೆ ತಿಳಿದಿರುವುದೇ ಇಲ್ಲ. ಮತ್ತೆ ಕೆಲವೆಡೆ ಏರು ರಸ್ತೆಗಳ ಮಧ್ಯೆ ಹಂಪು ರಚಿಸಿರು ತ್ತಾರೆ. ಈ ರೀತಿಯಲ್ಲಿ ಏರು ರಸ್ತೆಗಳಲ್ಲಿ ಎಂದೂ ಹಂಪುಗಳನ್ನು ರಚಿಸಬಾರದೆಂದು ರಸ್ತೆಯ ಇಂಜಿನಿಯರ್‌ಗಳು ಅಭಿಪ್ರಾಯ ಪಡುತ್ತಾರೆ. ವೇಗವನ್ನು ನಿಯಂತ್ರಿಸಲು ಉಪಯೋಗಿಸುವ ಈ ಹಂಪುಗಳು ಸಮತಟ್ಟಾದ ರಸ್ತೆಯಲ್ಲಿ ನಿರ್ಮಿಸಬೇಕು. ಅದಕ್ಕೆ ಸೂಚಿಸಲಾದ ರೀತಿಯಲ್ಲೇ ಅದರ ಗಾತ್ರ ವಿನ್ಯಾಸ ಇರಬೇಕು. ಅದರ ಮೇಲ್ಭಾಗ ಅಗಲವಾಗಿರಬೇಕು. ಅವುಗಳ ಹೊರಕ್ಕೆ ಒಂದೋ ರಿಫ್ಲೆಕ್ಟರ್‌ಗಳನ್ನು ಅಳವಡಿಸಬೇಕು ಅಥವಾ ಮಿನುಗುವ ಬಣ್ಣವನ್ನು ಹಚ್ಚಿರಬೇಕು. ಇಲ್ಲಿ ಹಂಪ್

ಇದೆ ಎಂಬುದನ್ನು ಸೂಚಿಸುವ ಬೋರ್ಡ್‌ಗಳು ರಸ್ತೆ ಬದಿಯಲ್ಲಿ ನಿಲ್ಲಿಸಿರಬೇಕು. ಈ ರೀತಿಯಲ್ಲಿ ನಿಯಮವನ್ನು ಪಾಲಿಸದೆ ಬೇಕಾಬಿಟ್ಟಿಯಾಗಿ ನಿರ್ಮಿಸಿದ ಹಂಪು ಗಳಿಂದ ಅಪಘಾತಗಳ ಸಂಖ್ಯೆ ಹೆಚ್ಚಾ ಗಿದೆ. ಒಂದೊಂದು ರಸ್ತೆಯಲ್ಲಿ ಲೆಕ್ಕ ವಿಲ್ಲದಷ್ಟು ಹಂಪುಗಳ ನಿರ್ಮಾಣ ವಾಗುತ್ತಿದೆ. ಇದರಿಂದ ದ್ವಿಚಕ್ರ ವಾಹನ ಚಾಲಕರು ತೀವ್ರ ತೊಂದರೆಗೊಳಗಾಗು ತ್ತಾರೆ. ಅಪಘಾತ ಹೆಚ್ಚಾಗುತ್ತಿದೆ.

2. ಯಾವುದೇ ನಿಯಮಗಳಾದರೂ ಅದನ್ನು 24 ಗಂಟೆಗಳ ಕಾಲ ಪಾಲಿಸ ಬೇಕೆಲ್ಲವೇ? ಆದರೆ ಎಂಟು ಗಂಟೆ ಯಾದ ಕೂಡಲೇ ಇಲ್ಲಿ ರಸ್ತೆಗಳ ಏಕ ಮುಖ ರಸ್ತೆ (One way) ದ್ವಿಮುಖ ರಸ್ತೆಗಳಾಗಿ (Two way) ಮಾರ್ಪಡುವುದು ಹೇಗೆ? ಟ್ರಾಫಿಕ್ ಲೈಟುಗಳು ತಮ್ಮ ಕೆಲಸವನ್ನು ನಿಲ್ಲಿಸುವುದು ಏಕೆ? ರಾತ್ರಿಯಾದರೆ ಸಾಕು ರಸ್ತೆಯಲ್ಲೆಲ್ಲ ಹೊಸದಾಗಿ ಡ್ರೈವಿಂಗ್ ಕಲಿಯುವ ಚಾಲಕರೇ ತುಂಬಿರುತ್ತಾರೆ ಎಂಬುದನ್ನು ತಿಳಿಯದವರಲ್ಲ ನಾವು. ನಿದ್ರಿಸುತ್ತಲೇ ಘನ ವಾಹನಗಳನ್ನು ಓಡಿಸುವ ಚಾಲಕ ಮಹಾಶಯರೂ ಇರುತ್ತಾರೆ. ಹಗಲಿ ಗೊಂದು ನಿಯಮ ಮತ್ತು ರಾತ್ರಿ ಗೊಂದು ನಿಯಮ ಇದು ನನಗೆ ಎಂದಿಗೂ ಅರ್ಥವಾಗದ ರಹಸ್ಯವಾಗಿ ಉಳಿದಿದೆ.

3. ವಾಹನ ಚಾಲನೆಯಲ್ಲಿ ಬಹಳ ಚಾಲಾಕಿ ಎಂಬ ಹೆಸರುಳ್ಳ ಓರ್ವ ಖ್ಯಾತ ಡಾಕ್ಟರ್(ಮಹಿಳೆ)ರೊಂದಿಗೆ ಒಮ್ಮೆ ಪ್ರಯಾಣಿಸುವ ಅವಕಾಶ ಸಿಕ್ಕಿತ್ತು. ರಸ್ತೆಯ ಇಕ್ಕೆಲೆಗಳಲ್ಲಿಯೂ ದೊಡ್ಡ ದೊಡ್ಡ ಹೋರ್ಡಿಂಗ್‌ಗಳು. ವಿವಿಧ ರೀತಿಯ ವಸ್ತ್ರ ಆಭರಣಗಳ ಜಾಹೀರಾತು ಬೋರ್ಡ್‌ಗಳು. ನೋಡುತ್ತ ನೋಡುತ್ತ ಒಂದು ಸಾರಿಯ ಕುರಿತು ತೋರಿಸುತ್ತಾ ಬಂದದ್ದೇ ಕಾರು ರಸ್ತೆಯ ಬದಿಗೆ ಬಂದು ತಲೆಕೆಳಗಾಗುವುದರಲ್ಲಿತ್ತು. ಹೆಂಗಸು ಗಟ್ಟಿಗಳಾದ ಕಾರಣ ನಿಯಂತ್ರಿಸಿಕೊಂಡು ಪುನಃ ರಸ್ತೆಗೆ ಕಾರನ್ನು ತಂದರು. ಕೇವಲ ಹೆಣ್ಣು ಮಗಳೊಬ್ಬಳೇ ಇಂತಹ ಸಾರಿಯ ಜಾಹೀರಾತಿನಿಂದ ಇಷ್ಟು ಆಕರ್ಷಣೆ ಗೊಳಗಾದರೆ ಮಾದಕ ನಗುವಿನಿಂದ ತುಂಬಿದ ಮಹಿಳೆಯರನ್ನು ಅರೆನಗ್ನ ಚಿತ್ರಗಳನ್ನು ತೋರಿಸುವ ಬೋರ್ಡ್ ಗಳಿಂದ ನಮ್ಮ ಇತರ ಚಾಲಕರಿಗೆ ಎಷ್ಟು ಏಕಾಗ್ರತೆಗೆ (ಚಾಲನೆಯ ವಿಷಯದಲ್ಲಿ) ತೊಂದರೆಯಾಗುತ್ತಿರಬಹುದು?

ಈ ಬಗ್ಗೆ ಸಂಬಂಧಪಟ್ಟವರು ಇನ್ನಾದರೂ ಗಮನಹರಿಸಿ ಇಂತಹ ಹಂಪು, ಹೋರ್ಡಿಂಗ್‌ಗಳಿಂದ ರಸ್ತೆಯನ್ನು ಸುರಕ್ಷಿತಗೊಳಿಸುವರೇ? ರಸ್ತೆ ನಿಯಮಗಳು 24 ಗಂಟೆಯೂ ಪಾಲಿಸಬೇಕಾದವುಗಳೆಂಬ ಬಗ್ಗೆ ಜನಜಾಗೃತಿ ಮೂಡಿಸುವರೇ? ಕಾದು ನೋಡಬೇಕಿದೆ. ■

ಭ್ರೂಣ ಹತ್ಯೆ ಮತ್ತು ಸ್ತ್ರೀ ಹತ್ಯೆ

■ ಝರೀನಾ ಸಾಲಿಹ್ ■

ಹೆಣ್ಣು ಶಿಶುವಿನ ಜನನ ಅವಮಾನ, ಅಪಶಕುನವೆಂದು ಭಾವಿಸುತ್ತಿರುವ ಆಧುನಿಕ ಯುಗದಲ್ಲಿ ಹೆಣ್ಣು ಭ್ರೂಣಹತ್ಯೆ, ಕೊಲೆಗಳು ನಿರಂತರವಾಗಿ ನಡೆಯುತ್ತಿದೆ. ಸ್ವಂತ ಅಪ್ಪನ ಪೀಡನೆಯಿಂದ ಆಸ್ಪತ್ರೆ ಸೇರಿ ಮರಣ ಹೊಂದಿದ ಆಫ್ರೀನ್ ಎಂಬ ಹಸುಗೂಸು ಅದರ ಹೊಸ ಸೇರ್ಪಡೆ ಮಾತ್ರ. ಇಂತಹದೇ ಇನ್ನೆರಡು ಘಟನೆಗಳು ಆ ಕಿರಾತಕ ಅಪ್ಪಂದಿರ ಹೆಸರು ಭಾರತದ ಇತಿಹಾಸದಲ್ಲಿ ಸೇರ್ಪಡೆಯಾಗಿದೆ. ಸ್ವಂತ ರಕ್ತದಿಂದ ಜನಿಸಿದ ಪುಟ್ಟ ಕಂದಮ್ಮಗಳನ್ನು ಕ್ರೂರವಾಗಿ ಹತ್ಯೆ ನಡೆಸುವ ಇಂತಹವರು ಪಿತೃ ಕುಲಕ್ಕೇ ಅಪಮಾನ. ಕಾನೂನಿನ ಕಣ್ಣಿಗೆ ಮಣ್ಣೆರಚಿ ಕಾನೂನಿನ ಕಠಿಣ ವಿಧಿಗಳನ್ನು ಉಲ್ಲಂಘಿಸಿ ಸಮಾಜದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಹೆಣ್ಣು ಭ್ರೂಣಹತ್ಯೆ, ಸ್ತ್ರೀ ಶೋಷಣೆ ಅತ್ಯಾಚಾರ ಕೊಲೆಯಂತಹ ಕೃತ್ಯಗಳು ನಾಚಿಕೆಗೇಡಿನ ಸಂಗತಿಯಾಗಿದೆ.

ಹಿಂದಿನ ಕಾಲದಲ್ಲಿ ಪುರುಷರೊಂದಿಗೆ ಮಹಿಳೆಯರಿಗೂ ಸ್ಥಾನಮಾನವಿತ್ತು. ಕುಟುಂಬದ ಗಂಡಸರು ಆಹಾರ ಸಂಪಾದನೆಗಾಗಿ ಹೊರಗೆ ಹೋಗುವಾಗ ಮನೆ ನಿಭಾಯಿಸಲು, ಮಕ್ಕಳನ್ನು ಸಂರಕ್ಷಿಸಲು, ಆಹಾರ ತಯಾರಿಸಲು ಸ್ತ್ರೀಯರ ಅಸ್ತಿತ್ವವು ರಕ್ಷಾ ಕವಚವಾಗಿತ್ತು. ಹಲವು ಪುರಾತನ ಸಮಾಜಗಳಲ್ಲಿ ಮಹಿಳೆಯರಿಗೆ ಉನ್ನತ ಪದವಿಯಿತ್ತು. ಆ ಬಳಿಕದ ಕರಾಳ ಯುಗದಲ್ಲಿ ಹೆಣ್ಣು ಶೋಷಣೆಯ, ಅವಮಾನದ ವಸ್ತುವಾಗಿ ಬದಲಾದಳು. ಆದಿ ಮಾನವ ಆದಮನ್ನು ದಾರಿ ತಪ್ಪಿಸಿದವಳೆಂಬ ಕಳಂಕವನ್ನು ಸ್ತ್ರೀ ಸಮೂಹದ ಮೇಲೆ ಹೊರಿಸಲಾಗಿದೆ.

ಆದಮರನ್ನು ಪ್ರಥಮವಾಗಿ ಸೃಷ್ಟಿಸ ಲಾಯಿತು. ಅವರ ಪಕ್ಕೆಲುಬಿನಿಂದ ಸಂಗಾತಿಯಾಗಿ ಹವ್ವಾರನ್ನು ಮಾಡ ಲಾಯಿತು. ಸೈತಾನನ ದುಷ್ಪ್ರೇರಣೆಯಿಂದ ಆದಮರನ್ನು ಹವ್ವಾ ದಾರಿ ತಪ್ಪಿಸಿದಳು. ಅದರಿಂದ ಸ್ತ್ರೀ ಶಪಿಸಲ್ಪಟ್ಟವಳಾದಳೆಂದು ಕ್ರೈಸ್ತರು ಮತ್ತು ಯಹೂದಿಯರು ಭಾವಿಸಿದ್ದರೆಂದು ಹಳೆಯ ಬೈಬಲಿನಲ್ಲಿ ಉಲ್ಲೇಖಿಸಲಾಗಿದೆ. ಅದಕ್ಕಿಂತ ಮೊದಲಿನ ಬ್ಯಾಬಿಲೋನಿಯನ್ ಸಂಸ್ಕೃತಿಯಲ್ಲಿ ಸ್ತ್ರೀ ಕೇವಲ ಮಾರಾಟದ ಸರಕಾಗಿದ್ದರು. ವಿವಾಹ ಪ್ರಾಯವಾದ ಹೆಣ್ಣು ಮಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಪದ್ಧತಿ ಚಾಲ್ತಿಯಲ್ಲಿತ್ತು. ಅತಿ ಸುಂದರಿಯರಿಗೆ ಬೆಲೆ ಜಾಸ್ತಿ. ಗ್ರೀಕ್ ನಾಗರಿಕತೆಯಲ್ಲಿ ಮಹಿಳೆಯರು ಮಾನವ ಕುಲದ ಎಲ್ಲಾ ದುರಂತ ದುಃಖಗಳಿಗೆ ಕಾರಣವೆಂದು ತಿಳಿದಿದ್ದರು. ಅರೇಬಿಯಾದಲ್ಲಿ ಕುರ್‌ಆನ್ ಅವತೀರ್ಣಕ್ಕಿಂತ ಮುಂಚಿನ ಕರಾಳ ಯುಗದಲ್ಲಿ ಹೆಣ್ಣು ಅಪಮಾನ, ಹೊರೆಯೆಂದು ಭಾವಿಸಿದ್ದರು. ಹೆಣ್ಣು ಮಕ್ಕಳನ್ನು ಜೀವಂತವಾಗಿ ಹೂಳುವ ಪದ್ಧತಿ ಅರಬ್ ಗೋತ್ರಗಳಲ್ಲಿ ಚಾಲ್ತಿ ಯಲ್ಲಿತ್ತು. ಮುಂದುವರಿದ ದೇಶಗಳೆಂದು

ಹೆಮ್ಮೆಪಡುವ ಪಾಶ್ಚಿಮಾತ್ಯ ದೇಶಗಳಲ್ಲಿ ಕೂಡಾ ಸ್ತ್ರೀಯರು ಸ್ವತಂತ್ರವಾಗಿರ ಲಿಲ್ಲ. ಹನ್ನೊಂದನೇ ಶತಮಾನದಲ್ಲಿ ಇಂಗ್ಲೇಂಡಿನಲ್ಲಿ ಪತಿಗೆ ಪತ್ನಿಯನ್ನು ಮಾರುವ ಅಧಿಕಾರವಿತ್ತು. ಹೆನ್ರಿ ಎಂಟನೆಯ ರಾಜ ಮಹಿಳೆಯರು ಬೈಬಲ್ ಓದಬಾರದೆಂಬ ಕಾನೂನನ್ನು ತಂದ. ಫ್ರಾನ್ಸಿನ ಸ್ಥಿತಿಯೂ ಇದಕ್ಕಿಂತ ಭಿನ್ನ ವಾಗಿರಲಿಲ್ಲ. ದೀರ್ಘಕಾಲದ ಸ್ತ್ರೀಯರ ಹೋರಾಟದ ನಂತರ ಅಲ್ಲಿನ ಮಹಿಳೆ ಯರು ಮನುಷ್ಯರಾಗಿ ಜೀವಿಸುವ ಸ್ವಾತಂತ್ರ್ಯವನ್ನು ಪಡೆದರು.

ಪ್ರವಾದಿ ಮುಹಮ್ಮದ್‌ರವರ(ಸ) ಕಾಲದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನಮಾನ ಲಭಿಸಿತು. ಜನರೇ, ಮಾನವರೇ, ಎಂದು ಅಭಿಸಂಬೋಧಿಸಿ ಅನೇಕ ಸೂಕ್ತಗಳು ಅವತೀರ್ಣವಾಯಿತು. ಜನರೆಂದು ಹೇಳುವಾಗ ಸ್ತ್ರೀ–ಪುರುಷರಿಬ್ಬರೂ ಅದರಲ್ಲಿ ಭಾಗಿಯಾಗುತ್ತಾರಲ್ಲಾ? ಪುರುಷನಾಗಲಿ, ಸ್ತ್ರೀಯಾಗಲೀ ಸತ್ಯವಿಶ್ವಾಸಿಗಳಾಗಿ ಸತ್ಕರ್ಮ ವೆಸಗುತ್ತಾ ದುಷ್ಕೃತ್ಯಗಳಿಂದ ದೂರವಿರು ತ್ತಾರೋ ಅವರಿಗೆ ಸ್ವರ್ಗ ಲಭಿಸುತ್ತದೆಂದು ಕುರ್‌ಆನ್ ಪ್ರಬಲವಾಗಿ ಪ್ರಸ್ತಾಪಿಸಿದೆ. ಕೆಲ ಆದೇಶ ನಿಷೇಧಗಳಿದ್ದರೂ ಸ್ತ್ರೀಯ ರಿಗೆ ಆಸ್ತಿಯಲ್ಲಿ ಹಕ್ಕು, ಒಪ್ಪಿಗೆಯಿಲ್ಲದ ವಿವಾಹದಿಂದ ಮುಕ್ತಿ ಹೊಂದುವ ಅವ ಕಾಶವನ್ನು ಕುರ್‌ಆನ್ ಸ್ತ್ರೀಯರಿಗೆ ನೀಡಿದೆ. ವಿಧವೆಯವರು, ಅನಾಥರೊಂದಿಗೆ ದ್ರೋಹವೆಸಗಬಾರದೆಂದೂ ಸ್ತ್ರೀಯ ರೊಂದಿಗೆ ನೀತಿ ಪಾಲಿಸಬೇಕೆಂದೂ ಕುರ್‌ಆನ್ ಕಠಿಣವಾಗಿ ಎಚ್ಚರಿಸಿದೆ. ಆದರೂ ಹಿಂದಿನ ಕಾಲದಲ್ಲಿ ಸ್ತ್ರೀಯರೂ ಇಸ್ಲಾಮಿನಲ್ಲಿ ಎರಡನೇ ಪ್ರಜೆಗಳಾದರು. ಪ್ರವಾದಿ ವಚನ, ಪ್ರವಾದಿ ಚರ್ಯೆಯನ್ನು ತಳ್ಳಿ ಹಾಕಿ ಪುರೋಹಿತ ವರ್ಗ ಸ್ತ್ರೀಯರನ್ನು ನಿರ್ಬಂಧಿಸಿದೆ.

ಮನು ಸ್ಮೃತಿಯಲ್ಲಿ ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂಬ ತರ್ಕವು ಎಲ್ಲರಿಗೂ ತಿಳಿದೇ ಇದೆ. ಸ್ತ್ರೀಯೆಂದರೆ ಕ್ಷಮಯಾ ಧರಿತ್ರಿ, ಕ್ಷಮೆ, ಸಹನೆಯ ಪ್ರತೀಕವೆಂಬಂತೆ ಇತಿಹಾಸ ಗ್ರಂಥಗಳಾದ ರಾಮಾಯಣ,

ಎಂದವರಾರು?

ಬೇರು ಬಿಡುವುದು
ಗಿಡ ಮರ ಬಳ್ಳಿ
ಎಂದವರಾರು?
ಮೊದಲನೇ ದೀವಳಿಗೆಗೆಂದು
ಬಂದಿದ್ದ ನನ್ನಳಿಯ
ಬೇರು ಬಿಟ್ಟಿಲ್ಲವೇ
ನನ್ನ ಮನೆಯಲ್ಲಿ
ಮಕ್ಕಳಾದ ಮೇಲೂ ಆರು.

ಎಚ್.ಎಸ್. ಸೋಮಶೇಖರ್
ಶಿವಮೊಗ್ಗ

ಮಹಾಭಾರತದಲ್ಲಿ ಚಿತ್ರೀಕರಿಸಲಾಗಿದೆ. ಸೀತೆಗೆ ಗೊತ್ತಿಲ್ಲದೆ ಒಪ್ಪಿಗೆಯಿಲ್ಲದೆ ಕುತಂತ್ರದಿಂದ ರಾವಣನು ಅಪಹರಿಸಿ ದನು. ಆದರೂ ಸೀತೆ ರಾಜ್ಯ ತ್ಯಜಿಸ ಬೇಕಾಯಿತು. ಸೀತೆಯ ಪರವಾಗಿ ವಾದಿಸಲು ಸಾಂತ್ವನಗೊಳಿಸಲು ಯಾರೂ ಪ್ರಯತ್ನಿಸಿದುದು ಕಾಣುವುದಿಲ್ಲ. ಸ್ವ ಪ್ರತಿಷ್ಠೆಗೆ ಕಳಂಕ ಉಂಟಾಗದಿರಲು ರಾಮನು ಕೂಡಾ ಸೀತೆಯನ್ನು ಉಪೇಕ್ಷಿಸಿದನು. ಸ್ವಂತ ಕೀರ್ತಿಗಲ್ಲ. ದೇಶದ ಪ್ರತಿಷ್ಠೆಗೆ ಭಂಗ ಉಂಟಾಗದಿರಲಿ ಕ್ಕೆಂದು ಸೀತೆಯನ್ನು ರಾಮ ತ್ಯಜಿಸಿದ್ದ ನೆಂಬ ಸಮರ್ಥನೆಯನ್ನೂ ರಾಮಾಯಣ ದಲ್ಲಿ ಕಾಣಬಹುದು. ಸ್ವಂತ ನಿರಪ ರಾಧಿತ್ವವನ್ನು ಸಾಬೀತು ಪಡಿಸಲಾಗದ ಸೀತೆಯನ್ನು ಭೂಮಿ ತನ್ನ ಮಡಿಲಿಗೆ ಸೇರಿಸಿಕೊಂಡಿತು.

ಐದು ಪುರುಷರಿಂದ ನಿರಂತರ ಅಪ ಮಾನವನ್ನು ಎದುರಿಸಬೇಕಾಗಿ ಬಂದವಳೇ ಮಹಾಭಾರತದ ಅಂಬ. ಅವಳೊಂದಿಗೆ ಪ್ರಥಮವಾಗಿ ಅನ್ಯಾಯವೆಸಗಿದ್ದು ತಂದೆ ಯಾದ ಕಾಶಿ ರಾಜ. ಸ್ವಯಂವರದಲ್ಲಿ ಶೌರ್ಯ ತೋರಿಸುವವನಿಗೆ ತನ್ನ ಮಕ್ಕಳಾದ ಅಂಬ, ಅಂಬಿಕ, ಅಂಬಾಲಿಕ ರನ್ನು ವಿವಾಹ ಮಾಡುತ್ತೇನೆಂದು ಕಾಶಿ ರಾಜ ನಿಶ್ಚಿಯಿಸಿದ್ದನು. ಮಕ್ಕಳ ಇಚ್ಛೆ ಯನ್ನು ಅರಿಯಲು ಕೂಡಾ ರಾಜ ಉತ್ಸುಕನಾಗಲಿಲ್ಲ. ಸ್ವಯಂವರಕ್ಕೆ ಬಂದ ಇತರೆಲ್ಲ ರಾಜರನ್ನು ಸೋಲಿಸಿ ಭೀಷ್ಮ ತನ್ನನ್ನು ವರಿಸಿದ್ದು ಅವನ ತಮ್ಮ ವಿಚಿತ್ರ ವೀರನಿಗೆ ಪತ್ನಿಯಾಗಿಸಲೆಂದು ತಿಳಿ ದಾಗ ಅಂಬ ಆಘಾತಗೊಂಡಳು. ಸ್ವಾಲನನ್ನು ತಾನು ಮನಸ್ಸಿನಲ್ಲಿ ಮೊದಲೇ ಮದುವೆಯಾಗಿರುವುದಾಗಿ ಅಂಬ ಹೇಳಿದಾಗ ಭೀಷ್ಮ ಅವಳನ್ನು ಅವನ ಬಳಿಗೆ ಕಳಿಸಿಕೊಟ್ಟ. ಭೀಷ್ಮ ಕೈ ಹಿಡಿದ ಹೆಣ್ಣೆಂದು ಜರೆದು ಪ್ರಿಯತಮನು ಕೈ ಬಿಟ್ಟಾಗ ಅವಮಾನಿತಳಾದ ಅಂಬ ಭೀಷ್ಮನನ್ನು ವಧಿಸಲು ಪರಶುರಾಮನ ಸಹಾಯ ಯಾಚಿಸಿದಳು. ಯಾರನ್ನು ಸೋಲಿಸಬೇಕೆಂದು ಪರಶುರಾಮನನ್ನು ವಿನಂತಿಸಿದ್ದಳೋ ಅವನೊಂದಿಗೇ ಜೀವಿಸ ಬೇಕೆಂದು ಯುದ್ಧದಲ್ಲಿ ಸೋತ ಪರಶು ರಾಮ ಹೇಳಿದಾಗ ಅಂಬ ಪ್ರತೀಕಾ ರಾಗ್ನಿಯಿಂದ ಕುದಿದಳು.

ಪುರುಷರ ತಪ್ಪಿಗೆ ಶಿಕ್ಷೆ ಅನು ಭವಿಸಬೇಕಾಗಿ ಬಂದವಳೇ ದ್ರೌಪದಿ. ಪಂಚ ಪತಿಯಂದಿರು, ಅಜ್ಜ, ಹಾಗೂ ಇತರ ಬಂಧುಗಳ ಎದುರೇ ರಾಜ ದರ್ಬಾರಿನಲ್ಲಿ ವಸ್ತ್ರಾಪಹರಣಕ್ಕೊಳ ಗಾಗಬೇಕಾಯಿತು. ಕುಟುಂಬದ ಯಾವೊಬ್ಬ ಪುರುಷನೂ ಅದರ ಎದುರು ಕಿರು ಬೆರಳನ್ನೂ ಎತ್ತಲಿಲ್ಲ. ದ್ರೌಪದಿಯ ಭಕ್ತಿಯೇ ಅವಳ ಮಾನ ಕಾಪಾಡಿದ್ದು. ಇಂತಹ ಅನೇಕ ಮಾನಸಿಕ ಹಿಂಸೆಯನ್ನು ಅನುಭವಿಸಿದ್ದ ಸ್ತ್ರೀ ಕಥಾ ಪಾತ್ರಗಳನ್ನು ಭಾರತೀಯ ಪುರಾಣ ಗ್ರಂಥಗಳಲ್ಲಿ ಕಾಣಬಹುದಾಗಿದೆ.

ಸ್ವಯಂವರದ ಮೂಲಕ ಪತಿ ಯನ್ನು ಆರಿಸುವ ಸ್ವಾತಂತ್ರ್ಯವಿದೆ. ಸ್ತ್ರೀಯರು ಕೂಡಾ ಪತಿ ನಿಧನವಾದಾಗ ಸಹಗಮನ ಮಾಡುವ ಪದ್ಧತಿ ಉಂಟಾ ಗಲು ಕಾರಣವೇನೆಂದು ಚಿಂತಿಸಬೇಕಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ವಿಧವೆಯರು

ಮಂಗನಿಂದ ಮಾನವ ವಿಕಸನಗೊಂಡ ಅನ್ನುವುದಾದರೆ ಇನ್ನೂ ಮಂಗಗಳೇಕಿವೆ?

ಇಂದಿಗೂ ಅಪಶಕುನಗಳಾಗಿದ್ದಾರೆ. ಶುಭ ಸಮಾರಂಭಗಳಿಂದ ಅವರನ್ನು ದೂರ ವಿಡುವ ಪದ್ಧತಿ ನಮ್ಮೆಡೆಯಲ್ಲಿದೆ.

ಹಿಂದಿನ ಕಾಲದಲ್ಲಿ ಗಂಡಸರು ಸ್ತ್ರೀ ಧನ ನೀಡಿ ಮಹಿಳೆಯರನ್ನು ವಿವಾಹ ವಾಗುತ್ತಿದ್ದರು. ವರದಕ್ಷಿಣೆ ನೀಡಿದರೆ ಮಾತ್ರ ವರ ಸಿಗುವಂತಹ ಅವಸ್ಥೆಯು ಹೆಣ್ಣನ್ನು ಇಂದಿನ ಕಾಲದಲ್ಲಿ ಹೊರೆಯಾಗಿ ಸಿದೆ. ಹೆಣ್ಣು ಮಗುವಿನ ಜನನವು ಹೆತ್ತವರನ್ನು ಅಸ್ವಸ್ಥಗೊಳಿಸಲು ಇದುವೇ ಪ್ರಮುಖ ಕಾರಣ. ಹೆಣ್ಣು ಮಗಳನ್ನು ಮದುವೆ ಮಾಡಿ ಹೊಸ್ತಿಲು ದಾಟಿಸಬೇಕಾ ದರೆ ಪಡಬೇಕಾದ ಕಷ್ಟಗಳನ್ನು ಅಗಾಧ ಪ್ರಮಾಣ ಹಣ, ಹೊನ್ನು ಸಂಪಾದಿಸ ಬೇಕಾದಂತಹ ಭೀತಿಯೇ ತಂದೆಯಂದಿ ರನ್ನು ಅಧೀರಗೊಳಿಸುತ್ತದೆ. ಅದಕ್ಕಾಗಿ ಭ್ರೂಣದಲ್ಲಿಯೇ ಹೆಣ್ಣನ್ನು ಹಿಂಸಿಸಲು, ಕೊಲ್ಲಲು ಅವರು ಮುಂದಾಗುತ್ತಾರೆ. ಮನುಷ್ಯ ಸಂಕುಲದ ಅಸ್ತಿತ್ವವೇ ಹೆಣ್ಣನ್ನು ಅವಲಂಬಿಸಿದೆ. ಅದನ್ನು ಮರೆತು ಹೆಣ್ಣಿನ ಕೊಲೆಯಂತಹ ನೀಚ ಕೃತ್ಯಗಳು ನಿರಂತರ ವಾಗಿ ನಡೆಯುತ್ತಿದೆ. ವರದಕ್ಷಿಣೆ ಸಾವು, ಮರ್ಯಾದಾ ಹತ್ಯೆಗಳು ಅವ್ಯಾಹತ ವಾಗಿ ಸಾಗುತ್ತಿದೆ.

ಇಂದು ಸ್ತ್ರೀಯು ಭೋಗದ ವಸ್ತುವಾಗಿ ಪರಿಣಮಿಸಿದ್ದಾಳೆ. ಅವಳಿಗೆ ಈ ಸ್ಥಿತಿ ಬರಲು ಪತ್ರಿಕೆ, ದೃಶ್ಯ ಮಾಧ್ಯಮ, ಜಾಹೀರಾತು, ಸಿನೆಮಾಗಳ ಪಾತ್ರ ಬಹು ಮುಖ್ಯವಾಗಿದೆ. ಸ್ತ್ರೀಯರ ದೇಹವು ಪ್ರದರ್ಶನ ಸರಕಾದಾಗ ಅವರ ಮೇಲೆ ನಡೆಯುವ ಅತ್ಯಾಚಾರಗಳು ಹೆಚ್ಚಲು ಕಾರಣವಾಯಿತು. ಸ್ವಂತ ತಂದೆಯನ್ನು ಕೂಡಾ ನಂಬದಂತಹ ಪರಿಸ್ಥಿತಿ ಇತ್ತೀಚೆ ಗಿನ ಕೆಲವು ಘಟನೆಗಳಿಂದ ವ್ಯಕ್ತವಾಗುತ್ತದೆ.

ಸ್ವಂತ ಮನೆಗಳಲ್ಲಿಯೇ ರಕ್ಷಣೆ ಇಲ್ಲ ವೆಂಬ ಸ್ಥಿತಿಯು ಹೆಣ್ಣನ್ನು ಮಾತ್ರವಲ್ಲ ಪ್ರತೀ ಸಭ್ಯ ಪುರುಷರನ್ನೂ ಚಿಂತೆಗೀಡು ಮಾಡಿದೆ. ಸ್ತ್ರೀಯರ ಸ್ಥಿತಿ ಶೋಚನೀಯ ವಾದರೂ ಅವರ ಮೇಲೆ ನಿರಂತರ ದೌರ್ಜನ್ಯ, ಹಿಂಸೆ, ಅತ್ಯಾಚಾರಗಳು ನಡೆದರೂ ಆರೋಪಿಗಳು ಕಾನೂನಿನ ಸೂಕ್ಷ್ಮ ಎಳೆಗಳ ಮೂಲಕ ಪಾರಾಗು ವಂತಹ ಪರಿಸ್ಥಿತಿಯು ನಮ್ಮನ್ನು ಭೀತಿಯ ಶಿಖರಕ್ಕೇರಿಸುತ್ತದೆ. ಮಹಿಳೆಗೆ ಶರೀರ ಮಾತ್ರವಲ್ಲ, ಒಳ್ಳೆಯ ಮನಸ್ಸೂ ಇದೆ ಎಂದೂ ಸ್ತ್ರೀ ಮಾನವ ಸಂಕುಲದ ರಕ್ಷಕಿಯೆಂದೂ ಹೊಸ ತಲೆಮಾರಿಗೆ ಮನವರಿಕೆ ಮಾಡದಿದ್ದರೆ ಭ್ರೂಣಹತ್ಯೆ, ಶಿಶುಹತ್ಯೆ, ವರದಕ್ಷಿಣೆ ಸಾವು, ಮರ್ಯಾದಾ ಹತ್ಯೆಗಳಂತಹ ಹೆಣ್ಣಿನ ಕೊಲೆಗಳು ನಿರಾ ತಂಕವಾಗಿ ನಡೆಯುತ್ತಲೇ ಇರಬಹುದು.

ದಿನಂಪ್ರತಿ ಅವ್ಯಾಹತವಾಗಿ ನಡೆ ಯುತ್ತಿರುವ ಇಂತಹ ಕೃತ್ಯಗಳನ್ನು ಎಲ್ಲರೂ ಒಗ್ಗಟ್ಟಾಗಿ ಎದುರಿಸಬೇಕಾದಂತಹ ಕಾಲ ಸಂಜಾತವಾಗಿದೆ. ಗಂಡಾಗಲಿ, ಹೆಣ್ಣಾಗಲಿ ಆ ಮಗುವನ್ನು ದೇವನ ಅನುಗ್ರಹವೆಂದು ಬೆಳೆಸುವುದು ಸತ್ಕರ್ಮ ವೆಂದು ಭಾವಿಸುವ ಧಾರ್ಮಿಕ ಬೋಧನೆಯ ಪ್ರಚಾರವು ಇಂದು ಅನಿವಾರ್ಯವಾಗಿದೆ. ■

A.S.3: (ಎ.ಎಸ್.ತಿ.) ಈ ಕಷಾಯವು ದೀರ್ಘ ಕಾಲದ ಕೆಮ್ಮು, ಕಫ ಕಟ್ಟುವಿಕೆ, ಸೀನು, ಉಸಿರಾಟದ ತೊಂದರೆ, ದೀರ್ಘಕಾಲದ ಅಸ್ತಮಾ, ಇತರ ಔಷಧಿಗಳಿಂದ ಆಗಿರುವ ತೊಂದರೆಯನ್ನು ಶಮನಗೊಳಿಸುತ್ತದೆ ಹಾಗೂ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ ರಕ್ತವನ್ನು ಶುದ್ಧಿಗೊಳಿಸುತ್ತದೆ.
Shwasa Choorna: ಶ್ವಾಸ ಚೂರ್ಣ: ಇದು ಎಲ್ಲಾ ರೀತಿಯ ಕೆಮ್ಮಿಗೆ ಅತ್ಯುತ್ತಮವಾಗಿದೆ. ಹಳೆಯ ಜ್ವರ, ಶಾರೀರಿಕವಾಗಿ ದುರ್ಬಲತೆ, ಶೀತ, ಅಲರ್ಜಿ ಅಸ್ತಮಾ, ಶ್ವಾಸ(ದಮ್ಮು) ಉಸಿರಾಟದ ತೊಂದರೆ, ಅರುಚಿ, ಕೈಕಾಲಿನ ಉರಿಯಲ್ಲಿ ಉತ್ತಮ ಉಪಯೋಗಕಾರಿಯಾಗಿದೆ. ಅಲ್ಲದೆ ಇದರಿಂದ ಧಾತುಗಳ ಕ್ಷೀಣತೆಯನ್ನು ಹತೋಟಿಗೆ ತರಬಹುದಾಗಿದೆ. ಟಿ.ಬಿ.ಗೆ ಆಧುನಿಕ ಔಷಧಿಯೊಂದಿಗೆ ಕೂಡಾ ಈ ಔಷಧವನ್ನು ಕೊಡುತ್ತಿರುವುದರಿಂದ ರೋಗ ತ್ವರಿತಗುಣಮುಖವಾಗುತ್ತದೆ.

ಅಮೃತ ಔಷಧಾಲಯ

ಗಣೇಶ್ ಮಹಲ್ ಬಿಲ್ಡಿಂಗ್, ಸುಚಿತ್ರಾ ಟಾಕೀಸ್ ಹತ್ತಿರ, ಕೆ.ಎಸ್.ರಾವ್ ರಸ್ತೆ,
ಮಂಗಳೂರು – 575001, ಫೋನ್: 0824–2442207, ಮೊಬೈಲ್: 9448122126

ಸಮಯ: ಬೆಳಿಗ್ಗೆ 7:30ರಿಂದ ರಾತ್ರಿ 8:30ರ ವರೆಗೆ
ಆದಿತ್ಯವಾರ: ಬೆಳಿಗ್ಗೆ 7:30ರಿಂದ ಮಧ್ಯಾಹ್ನ 1:00ರ ತನಕ

ವೈದ್ಯರನ್ನು ಭೇಟಿ ಮಾಡುವ ಸಮಯ:
ಬೆಳಿಗ್ಗೆ 7:30ರಿಂದ ಮಧ್ಯಾಹ್ನ 3:00ರ ತನಕ

ಅಮೃತ ಕ್ಲಿನಿಕ್

ಸಮಾಧಾನ ಕಾಂಪ್ಲೆಕ್ಸ್, ತೊಕ್ಕೊಟ್ಟು – 17, ಫೋನ್: 0824–2461858
ಸಮಯ: ಬೆಳಿಗ್ಗೆ 9:30ರಿಂದ ರಾತ್ರಿ 7:30ರ ತನಕ
ವೈದ್ಯರನ್ನು ಭೇಟಿ ಮಾಡುವ ಸಮಯ: ಸಂಜೆ 4ರಿಂದ ರಾತ್ರಿ 7:30 ರ ತನಕ
ಆದಿತ್ಯವಾರ ರಜಾದಿನ

ಎ.ಜಿ.ಆಯುರ್ ಮೆಡಿಕಲ್

ಕದ್ರಿ ದೇವಸ್ಥಾನ ರಸ್ತೆ, ಕದ್ರಿ, ಮಂಗಳೂರು –3 ಫೋನ್: 0824–2213394
ಸಮಯ: ಬೆಳಿಗ್ಗೆ 9:00ರಿಂದ ರಾತ್ರಿ 10:00ರ ತನಕ
ವೈದ್ಯರನ್ನು ಭೇಟಿ ಮಾಡುವ ಸಮಯ: ರಾತ್ರಿ 8:00ರಿಂದ ರಾತ್ರಿ 10:00 ರ ತನಕ
ಆದಿತ್ಯವಾರ ರಜಾದಿನ

ಡಾ.ಗಣೇಶ್ ಕುಮಾರ್ (ಆಯುರ್ವೇದಿಕ್)

Mob: 9590614999, 9448122126 Email: agayur@gmail.com

ನಮ್ಮಲ್ಲಿ ಕೋವಿಕ್ಕಲ್‌ನ ಔಷಧಿಗಳು ದೊರೆಯುತ್ತದೆ

ಎಂ. ಅಶೀರುದ್ದೀನ್ ಮಂಜನಾಡಿ

ಮಿಸ್‌ಕಾಲ್

ಇತ್ತೀಚೆಗೆ ನಾನು ಒಂದು ಮಲೆಯಾಳ ಕಿರುಚಿತ್ರ ನೋಡಿದೆ. ಮಿಸ್‌ಕಾಲ್ ಎಂಬ ಹೆಸರಿನ ಈ ಕಿರುಚಿತ್ರವು ಬಹಳ ಅರ್ಥ ವತ್ತಾದದ್ದು. ಕೇವಲ ಹತ್ತು ನಿಮಿಷದೊಳಗೆ ಸಂಚರಿಸುವ ಈ ಕಿರುಚಿತ್ರ ಮೊಬೈಲಿನಿಂದಾಗುವ ದುರ್ಬಳಕೆ, ವಿವಾಹಿತರ ಅನೈತಿಕ ಸಂಬಂಧ, ವಿದೇಶದಲ್ಲಿರುವ ಗಂಡನ ಪ್ರೀತಿ, ಸಂಬಂಧಿಯರಿಂದಾಗಿ ಒಂಟಿಯಾಗುವ ಮಗು ಇತ್ಯಾದಿ ವಿಷಯಗಳಿಗೆ ಈ ಚಿತ್ರವು ಬೆಳಕು ಚೆಲ್ಲುತ್ತದೆ.

"ಒಂದು ರಾತ್ರಿ ನಾಯಕಿಗೆ ಒಂದು ಕಾಲ್ ಬರುತ್ತದೆ. ಆ ಕಡೆಯಿಂದ ಇದು ಅಜಯ್ ಅಲ್ಲವಾ? ಎಂಬ ಪ್ರಶ್ನೆ." ನಾಯಕಿ ರಾಂಗ್‌ನಂಬರೆಂದು ಫೋನ್ ಕಟ್ ಮಾಡುತ್ತಾಳೆ. ಮತ್ತೊಮ್ಮೆ ಅದೇ ನಂಬರಿನಿಂದ ಫೋನ್ ರಿಂಗುಣಿಸುತ್ತದೆ. ನಾಯಕಿ ತುಸು ಕೋಪದಿಂದ ಗದರಿಸುತ್ತಾಳೆ. ಆದರೆ ಆ ಕಡೆಯಿಂದ ಪ್ರತಿಧ್ವನಿಸುವ ಮಾದಕ ಮಾತಿಗೆ ಬಲಿಯಾಗುತ್ತಾಳೆ. ಹಾಗೆ ಅವರ ಮಾತುಕತೆ ಸ್ವಲ್ಪ ಮಟ್ಟಿಗೆ ಸಾಗುತ್ತದೆ. ಕೊನೆಗೆ ಆ ಕಡೆಯಿಂದ ಹೇಳುತ್ತದೆ. "ನೀನು ಮಿಸ್‌ಕಾಲ್ ಮಾಡಿದರೆ ನಾನು ಕಾಲ್ ಮಾಡುವೆನು. ಇಲ್ಲದಿದ್ದರೆ ಎಂದಿಗೂ ನಾನು ಮಾಡಲಾರೆನು" ಫೋನ್ ಕಟ್ಟಾಗುತ್ತದೆ.

ಮರುದಿನ ಈಕೆ ಫೋನ್ ಮಾಡುತ್ತಾಳೆ. ಆತ ಹೇಳುತ್ತಾನೆ, ರಾತ್ರಿ ಕಾಲ್ ಮಾಡುವೆನೆಂದು. ರಾತ್ರಿ ಅವರ ಮಾತುಕತೆಗಳು ಮಿತಿಮೀರಿ ದೀರ್ಘ ಸಮಯದ ವರೆಗೆ ಸಂಚರಿಸುತ್ತದೆ. ಈ ಸಂಬಂಧವು ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಗುತ್ತದೆ. ಆಕೆ ಹೇಳುತ್ತಾಳೆ, "ನಿನ್ನ ಮಾತು ಕೇಳದೆ ನನಗೆ ಒಂದು ದಿನವು ಕಳೆದು ಹೋಗಲು ಸಾಧ್ಯವಿಲ್ಲ. ನಿನ್ನಿಂದ ಅಗಲಲು ನನಗೆ ಮನಸ್ಸಿಲ್ಲ. ಆದರೆ ನನಗೆ ಒಂದು ಮಗುವಿದೆ. ಗಂಡನಿದ್ದಾನೆ." ಆತ "ನೀನೇನೂ ಚಿಂತಿಸಬೇಡ. ನಮ್ಮ ಪ್ರೀತಿಗೆ ಅದಾವುದು ಅಡ್ಡವಾಗದು" ಇವರ ದೀರ್ಘ ಸಮಯದ ಸಂಬಂಧವನ್ನು ಕಂಡೂ ಕಾಣದಂತೆ ನಟಿಸಿ ಮಲಗಿದ್ದ ಆಕೆಯ ಮಗುವು ಎಚ್ಚೆತ್ತು ಕೇಳುತ್ತದೆ. "ಅಮ್ಮ ಯಾರೊಂದಿಗೆ ಮಾತ ನಾಡುವುದು. "ನಿನ್ನ ಪಪ್ಪಾನೊಂದಿಗೆ" ಎಂದು ಆಕೆ ಸುಳ್ಳು ಹೇಳುತ್ತಾಳೆ. ಮಗು ಮರು ಪ್ರಶ್ನಿಸುತ್ತದೆ. "ಪಪ್ಪನೊಂದಿಗಾದರೆ ನನಗೆ ಒಂದು ಮಗುವಿದೆ ಎಂದು ಯಾಕೆ ಹೇಳುತ್ತಿ?" ಮಗುವಿನ ಈ ಪ್ರಶ್ನೆಯು ಆಕೆಯ ಹೃದಯವನ್ನು ಸೀಳುತ್ತದೆ. ಆ ಪ್ರಶ್ನೆ ಫೋನ್‌ನಿಂದ ಪ್ರತಿಧ್ವನಿಸಿ ಆತನ ಹೃದಯವನ್ನೂ ಸೀಳುತ್ತದೆ. ಮಗುವಿನ ನೋವಿನ ಪ್ರಶ್ನೆಯಿಂದಾಗಿ ಅನೈತಿಕ ಸಂಬಂಧಿಗಳಿಗೆ ಪರದೆ ಬೀಳುತ್ತದೆ. ಕಿರುಚಿತ್ರಕ್ಕೂ ಪರದೆ ಬೀಳುತ್ತದೆ.

ಹತ್ತು ನಿಮಿಷದ ಈ ಕಿರುಚಿತ್ರವು ವಿಶಾಲವಾದ ಚಿಂತನೆಗೆ ಎಡೆ ಮಾಡಿಕೊಡುತ್ತದೆ. ಗಂಡ ವಿದೇಶದಲ್ಲಿ ತಮಗಾಗಿ ಕಷ್ಟ ಪಡುತ್ತಿರಬೇಕಾದರೆ ಹೆಂಡತಿ ಮೋಜಿಗಾಗಿ ಸಮಯ

ಕಳೆಯುವಿಕೆಗಾಗಿ ಇನ್ನೊಬ್ಬನನ್ನು ಆಶ್ರಯಿಸುವುದು. ರಾಂಗ್ ನಂಬರ್‌ಗಳಿಗೆ ವಿವಾಹಿತ ಹೆಣ್ಣು ಬಲಿಯಾಗುವುದು, ಈ ಸಂಬಂಧಗಳ ನಡುವೆ ಮಕ್ಕಳು ಒಂಟಿಯಾಗುವುದು. ಹೀಗೆ ನಂತರ ವಿಚ್ಛೇದನ. ಇದೆಲ್ಲವು ಸಮಾಜದಲ್ಲಿ ನಡೆಯುವ ಕ್ರೂರ ಕೃತ್ಯಗಳು. ಕೆಲವು ವಿದೇಶಿ ಪತಿಯರ ಪತ್ನಿಯರು ಈ ರೀತಿಯಾದರೆ ಇನ್ನು ಕೆಲವರು ಸಂಶಯದಿಂದ ವಿಚ್ಛೇದನವನ್ನು ನೀಡುತ್ತಾರೆ. ಇಂತಹ ಒಂದೊಂದು ಪ್ರಕರಣ ನಡೆಸಲಿಕ್ಕಾಗಿಯೇ ನಾಲಗೆ ಹೊರ ಚಾಚಿ ಬೀದಿಯಲ್ಲಿ ಗಸ್ತು ತಿರುಗುತ್ತಿರುವ ಬೀದಿ ನಾಯಿಗಳು ಬೇಕಾದಷ್ಟಿದೆ. ಇಂತಹ ಕೆಟ್ಟ ಕಾರ್ಯಗಳು ಸಮೂಹದಿಂದ ಸಂಪೂರ್ಣ ನಾಶವಾಗಬೇಕು. ಇದಕ್ಕೆ ಯುವ ಸಮೂಹ ರಂಗ ಪ್ರವೇಶಿಸಬೇಕು. ಹೆಣ್ಣು ಮಕ್ಕಳು ಇಂತಹ ರಾಂಗ್ ನಂಬರ್‌ಗಳಿಗೆ ಕಟುವಾಗಿ ಮರುತ್ತರಿಸಲು ತಯಾರಾಗಬೇಕು. ವಾಸ್ತವದಲ್ಲಿ ಹೆಣ್ಣು ಸಮಾಜದಲ್ಲಿ ತನ್ನ ಗುರುತನ್ನು ಉಳಿಸಿಕೊಳ್ಳುವವಳಾಗಬೇಕು. ಹಾಗೆಯೇ ಸಮಾಜದಲ್ಲಿ ಇಂತಹ ಸಿನಿಮಾಗಳು ಕಿರುಚಿತ್ರಗಳು ಧಾರಾಳವಾಗಿ ಬೆಳೆದು ಬರಲಿ. ಹೊಸ ಬದಲಾವಣೆಗೆ ನಾಂದಿಯಾಗಲಿ.

(ಯೂ ಟ್ಯೂಬ್‌ನಲ್ಲಿ ಈ ಚಿತ್ರವು ನೋಡಲು ಸಿಗುವುದು)

ಅಡ್ಡ ಹೆಸರಿನ ಉದ್ದ ಪರಿಣಾಮ

(20ನೇ ಪುಟದಿಂದ)

ಅವರ ತಾಯ್ನೆಲಕ್ಕೆ ಹೋದಾಗ, ಓರ್ವ ಪ್ರಾಯದವರು ಲಗ್ನ ಪತ್ರಿಕೆ ಓದಿ ಕೇಳಿ ಬಿಟ್ಟರು. "ಓ ನೀ ಸೀಂತ್ರಿಯ ಮಗ ಅಲ್ಲವಾ?" ಅಂದಾಗ ತೀವ್ರ ಮುಜುಗರ ವಾಯಿತು. "ಯಾಕಪ್ಪ ಅವರು ನಿನ್ನ 'ಸೀಂತ್ರಿ' ಅನ್ನುತ್ತಾರೆ?" ಅಂದದ್ದಕ್ಕೆ "ಅದು ನೀನು ನೆನೆಸುವ 'ಸೀಂತ್ರಿ' ಅಲ್ಲ. ನಮ್ಮೂರಿನಲ್ಲಿ ಹೆಸರಾಂತ ಬಯಲು ನಾಟಕವಾಯಿತು. ಅದರ ಹೆಸರು 'Seen 3'. ಅಂದ್ರೆ ಸೀನ್ ತ್ರೀ. ಅದರ ನಿರ್ದೇಶನ ನನ್ನದಾಗಿತ್ತು. ಶ್ರೀನಿವಾಸ ಅಂದ್ರೆ ಊರಲ್ಲಿ ಯಾರಿಗೂ ಗೊತ್ತಾಗೋಲ್ಲ. ಸೀಂತ್ರಿ ಸೀನೂ ಅಂದ್ರೆನೇ ನನ್ನ ಗುರುತು ಹಿಡಿಯೋದು..." ಅಳ ಬೇಕೋ, ನಗಬೇಕೋ ಒಂದೂ ಗೊತ್ತಾಗಲಿಲ್ಲ.

ಕರಾವಳಿ ಪ್ರದೇಶ ಹೆಚ್ಚಾಗಿ ಮೀನು ಗಾರಿಕೆ ಅವಲಂಬಿತವಾಗಿದ್ದ ಕಾರಣ ಹೆಚ್ಚಿನವರ ಹೆಸರಿನಲ್ಲಿ ಬಂಗುಡೆ, ಬೂತಾಯಿ, ತೇಡೆ, ಮದ್‌ಮಾಲ್, ಮಾಂಜಿ ಅಂತಲೂ ಅಡ್ಡ ಹೆಸರು ಅವಿತುಕೊಂಡಿದೆ.

ತರಕಾರಿ ಮಾರುಕಟ್ಟೆಯಲ್ಲಿ ಕೂಲಿ ಯಿಂದ, ಚಾಲಕ, ಮಾಲಕ ಯಾರನ್ನು ಹೆಸರೆತ್ತಿ ಕೂಗುವುದು ತೀರಾ ಅಪರೂಪ. ಬಟಾಟೆ ಅಬ್ಬಾಸ್ ಅಂತಲೋ, ಬೆಂಡೆ ಉಮರ್ ಅಂತಲೋ, ಸ್ವಲ್ಪ ದಪ್ಪಗಿದ್ದರೆ ಆನೆಯೆಂದೋ, ಉದ್ದಕ್ಕಿದ್ದರೆ ಜಿರಾಫೆ ಯೆಂದೋ, ಗಿಡ್ಡಗಿದ್ದರೆ ಶಾರ್ಟ್‌ವೀಲ್ ಎಂದೋ- ಎಲ್ಲವೂ ವಿಚಿತ್ರವಾದ ಅಡ್ಡ ಹೆಸರುಗಳು.

ಮದುವೆಯಾಗಿ ಪತ್ನಿ ಸಮೇತ ಹಣ್ಣು ಹಂಪಲಿಗಾಗಿ ಮಾರುಕಟ್ಟೆಗೆ ಹೋಗಿದ್ದ ಸಂದರ್ಭ ಅದೇನೋ ಹಳೆಯ ಕ್ಲಾಸ್‌ಮೇಟ್ ಓರ್ವ ಹಣ್ಣು ಹಂಪಲು ವ್ಯಾಪಾರಸ್ಥ ನೆಂದದ್ದು ನೆನಪಾಯಿತು. ಸರಿ ಕೇಳಿ ಬಿಡುವ ಎಂದು ಕ್ಲಿಫರ್ಡ್‌ನ ಹಣ್ಣಿನಂಗಡಿ ಎಲ್ಲಿ? ಎಂದೆ. ಯಾರಿಗೂ ಪರಿಚಯದ ಹೆಸ್ರು ಅದಲ್ಲವೆಂದು ಅರಿತಾಗ, ನಾನು ಅವರು ಸಪೂರವಾಗಿ ಆರುವರೆ ಅಡಿ ಉದ್ದವಿದ್ದಾರೆ ಎಂದಾಗ ಲಾಂಗ್‌ಚೇಸ್ ಕ್ಲಿಪ್ಸಿಯಾ ಅಂದಾಗ ನನ್ನ ಪತ್ನಿ ನಕ್ಕು ನಕ್ಕು ಕುಸಿಯೋದೊಂದು ಬಾಕಿ. ಆತನಿನ್ನು ಕೊನೆಯುಸಿರು ತೀರಿದ ಬಳಿಕವೂ ಲಾಂಗ್ ಚೇಸ್ ಆಗಿಯೇ ಜನಮನದಲ್ಲಿ ಉಳಿಯುತ್ತಾನೆ.

ಕೇರಳಕ್ಕೆ ವರ್ಗಾವಣೆಯಾಯಿತು. ಸಂಸ್ಥೆಯ ಇನ್ನೊಂದು ಹೊಸ ಶಾಖೆ ಅಲ್ಲಿ ತೆರೆದಿತ್ತು. ಅದರ ಹೊಣೆಗಾರಿಕೆನೂ ನನ್ನ ಮೇಲಿತ್ತು. ಕರ್ನಾಟಕಕ್ಕಿಂತಲೂ ವಿಚಿತ್ರವಾದ ಅಡ್ಡ ಹೆಸರು ಕೇರಳ ಎಂಬ ರಾಷ್ಟ್ರದಲ್ಲಿ. ರಾಷ್ಟ್ರವೆನ್ನುವುದಕ್ಕೆ ಕಾರಣವೂ ಇದೆ! ರಾಷ್ಟ್ರ ದೊಳಗೊಂದು ರಾಷ್ಟ್ರವೆಂಬಂತೆ ಭಾಸವಾಗು ವುದು ಕೇರಳದಲ್ಲಿ ಮಾತ್ರ. ಪ್ರಸಂಗ ಓದಿ.

ನನಗೊಂದು ಮನೆ ಅಗತ್ಯವಿತ್ತು. ಬ್ರೋಕರ್ ಒಬ್ಬ ಯಾರದೋ ಸಂಪರ್ಕದಲ್ಲಿ ದೊರೆತ ಪುಣ್ಯಾತ್ಮ ಶಂಕರನನ್ನು ಶಂಗರ ನೆಂತಲೂ, ಶೇಖರನನ್ನು ಶೇಗರನೆಂತಲೂ ಹೇಳಿ ಹೇಳಿ ನಾನೂ ಸಹ ಶಂಗರ, ಸೇಗರ ಎನ್ನುವುದಕ್ಕೆ ಆರಂಭಿಸಿದೆ. ಒಂದು ಸಂಜೆ ಬ್ರೋಗರ್ ಮನೆಯೊಂದು ತೋರಿಸಿದ. ಯಾರದೆಂದು ಕೇಳಿದೆ. ಅದು ಪುದಿಯಾಪ್ಪಳೆ (ಮದುಮಗ). ನನಗೇನೋ ಈ ಮದು ಮಗನ ಮನೆ ಯಾಕೆ ತೋರಿಸಿ, ಸಮಯ ಕಳೆಯುತ್ತಾನೋ ಎಂದು ಆಲೋಚಿಸುವಾಗ ಹತ್ತಿರದಲ್ಲೇ ಇದ್ದ ದಫನ ಭೂಮಿಯ ಬಳಿಯಿಂದ ಹಾದು ಹೋಗುವಾಗ ಉತ್ತರ ನೀಡಿದೆ. ಅಲ್ಲಿ ಗೋರಿಯ ಮೇಲೊಂದಿನ ಫಲಕವನ್ನು ತೋರಿಸಿ ಇದು ಪುದಿಯಾಪ್ಪಳೆ ಯದ್ದು ಅಂದ (ಜನನ- 1920, ಮರಣ- 2010). ಅಂದ್ರೆ ಬರೋಬ್ಬರಿ ಮದುಮಗನಿಗೆ 90 ವರ್ಷ. ಕುತೂಹಲಕ್ಕೆ ಬ್ರೋಗರ್ ಮುಖ ನೋಡಿದಾಗ, ಆತ ಕಿಸಕ್ಕನೆ ನಕ್ಕು, "ನಿಮಗೆ ಇದು ಪುದಿಯಾಪ್ಪಳೆ ಗೋರಿ ಅಂದಾಗ ತುಂಬಾ ನೋವಾಗಿರಬೇಕಲ್ಲ. ಅವರ ಅಡ್ಡ ಹೆಸರು. ಅವರು ಮದುವೆಯಾಗಿ ಈ ಊರಿಗೆ ಬಂದಂದಿನಿಂದ ತೀರಿ ಹೋಗುವ ವರೆಗೂ, ಬಳಿಕವೂ ಜನರು ಅವರ ಹೆಸರು ಮರೆತರೂ ಅಡ್ಡ ಹೆಸರು ಮರೆಯಲಿಲ್ಲ."

ನನಗ್ಯಾಕೋ ಅನಿಸಿತು. ಈ ಹೆಸರಿಗಿಂತ ಅಡ್ಡ ಹೆಸರೇ ಅಜರಾಮರ ಅಂತ. ಅಡ್ಡ ಕ್ಕಿದ್ದರೂ ಅದರ ಪರಿಣಾಮ ಮಾತ್ರ ಉದ್ದಕ್ಕಿದೆ. ■

ಕವಿತೆ

ಮೆಚ್ಚಲಾಗಿದೆ ಚಿತ್ತದೊತ್ತಗೆಯ
ದುಂಡು ಬರಹಗಳ
ಗೀಚಿ ಚಿತ್ತು ಮಾಡುವವರಿಗಾಗಿ...

ಚೆಂಡು ಮಲ್ಲಿಗೆಯಂಥಾ
ಮನಸ ಮೊಗ್ಗಿನ ದಂಡೆಯನು
ಹಿಚುಕಿ ಹಿಂಡುವವರಿಗಾಗಿ...

ಓರೆ ಕಾಣದ ಕೋರೆ ಎಳೆಯದ
ಉರುಟು ಪದಗಳ ಪುಂಜಗಳ
ಒರಟು ಬೆರಳಲಿ ತಿದ್ದಿ ಮುರುಟುವವರಿಗಾಗಿ...

ಹೌದು, ಮುಚ್ಚಲೇಬೇಕಿದೆ
ಚಿತ್ತದೊತ್ತಗೆಯ
ಮುಗಿದ ಅಧ್ಯಾಯದ ಪುಟಗಳ
ಮತ್ತೆ ತೆರೆಯುವ
ಕೈಗಳಿಗಾಗಿ!

■ ವಿದ್ಯಾ ವಾಮಂಜೂರು

ಬರುತಿದೆ ತಿಂಗಳು ರಮಝಾನ್

ಮುಸ್ಲಿಮ್ ಸಮುದಾಯದ ಅತೀ ಪವಿತ್ರ ತಿಂಗಳು ರಮಝಾನ್ ಆಗಿದೆ. ಮೂವತ್ತು ದಿನಗಳ ಕಾಲ ಸೂರ್ಯೋದಯಕ್ಕಿಂತ ಮೊದಲೇ ಆಹಾರ ಸೇವಿಸಿ ಸೂರ್ಯಸ್ತದವರೆಗೂ ತಮ್ಮಿಷ್ಟದ ಆಹಾರವನ್ನು ವರ್ಜಿಸಿ ಸೃಷ್ಟಿಕರ್ತನ ಆರಾಧನೆಯಲ್ಲಿ ತೊಡಗುತ್ತಾ ದಾನ ಧರ್ಮ ಮಾಡುತ್ತಾ ಅದರೊಂದಿಗೆ ತಮ್ಮ ದೈನಂದಿನ ಇತರ ಚಟುವಟಿಕೆಗಳನ್ನು ಪೂರೈಸುವುದು. ಇಂತಹ ಪವಿತ್ರ ತಿಂಗಳ ಮುಂಚೆಯೇ ಅದರ ಸ್ವಾಗತಕ್ಕಾಗಿ ಮುಸ್ಲಿಮರು ಸಜ್ಜಾಗಿರುತ್ತಾರೆ. ಮನೆ, ಅಂಗಳದ ಸ್ವಚ್ಛತಾ ಕಾರ್ಯ, ಜೊತೆಯಲ್ಲೇ ಆಂತರಿಕವಾಗಿ ತಮ್ಮನ್ನು ತಾವು ಸಂಸ್ಕರಿಸಿಕೊಳ್ಳಲು ಮುಸ್ಲಿಮ್ ಸಮುದಾಯವು ಉತ್ಸುಕವಾಗಿರುವುದು. ಅದೇ ರೀತಿ ಸಾರ್ವಜನಿಕ ಜೀವನದಲ್ಲೂ ಪ್ರಾಮಾಣಿಕತೆ, ನ್ಯಾಯ, ಸತ್ಯ ಸಂಧತೆ. ಪರಸ್ಪರ ಸಹೋದರತೆ ಬಗ್ಗೆ ಸತತ ಪರಿಶ್ರಮವೂ ಅಗತ್ಯವಾಗಿದೆ.

'ಸಮೃದ್ಧ ತಿಂಗಳು' ಎಂದು ವರ್ಣಿಸಲಾದ ಈ ತಿಂಗಳಲ್ಲಿ ಸಾವಿರ ತಿಂಗಳಿಗಿಂತಲೂ ಶ್ರೇಷ್ಠವಾದ ರಾತ್ರಿಯೊಂದಿದೆ. ಆ ರಾತ್ರಿಯಲ್ಲಿ ಸರ್ವಲೋಕ ಪಾಲಕ ಪ್ರಭುವು ಸಕಲ ಮಾನವರಿಗಾಗಿ ಸನ್ಮಾರ್ಗ ಪಡೆಯಲು 'ಪವಿತ್ರ ಕುರ್‌ಆನ'ನ್ನು ಅವತೀರ್ಣಗೊಳಿಸಿರುವನು. ಈ ಬಗ್ಗೆ ಪವಿತ್ರ ಕುರ್‌ಆನಿನಲ್ಲೂ "ನಿನ್ನ ಪ್ರಭುವಿನ ಅನುಗ್ರಹದ ರೂಪದಲ್ಲಿ" ಎಂದು ಹೇಳಿರುವನು.

ಕುಲ್ಸೂಮ್ ಅಬೂಬಕರ್

ಆದರೆ ಪ್ರಭುವಿನ ಅಸಂಖ್ಯ ಅನುಗ್ರಹಗಳು ಈ ಲೋಕದಲ್ಲಿ ನಮಗೆ ಇನ್ನೂ ಅದೆಷ್ಟೋ ಇದ್ದು ಅವುಗಳನ್ನು ಪ್ರತೀ ಕ್ಷಣವೂ ಬಾಚಿಕೊಂಡಂತೆ ಅನುಭವಿಸುತ್ತಿದ್ದೇವೆ. ಆದರೆ ಹೆಚ್ಚಿನ ಎಲ್ಲಾ ಅನುಗ್ರಹಗಳೂ ನಮ್ಮ ಶ್ವಾಸ ಇರುವ ತನಕ ಮಾತ್ರ. ಅಂತಿಮ ಶ್ವಾಸ ನಿಂತ ಕೂಡಲೇ ಲೋಕದ ಅನುಗ್ರಹಗಳೆಲ್ಲವೂ ನಿಂತು ಹೋಗುವುದು. ಆದರೆ ಈ ಲೋಕದ ಅನುಗ್ರಹಗಳನ್ನು ಅನಂತ ನೆಮ್ಮದಿಯಾಗಿ ಪರಿವರ್ತಿಸುವ ಒಂದೇ ಒಂದು ವಸ್ತು, ಅದು ಪವಿತ್ರ ಕುರ್‌ಆನ್ ಆಗಿದೆ. ಆದುದರಿಂದ ಏಕಾಗ್ರತೆಯೊಂದಿಗೆ ಅದನ್ನು ಅನುವಾದ ಸಹಿತ ಓದಿ, ಅದರಂತೆ ನಡೆಯಲು ಪ್ರಯತ್ನಿಸಿದರೆ ಖಂಡಿತವಾಗಿ ಬಹಳ ದೊಡ್ಡ, ಶಾಶ್ವತ ಅನುಗ್ರಹಗಳನ್ನು ಆ ಪ್ರಭುವಿನಿಂದ ಪಡೆಯಲು ಸಾಧ್ಯ.

ಮಾನವರ ಜೀವನದ ದೀವಿಗೆಯಾಗಿ ಕಳಿಸಿದಂತಹ ಈ ಮಹಾನ್ ಕೊಡುಗೆಯು ದೊರೆತಂತಹ ಪವಿತ್ರ ಸಮಯ ಈ ರಮಝಾನ್ ತಿಂಗಳಲ್ಲಾಗಿದೆ. ಈ ತಿಂಗಳಲ್ಲಿ ಪ್ರತಿವರ್ಷವೂ ಕುರ್‌ಆನ್ ಓದುತ್ತೇವೆ. ಪ್ರಾರ್ಥನೆಗಳಲ್ಲಿ ರಾತ್ರಿ ಜಾಗರಣೆಯನ್ನು ಮಾಡುತ್ತೇವೆ. ಆದರೆ ನಮ್ಮ ವ್ಯಕ್ತಿತ್ವದಲ್ಲಿ, ನಮ್ಮ ಚಾರಿತ್ರ್ಯದಲ್ಲಿ ಏನೂ ಸುಧಾರಣೆಯಾಗದಿದ್ದರೆ ಉಪವಾಸ ವೃತದ

ನೈಜ ಅನುಗ್ರಹಗಳನ್ನು ಹೊಂದಬೇಕಾದರೆ ಕೆಲವು ಶಿಷ್ಟಾಚಾರಗಳನ್ನು ಪಾಲಿಸುವುದು ಅಗತ್ಯವಾಗಿದೆ.

ಉಪವಾಸಿಗರಿಗೆ ತಮ್ಮ ಹೊಟ್ಟೆಯ ಉಪವಾಸದಂತೆ ಕೆಲವು ಅಂಗಾಂಗಗಳ ಉಪವಾಸವೂ ಅಗತ್ಯವಾಗಿದೆ. ಅವುಗಳಲ್ಲಿ ದೃಷ್ಟಿಯ ಉಪವಾಸ, ನಾಲಗೆಯ ಉಪ ವಾಸ; ಕಿವಿ ಮತ್ತು ಇತರ ಅಂಗಾಂಗಗಳ ಉಪವಾಸಗಳಾಗಿವೆ.

ದೃಷ್ಟಿಯ ಉಪವಾಸ: ಮನಸ್ಸು ಚಂಚಲಗೊಳ್ಳುವಂತಹ ಯಾವ ವಸ್ತು ಗಳನ್ನು ನೋಡುವುದು ಸೃಷ್ಟಿಕರ್ತನಿಗೆ ಇಷ್ಟವಿಲ್ಲವೋ ಅದರಿಂದ ದೂರ ಉಳಿಯುವುದಾಗಿದೆ.

ನಾಲಗೆಯ ಉಪವಾಸ: ಇದು ಬಹಳ ಮುಖ್ಯವೆಂದೇ ಹೇಳಬಹುದು. ನಾಲಗೆ ಯನ್ನು ನಿಯಂತ್ರಿಸುವುದು ಅಂದರೆ ಅಸಂಬದ್ಧವಾಗಿ ಮಾತನಾಡದೆ, ಸುಳ್ಳು, ಚಾಡಿ, ಪರದೂಷಣೆ ಮಾಡದೆ, ಜಗಳ, ಅಕ್ರಮ, ಅಶ್ಲೀಲದ ಮಾತುಗಳನ್ನಾಡದೆ. ಕೊಟ್ಟ ಮಾತಿಗೆ ತಪ್ಪದೇ ನಡೆಯುವು ದರೊಂದಿಗೆ ಅನಗತ್ಯ ವಿಷಯಗಳಿಗೆ ಮೌನ ಪಾಲಿಸುವುದು ಮತ್ತು ದೇವಸ್ಮರಣೆ ಮತ್ತು ಪವಿತ್ರ ಕುರ್‌ಆನಿನ ಪಾರಾಯಣವು ನಾಲಗೆಯ ಉಪವಾಸವಾಗಿದೆ.

ಅಂಗಾಂಗಗಳ ಉಪವಾಸ: ನಿಷಿದ್ಧ ವಸ್ತುಗಳನ್ನು ಸೇವಿಸದೆ ಇರುವುದು. ಹೊಟ್ಟೆ ಬಿರಿಯುವಷ್ಟು ಸೇವಿಸದೆ ಕಡಿಮೆ ಆಹಾರ ಸೇವಿಸಬೇಕು. "ಮೂಗಿನ ವರೆಗೆ ತುಂಬುವ ಹೊಟ್ಟೆಗಿಂತ ಹೆಚ್ಚು ಅಪ್ರಿಯ ವಸ್ತು ದೇವನ ಬಳಿ ಬೇರೆ ಯಾವುದೂ ಇಲ್ಲ. ಅದು ಹಲಾಲ್ (ಧರ್ಮಬದ್ಧ) ಆಹಾರವಾದರೂ ಸರಿಯೇ" ಆದ್ದರಿಂದಲೇ ಉಪವಾಸವು ಕಡಿಮೆ ಆಹಾರ ಸೇವಿಸುವ ತರಬೇತಿ ನೀಡುವುದು. ಇದೇ ರೀತಿ ಇತರ ಅಂಗಾಂಗಗಳನ್ನು ಯಾವುದೇ ಅಪರಾಧವಾಗದಂತೆ ತಡೆಯಬೇಕಾಗಿದೆ.

ಉಪವಾಸವು ಒಂದು ಚಿಕಿತ್ಸಾ ವಿಧಾನವೂ ಆಗಿರುತ್ತದೆ. ಸಕ್ಕರೆ, ಉಪ್ಪು, ಖಾರ, ಕೊಬ್ಬು ಕೆಲವೊಮ್ಮೆ ಇವುಗಳು ಆರೋಗ್ಯಕ್ಕೆ ಆತಂಕ ಕೊಡುವಂತಹ ಆಹಾರಗಳಾಗಿವೆ. ಇದರಿಂದ ಜೀರ್ಣಾಂಗ ವ್ಯೂಹಕ್ಕೆ ಹಾನಿಯುಂಟಾಗಿ, ರೋಗಗಳಿಗೆ ಆಹ್ವಾನ ನೀಡಿದಂತಾಗುವುದು. ರೋಗ ಗಳನ್ನು ತಡೆಯುವ ಸಾಮರ್ಥ್ಯ ರಕ್ತ ಕ್ಕಿರುವುದರಿಂದ, ರಕ್ತ ಕಣಗಳ ರೋಗ ನಿರೋಧಕ ಸಾಮರ್ಥ್ಯ ಹೆಚ್ಚಿಸಲು (ಬಲ ಪಡಿಸಲು) ಜೀರ್ಣಾಂಗವ್ಯೂಹ ಸಹಕಾರಿ. ಸರಾಗ ಉಸಿರಾಟ, ದೇಹಚಲನೆ, ನಿದ್ರೆ ಕೂಡಾ ಉತ್ತಮ ಆರೋಗ್ಯಕ್ಕೆ ಬಹುಮುಖ್ಯ ವಾಗಿದೆ. ಇವೆಲ್ಲವುಗಳ ಸಮತೋಲನಕ್ಕಾಗಿ ಮಾನಸಿಕ ಶಾಂತಿಯೂ ಮುಖ್ಯ. ಈ ಎಲ್ಲಾ ವಿಷಯಗಳಲ್ಲಿ ಒಂದು ನಿಯಂತ್ರಿತ ಪರಿಣಾಮ ಬೀರುವ ವ್ಯವಸ್ಥೆಯನ್ನು ಉಪವಾಸದಿಂದ ಮಾಡಬಹುದು.

ಉಪವಾಸವು ಮುಸಲ್ಮಾನರ ಧಾರ್ಮಿಕ ವಿಧಿ ಮಾತ್ರ ಅಲ್ಲ, ಇದೊಂದು ಉತ್ತಮ ಆರೋಗ್ಯಕ್ಕೆ ದೊರೆತಿರುವ ಕೊಡುಗೆಯಾಗಿದೆ. ಆಹಾರವು ಪೂರ್ಣ ವಾಗಿ ಜೀರ್ಣವಾಗುವುದರಿಂದ ಪಚ ನಾಂಗಗಳಲ್ಲಿ ಕ್ರಿಯಾಶೀಲತೆ ಹೆಚ್ಚುವುದು ಮತ್ತು ಜೀರ್ಣ ಶಕ್ತಿಯು ವೃದ್ಧಿ ಯಾಗುವುದು ಮತ್ತು ರಕ್ತ ವೃದ್ಧಿಯಾಗಿ ರೋಗ ಮುಕ್ತಗೊಳಿಸಲು ಸಹಕಾರಿ. ನಿರಂತರ ವಿವಿಧ ರೀತಿಯ ಆಹಾರ ಸೇವನೆಯಿಂದಾಗಿ ದೇಹದ ಜೀವಕೋಶ ಗಳಲ್ಲಿ ಮತ್ತು ಇತರ ಒಳ ಅಂಗಗಳಲ್ಲಿ ಉಳಿಯಬಹುದಾದ ವಿಷ ವಸ್ತುಗಳನ್ನು ಹೊರಹಾಕಲು ಉಪವಾಸ ಸಹಕಾರಿ ಯಾಗಿದೆ. ಇಂತಹ ವಿಷ ವಸ್ತುಗಳು ನಮ್ಮ ದೇಹದಲ್ಲಿ ಉಳಿದಿದ್ದರೆ, ಆಯಾಸ, ಖಿನ್ನತೆ, ಜ್ವಾಪಕ ಶಕ್ತಿ ಕುಂದುವುದು, ಕಣ್ಣು ಮಂಜಾಗುವುದು, ಕೂದಲು ಉದುರುವುದು, ವಿಸರ್ಜನೆ ಅಸಮರ್ಪಕ ವಾಗುವುದು ಮುಂತಾದ ತೊಂದರೆಗಳು ಕಾಣಿಸಿಕೊಳ್ಳುವುದು. ಉಪವಾಸದಿಂದಾಗಿ ದೇಹದ ವಿಷ ವಸ್ತುಗಳು ಹೊರಹೋಗಿ, ತೊಂದರೆಗಳಿಂದ ಮುಕ್ತರಾಗಲು ಸಾಧ್ಯ. ನಶಿಸಿ ಹೋದ ದೇಹದ ಜೀವಕೋಶಗಳೂ ಮರು ಹುಟ್ಟಿ ದೇಹಕ್ಕೆ ಉತ್ತೇಜನ ಸಿಗುವುದು. ಸಂಧಿವಾತ, ಪಾರ್ಶ್ವವಾಯು, ಕೆಮ್ಮು, ಅಜೀರ್ಣ, ಮಧುಮೇಹ, ಜಠರ ಹುಣ್ಣು, ಜಠರಗಾಳಿ ಮತ್ತು ಆಮಶಂಕೆ ಇತ್ಯಾದಿಗಳಿಗೂ ಉಪವಾಸ ಒಂದು ಚಿಕಿತ್ಸೆಯಂತೆ ಸಹಕಾರಿ.

ಉಪವಾಸ ಒಂದು ನೈಸರ್ಗಿಕ ಚಿಕಿತ್ಸಾ ವಿಧಾನದಂತೆ ಸರಿಯಾದ ರೀತಿಯಲ್ಲಿ ಆಚರಿಸಿದರೆ ದೇವಭಕ್ತಿಯೂ ಹೆಚ್ಚುವುದು. ಆದ್ದರಿಂದ ತರಾವೀಹ್, ತಹಜ್ಜುದ್ ಅಥವಾ ಇನ್ನಿತರ ಐಚ್ಛಿಕ ಆರಾಧನೆಗಳನ್ನು ನೆರವೇರಿಸಲು ಸುಲಭವಾಗುವಷ್ಟು ಒಂದು ಮಿತಿಯಲ್ಲೇ ಆಹಾರ ಸೇವನೆ ಆಗಬೇಕು. ಆದುದರಿಂದ ಬರುತ್ತಿರುವ ರಮಝಾನ್ ತಿಂಗಳನ್ನು ಸಂತೋಷದೊಡನೆ, ಭಕ್ತಿ ಯಿಂದ ಸ್ವಾಗತಿಸಿ ಅದರ ಬಗ್ಗೆ ಚಿಂತನೆ ಅವಲೋಕನ ನಡೆಸುತ್ತಾ ಅದರ ಒಳಿತು ಗಳನ್ನು ಗಳಿಸಲು ಸಾಧ್ಯವಾಗಬೇಕು.

ಈ ಬರುವ ರಮಝಾನ್ ತಿಂಗಳ ಉಪವಾಸದೊಂದಿಗೆ ಪವಿತ್ರ ಕುರ್‌ಆನನ್ನು ಸರಿಯಾದ ರೀತಿಯಲ್ಲಿ ಅರ್ಥವರಿತು ಓದುವ ಮೂಲಕ, ಅದರ ಇಂಗಿತ, ಅಂದರೆ ಆ ಪ್ರಭುವಿನ ಇಂಗಿತ ಅರಿತುಕೊಂಡು ಆ ಮೂಲಕ ಜೀವಿಸಲು ಪರಿಶ್ರಮ ಪಡಲು ನಮಗೆಲ್ಲರಿಗೂ ಸುಲಭವಾಗಲಿ... ■

ಕಾಣುವುದಿಲ್ಲ

ಮಗ: ಅಪ್ಪಾ, ನನಗೆ ದೂರದ ವಸ್ತು ಕಾಣುವುದಿಲ್ಲ.

ಜಿಪುಣ ತಂದೆ: ಅವನನ್ನು ಕರೆದು ಕೊಂಡು ಹೋಗಿ ಅದು ಏನು ಎಂದು ಪ್ರಶ್ನಿಸುತ್ತಾನೆ.

ಮಗ: ಅದು ಸೂರ್ಯ.

ಜಿಪುಣ ತಂದೆ: ಮಂಗ, ಇನ್ನು ಎಷ್ಟು ದೂರದ ವಸ್ತು ನಿನಗೆ ಕಾಣಬೇಕು.

ಬೇಡ! ನನ್ನಿಂದ ಸಾಧ್ಯವಿಲ್ಲ

✍ ರುಕ್ಸಾನ ಫಾತಿಮಾ

ಮಗನೇ ಅಂಗಡಿಗೆ ಹೋಗಿ ಸ್ವಲ್ಪ 'ಸಾಬೂನು ಹುಡಿ ತಾ' ಎಂದು ತಾಯಿ ಹೇಳಿದ ಕೂಡಲೇ ಮಗ 'ನನಗೆ ಆಗುವುದಿಲ್ಲ' ಎಂದು ಉತ್ತರಿಸುತ್ತಾನೆ. ತಾಯಿ ಅದೇ ಮಾತನ್ನು ಪುನರಾವರ್ತಿಸಿದಳು. ಪುನಃ ಮಗು ಅದೇ ಉತ್ತರ ನೀಡುತ್ತದೆ. ಈ ರೀತಿ ಉತ್ತರ ನೀಡುವ ಮಕ್ಕಳ ಸಮಸ್ಯೆಯೇನು? ಮಗು ಯಾಕಾಗಿ ಆಗುವುದಿಲ್ಲ. ಮನಸ್ಸಿಲ್ಲ. ಇಲ್ಲ ಬೇಡ ಎಂಬಂತಹ ಉತ್ತರ ನೀಡುತ್ತದೆ? ಮಗುವಿನ ಮನಸ್ಸಿಗೆ ಏನಾಗಿದೆ? ಅವರಿಗೂ ಮಾನಸಿಕ ಸಮಸ್ಯೆ ಇದೆಯೇ? ಅವರೂ ಕೂಡ ಒತ್ತಡಗಳಿಗೆ ಸಿಲುಕಿರುತ್ತಾರೆಯೇ? ಸಮಸ್ಯೆಗಳು ಅಪತ್ತುಗಳು ಅವರನ್ನೂ ಕಾಡುತ್ತಿರುತ್ತವೆಯೇ? ಯಾಕಾಗಿ ಮಕ್ಕಳು ಎಲ್ಲದಕ್ಕೂ ನಕಾರಾತ್ಮಕ ಸ್ವಭಾವವನ್ನು ತೋರುತ್ತಾರೆ? ಮಕ್ಕಳ ಮನಸ್ಸಿನಲ್ಲಿ ನೆಗೆಟಿವ್ ಚಿಂತೆಗಳು ಹೇಗೆ ರೂಪುಗೊಳ್ಳುತ್ತದೆ? ಮಗುವಿಗೆ ತನ್ನದೇ ಆದ ವ್ಯಕ್ತಿತ್ವವಿದೆಯೇ? ಹೌದು. ಎಲ್ಲಾ ಮಾನಸಿಕ ಸಮಸ್ಯೆಗಳನ್ನು ಮಕ್ಕಳೂ ಕೂಡಾ ಎದುರಿಸುತ್ತಿದ್ದಾರೆ. ಆಗಾಗ ನಡೆಯುವ ಪರೀಕ್ಷಾ ಪೇಪರ್‌ಗಳು, ಅಧ್ಯಾಪಕರ ನಡವಳಿಕೆ, ತುಂಬಾ ಹೋಮ್ ವರ್ಕ್, ಟ್ಯೂಷನ್ ಕ್ಲಾಸ್‌ಗಳು, ಸ್ಪೆಷಲ್ ಕ್ಲಾಸ್, ಸ್ಪರ್ಧೆಗಳು ಅದಲ್ಲದೇ ಮನೆಯಲ್ಲಿಯೂ ಇನ್ನಿತರ ಸಮಸ್ಯೆಗಳು ಹೀಗೆ ಹಲವಾರು ಒತ್ತಡಗಳ ಮಧ್ಯೆ ನಮ್ಮ ಮಕ್ಕಳಿರುತ್ತಾರೆ. ಹಾಗೆಯೇ ಮನಸ್ಸಿನ ಭಾರವನ್ನೆಲ್ಲಾ ಕೆಳಗಿಳಿಸಲು ಸಂದರ್ಭವನ್ನು ಕಾದು ಕುಳಿತವರಾಗಿರುತ್ತಾರೆ ನಮ್ಮ ಮಕ್ಕಳು. ಅಗತ್ಯಕ್ಕಿಂತ ಹೆಚ್ಚಿನ ಭಾರ ಹೊತ್ತ ಮಕ್ಕಳನ್ನು ಸಮಾಧಾನ ಪಡಿಸಲು ಹೆತ್ತವರಿಗೆ ಹಾಗೂ ಸಮಾಜದಲ್ಲಿರುವವರಿಗೆ ಸಾಧ್ಯವಾಗದೇ ಹೋದರೆ ಮಗುವಿಗೆ ಭಯಾನಕ ಮಾನಸಿಕ ರೋಗಗಳು ತಲೆ ತೋರಬಹುದು. ನಾವು ಮಕ್ಕಳ ದೇಹಕ್ಕೆ ಹೇಗೆ ಪ್ರಾಧಾನ್ಯ ಕಲ್ಪಿಸುತ್ತೇವೆಯೋ ಹಾಗೆಯೇ ಮಕ್ಕಳ ಮನಸ್ಸಿಗೂ ಪ್ರಾಧಾನ್ಯ ನೀಡಿ ಅದರ ಬಗ್ಗೆ ಗಮನ ಹರಿಸುವುದು ಅತ್ಯಗತ್ಯವಾಗಿದೆ. ಪ್ರೀತಿ ವಾತ್ಸಲ್ಯ ಪ್ರಥಮವಾಗಿ ಮಕ್ಕಳ ಮನಸ್ಸಿಗೆ ದೊರೆಯಬೇಕು.

ನಮ್ಮ ಮಕ್ಕಳು ದಿನನಿತ್ಯವು ಮಾನಸಿಕ ಒತ್ತಡಕ್ಕೆ ಸಿಲುಕಿ ಬೆಳೆಯುವವರಾಗಿದ್ದಾರೆ. ಅದು ಹಲವು ರೀತಿಯಲ್ಲಾಗಿರುತ್ತದೆ. ಕೆಲವೊಮ್ಮೆ ಅದು ಪಾಠ ಪಠ್ಯೇತರ ವಿಷಯಗಳಲ್ಲಾಗಿದ್ದರೆ ಇನ್ನು ಕೆಲವೊಮ್ಮೆ ಕಲೆಗಳ ಬಗ್ಗೆ ಆಗಿರಬಹುದು ಇಲ್ಲವೇ ಗೆಳೆಯರಿಂದಲೋ ಮನೆಯಿಂದಲೋ ಅಥವಾ ಸಮಾಜದಿಂದಲೋ ಆಗಬಹುದು. ಒತ್ತಡಗಳಿಂದ ಮುಕ್ತಿ ಹೊಂದಲು ಸಾಧ್ಯವಿಲ್ಲವೆಂದಾದರೆ ಮನಸ್ಸಿನಲ್ಲಿರುವ ಭಾರ ಮಿತಿ ಮೀರಬಹುದು. ಇದು ಮಕ್ಕಳನ್ನು ಬೇಡದವುಗಳನ್ನು ಮಾಡಲು ಪ್ರೇರೇಪಿಸುತ್ತದೆ. ನೆಗೆಟಿವ್ ಒತ್ತಡಗಳು ಮಕ್ಕಳ ಜೀವನದ ಎಲ್ಲಾ ರಂಗಗಳನ್ನು ಬಾಧಿಸುತ್ತದೆ. ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಿಗಿಂತ ಹೆಚ್ಚು ಮಾನಸಿಕ ಒತ್ತಡಗಳಿವೆಯೆಂದು ಶಾಸ್ತ್ರಜ್ಞರು ತಿಳಿಸಿದ್ದಾರೆ. ಹದಿಹರೆಯದ ಮಕ್ಕಳಲ್ಲಿ ಅವರಿಗಿಂತ ಕೆಳ ವಯಸ್ಸಿನ ಮಕ್ಕಳಿಗಿಂತ ಮಾನಸಿಕ ಸಂಘರ್ಷಗಳು ಹೆಚ್ಚಾಗಿದೆಯೆಂದು ಅಧ್ಯಯನಗಳು ತಿಳಿಸಿವೆ. ಮಕ್ಕಳಿಗೆ ಮಾನಸಿಕ ಒತ್ತಡಗಳು ಇರುವುದೇ ಇಲ್ಲ ಎಂದು ಭಾವಿಸುವವರಿದ್ದಾರೆ. ಇದು ತಪ್ಪು ಧಾರಣೆ. ಇಂದಿನ ಮಕ್ಕಳು ಹೆಚ್ಚಾಗಿ ಮಾನಸಿಕ ಅಸ್ವಸ್ಥತೆಗೆ ಗುರಿಯಾಗಿದ್ದಾರೆ. ಹೊರಲು ಅಸಾಧ್ಯವಾದ

ಪರರ ಭಾರವನ್ನು ಹೊರುತ್ತಿದ್ದಾರೆ.

ಹದಿಹರೆಯದ ಗಂಡು ಹಾಗೂ ಹೆಣ್ಣು ಮಕ್ಕಳ ದೇಹದಲ್ಲಾಗುವ ಶಾರೀರಿಕ, ಮಾನಸಿಕ ಬದಲಾವಣೆ, ತಂದೆ–ತಾಯಿಯರು ದೂರ ದೇಶದಲ್ಲಿ ನೆಲೆಸಿರುವ ಮತ್ತು ಮದ್ಯಸೇವನೆ ಅಭ್ಯಾಸವಾಗಿರಿಸಿದವರ ಮಕ್ಕಳಲ್ಲಿ ಮಾನಸಿಕ ಸಮಸ್ಯೆಗಳು ಉದ್ಭವಿಸುವ ಸಾಧ್ಯತೆಗಳು ಹೆಚ್ಚು. ಬೇಗನೇ ಕೋಪಿಸಿಕೊಳ್ಳುವುದು, ಕಲಿಕೆಯಲ್ಲಿ ಅಶ್ರದ್ಧೆ, ಯಾರೊಂದಿಗೂ ಸೇರಿಕೊಳ್ಳದೇ ಒಂಟಿಯಾಗುವುದು. ಎಲ್ಲದರಲ್ಲೂ ವಿರೋಧ ತೋರಿಸುವುದು. ನಿದ್ರಾಹೀನತೆ ಇವೆಲ್ಲವೂ ಮಾನಸಿಕ ಅಸ್ವಸ್ಥತೆಗಳ ಲಕ್ಷಣವಾಗಿದೆ.

ಇಂದು ಮಾನಸಿಕ ಸಮಸ್ಯೆಗಳನ್ನು ಎದುರಿಸುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತಿದೆ. ಎಲ್ಲದಕ್ಕೂ ನಿರಾಶರಾಗುವವರಿದ್ದಾರೆ. ಅವರೊಂದಿಗೆ ನಿರಂತರ ಸಾಮೀಪ್ಯದಿಂದ ಸಹಕರಿಸುತ್ತಾ ಇದ್ದರೆ ಅವರ ತಲೆಬಿಸಿಯನ್ನು ನಿವಾರಿಸಬಹುದು. ಒಂದೇ ಪರಿಸ್ಥಿತಿಯನ್ನು ಕೆಲವರು ವಿವಿಧ ರೀತಿಯಲ್ಲಿ ಎದುರಿಸುತ್ತಾರೆ. ತೀರಾ ಕ್ಷುಲ್ಲಕ ವಿಷಯಗಳಿಗೂ ವ್ಯಥೆ ಪಡುವವರೇ ಹೆಚ್ಚು ಮಂದಿ. ಇಂತಹವರಿಗೆ ಒಮ್ಮೆಲೇ ಮಾನಸಿಕ ಸಂಘರ್ಷ ಉಂಟಾಗುತ್ತದೆ. ಮಾನವನು ಸಂಘಟಿತ ಜೀವನ ಆರಂಭಿಸಿದ ಘಟ್ಟದಲ್ಲೇ ಮಾನಸಿಕ ಒತ್ತಡ ಉಂಟಾಗಿತ್ತು. ಅವರ ಸಾಮೂಹಿಕ ಬೆಳವಣಿಗೆಯ ಕ್ರಮ ಉನ್ನತಿಗೇರಿದಂತೆ ಒತ್ತಡ ಉಂಟು ಮಾಡುವಂತಹ ಪರಿಸ್ಥಿತಿ ಒದಗಿ ಬಂತು. ಇಂದು ಮಕ್ಕಳಿಂದ ಹಿಡಿದು ವೃದ್ಧರ ವರೆಗೆ ಎಲ್ಲರೂ ಯಾವುದಾದರೊಂದು ರೀತಿಯ ಮಾನಸಿಕ ಅಸ್ವಸ್ಥತೆಗೆ ಗುರಿಯಾದವರಾಗಿದ್ದಾರೆ. ಮಾನಸಿಕ ಸಂಘರ್ಷ ತುಂಬಾ ಕಡಿಮೆ ಪ್ರಮಾಣದಲ್ಲಿರುವವರು ಆದಿವಾಸಿಗಳು, ಬೇಡುವವರು ಮತ್ತು ಅಭಿವೃದ್ಧಿ ಹೊಂದದವರಾಗಿದ್ದಾರೆ. ಭವಿಷ್ಯದ ಕುರಿತು ಇರುವ ಆಶಂಕೆ, ಉದ್ಯೋಗಕ್ಕೆ ಸಂಬಂಧಿಸಿದ ಸಮಸ್ಯೆಗಳು ಹಲವಾರು ಮಾನಸಿಕ ಅಸಮತೋಲನಕ್ಕೆ ಕಾರಣವಾಗುತ್ತದೆ. ಕೈ ತುಂಬಾ ಸಂಬಳ ದೊರೆಯುವ ಉದ್ಯೋಗಸ್ಥರು ಮನ ತುಂಬಾ ಅಸ್ವಸ್ಥತೆಯಿಂದಲೇ ಮನೆಗೆ ತಲುಪುತ್ತಾರೆ ಎಂದು ತಿಳಿಸಲಾಗಿದೆ.

ಮಕ್ಕಳೊಂದಿಗೆ ಕುಳಿತು ಹೆಚ್ಚು ಸಮಯವನ್ನು ಕಳೆಯಬೇಕು. ಮನಬಿಚ್ಚಿ ಮಾತನಾಡುವುದಕ್ಕೆ ಅವ ಕಾಶವನ್ನು ಕಲ್ಪಿಸಿ ಕೊಡುತ್ತಿರಬೇಕು. ಹೆತ್ತವರು ಅವರನ್ನು ಪ್ರೀತಿಸುತ್ತಿದ್ದಾರೆ ಎಂಬುದನ್ನು ಅವರು ಅರಿತರೆ ಎಲ್ಲಾ ವಿಷಯಗಳನ್ನು ತೆರೆದಿಟ್ಟು ತಂದೆ–ತಾಯಿಯರೊಂದಿಗೆ ಮಾತನಾಡುತ್ತಾರೆ. ಇದು ಮಕ್ಕಳನ್ನು ಸಂಘರ್ಷದಿಂದ ರಕ್ಷಿಸುತ್ತದೆ. ಪಠನ ಸೌಕರ್ಯಗಳನ್ನು ಒದಗಿಸುವುದರೊಂದಿಗೆ ಆಟವಾಡಲೂ ಹಾಗೆಯೇ ವಿಶ್ರಾಂತಿಗಾಗಿಯೂ ಅವರಿಗೆ ಸೌಕರ್ಯವನ್ನು ಮಾಡಿಕೊಡಬೇಕು.

◆ ◆ ◆

ಶಹೀದಾ ಉಮರ್

ಇಬ್ನ್ ಉಮೈಲ್

ರಸಾಯನ ಶಾಸ್ತ್ರದ ಬೆಳವಣಿಗೆಯಲ್ಲಿ ಗಣನೀಯ, ಮಹತ್ತರ ಕೊಡುಗೆಗಳನ್ನು ನೀಡಿದ ಇಬ್ನ್ ಉಮೈಲ್ ಮುಸ್ಲಿಮ್ ವಿಜ್ಞಾನಿಗಳಲ್ಲಿ ಪ್ರಮುಖವಾಗಿ ಗುರುತಿಸಲ್ಪಟ್ಟವರು. ವಿಜ್ಞಾನದ ಇತಿಹಾಸದಲ್ಲಿ ಇವರು ಉತ್ತಮ ಸ್ಥಾನದಲ್ಲಿ ಪರಿಚಯಿಸಲ್ಪಡುತ್ತಾರೆ. ಇವರ ರಸಾಯನಶಾಸ್ತ್ರದ ಕೆಲಸಗಳನ್ನು ಯೂರೋಪಿನ ಹಳೆಯ ವಿಜ್ಞಾನಿಗಳಿಬ್ಬರು ಭಾಷಾಂತರಿಸಿದ್ದರು.

ಜೀವನ: ಮುಹಮ್ಮದ್ ಇಬ್ನ್ ಉಮೈಲ್‌ರು 4ನೆಯ ಶತಮಾನದಲ್ಲಿ ಜನಿಸಿದ್ದ ಈಜಿಪ್ಶಿಯನ್ ವಿಜ್ಞಾನಿ. ಸಾರ್ವಜನಿಕರಿಂದ ದೂರವಾಗಿ ಇವರು ಏಕಾಂತ ಜೀವನವನ್ನು ನಡೆಸಿದರು. ಇವರ ಪುಸ್ತಕಗಳು ಇವರ ನಿಕಟ ಸ್ನೇಹಿತರಲ್ಲಿ ಹಂಚಲ್ಪಟ್ಟಿತು. ಇವರ ಪುಸ್ತಕಗಳಲ್ಲಿ ಇವರ ವೈಯಕ್ತಿಕ ವಿಚಾರಗಳಾವುವೂ ಲಭ್ಯವಿಲ್ಲ. ಫಲಿತಾಂಶವಾಗಿ ಇವರ ಬಗ್ಗೆ ಕೆಲವೇ ವಿಚಾರಗಳು ನಮಗೆ ತಿಳಿದಿದೆ. ಇವರ ಜನನ ಹಾಗೂ ಮರಣದ ಬಗ್ಗೆ ನಿಖರ ಮಾಹಿತಿಗಳೂ ಲಭ್ಯವಿಲ್ಲ. ಇವರ ಪೂರ್ಣ ಹೆಸರು ಅಬೂ ಅಬೂಲಾಹ್ ಮುಹಮ್ಮದ್ ಅಲ್-ಹಕೀಮ್ ಅಲ್-ಸಾದಿಖ್ ಅಲ್-ತಮೀಮಿ ಇಬ್ನ್ ಉಮೈಲ್. ಇವರು ರಸಾಯನ ಶಾಸ್ತ್ರದ ಬಗ್ಗೆ ಅಬುಲ್ ಖಾಸಿಮ್ ಅಬ್ದ್ ಅಲ್-ರಹ್‌ಮಾನ್‌ರಿಂದ ಅಭ್ಯಸಿಸಿದರು.

ಇವರು ಹಳೆಯ ಈಜಿಪ್ಶಿಯನ್ ಪಿರಮಿಡ್‌ಗಳು ರಸಾಯನ ಶಾಸ್ತ್ರದ ಗುಪ್ತ ಜ್ಞಾನಗಳನ್ನು ಒಳಗೊಂಡಿದ್ದವು ಎಂದು ಬಲವಾಗಿ ನಂಬಿದ್ದರು. ಇದರ ಬಗೆಗಿನ ಮಾಹಿತಿಗಳನ್ನು ಸಂಗ್ರಹಿಸಲು ಇವರು ತಮ್ಮೀರ್ವ ಸ್ನೇಹಿತರೊಂದಿಗೆ ಪಿರಮಿಡ್‌ಗಳನ್ನು ಪ್ರವೇಶಿಸಿದರು. ಇವರು ತಮ್ಮ ಪುಸ್ತಕದಲ್ಲಿ ಪಿರಮಿಡ್‌ಗಳ ಬಗ್ಗೆ ವಿಸ್ತೃತ ವಿವರಣೆಗಳನ್ನು ಹಾಗೂ ಅದರ ಮೂರ್ತಿಗಳು, ಚಿತ್ರಕಲೆಯ ಬಗ್ಗೆಯೂ ಬರೆದಿರುವರು. ಅದರ ಗುಪ್ತವಾದ ರಾಸಾಯನಿಕ ಅರಿವಿನ ಬಗ್ಗೆ ವ್ಯಾಪಕವಾದ ವಿವರಣೆಯನ್ನು ಬರೆದಿರುವರು. ಇಬ್ನ್ ಉಮೈಲ್ ಅಪಾರ ಜ್ಞಾನವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಇವರು ತಮ್ಮ ಸಂಗಾತಿಗಳೊಡನೆ ಹೆಚ್ಚಿನ ವಿಷಯಗಳನ್ನು ಚರ್ಚಿಸುತ್ತಿದ್ದರು. ಇವರು ಕ್ರಿ.ಶ. 960 ಸುಮಾರಿಗೆ ನಿಧನ ಹೊಂದಿದರು.

ಸಾಧನೆಗಳು: ಇಬ್ನ್ ಉಮೈಲ್ ರಸಾಯನ ಶಾಸ್ತ್ರದ ಬಗ್ಗೆ ಹಲವಾರು ಪುಸ್ತಕಗಳನ್ನು ಬರೆದಿರುವರು. ಇದೇ ವಿಷಯದಲ್ಲಿ ಇವರು 'ಖಸೀದ' ಎಂದ ಕರೆಯಲಾಗುವ ನೀಳ ಕವಿತೆಗಳನ್ನು ರಚಿಸಿರುವರು. ಇವರ ಕೆಲವು ಪುಸ್ತಕ ಹಾಗೂ ಕವಿತೆಗಳು ಇಂತಿವೆ. 'ರಿಸಾಲಾ ಅಲ್-ಶಮ್ಸ್ ಇಲಲ್ ಹಲಾಲ್; ಮಾ ಅಲ್-ವರಾಖಿ ವಲ್ ಅರ್ದ್ ಅಲ್-ನಜ್ಮೀಯಾ; ಅಲ್-ಸಿಫ್ರ್ ಅಲ್-ಕಬೀರ್ ಫೀ ಹಲ್ ಅಲ್-ಅಷ್ಕಲ್ ಅಲ್-ಬಿರ್‌ಬಾವಿಯಾ ವಲ್ ತಸವಿರ್; ಅಲ್-ಖಸೀದ ಅಲ್-ನೂನಿಯಾ; ಅಲ್-ದುರತ್ ಅಲ್-ನಾಖಿಯಾ ಮತ್ತು ಖವಸ್ ಅಲ್-ಬರ್‌ವಾಲ್ ಬಹ್ರ್.'

'ರಿಸಾಲಾ ಅಲ್-ಶಮ್ಸ್ ಇಲಾಲ್ ಹಿಲಾಲಾ' (ಸೂರ್ಯ ಹಾಗೂ ಬಿದಿಗೆ ಚಂದ್ರನ ಬಗ್ಗೆ ಪ್ರಬಂಧಗಳು) ಹಾಗೂ 'ಮಾ ಅಲ್-ವರಾಖಿ ವಲ್ ಅರ್ದ್ ಅಲ್-ನಜ್ಮೀಯಾ' (ಬೆಳ್ಳಿಯಂತೆ ಹೊಳಪಾಗಿರುವ ನೀರು ಹಾಗೂ ತೇಜಸ್ಸುಳ್ಳ ಭೂಮಿ)ಗಳು ಕ್ರಿ.ಶ. 1200ರಲ್ಲಿ 'ತಬೂಲಾ ಕಿಮಿಕಾ' ಹಾಗೂ 'ಎಪಿಸ್ಟೋಲಾ ಸೋಲಿಸ್ ಎಡ್ ಲುನಾಮ್ ಕ್ರೈಸೆಂಟೆಮ್' ಎಂಬ ಹೆಸರಿನೊಂದಿಗೆ ಲ್ಯಾಟಿನ್ ಭಾಷೆಗೆ ಭಾಷಾಂತರಿಸಲ್ಪಟ್ಟಿತು. ಯೂರೋಪಿನಲ್ಲಿ ಮಧ್ಯಯುಗದಲ್ಲಿ ಉಮೈಲ್‌ರ ಕೆಲಸಗಳು ಲ್ಯಾಟಿನ್ ಭಾಷೆಯಲ್ಲಿ ಬಹಳವಾಗಿ ಉಪಯೋಗಿಸಲ್ಪಟ್ಟಿತು. ಯೂರೋಪಿನಲ್ಲಿ ರಸಾಯನ ಶಾಸ್ತ್ರದ ಶಿಕ್ಷಣವು 12ನೆಯ ಶತಮಾನದಲ್ಲಿ ಅರೇಬಿಕ್ ಕೆಲಸಗಳ ಭಾಷಾಂತರ ದೊಂದಿಗೆ ಪ್ರಾರಂಭವಾಯಿತು. ಇದಕ್ಕೂ ಮುನ್ನ ಯೂರೋಪಿನಲ್ಲಿ ರಸಾಯನ ಶಾಸ್ತ್ರದ ಬಗ್ಗೆ ತಿಳುವಳಿಕೆಯೇ ಇದ್ದಿರಲಿಲ್ಲ. ಯೂರೋಪಿನ ರಸಾಯನ ಶಾಸ್ತ್ರದ ಮೊದಲ ಕೆಲಸಗಳು ಇಸ್ಲಾಮಿನಿಂದ ಎರವಲು ಪಡೆದಂತಹದ್ದಾಗಿತ್ತು.

ಇಬ್ನ್ ಉಮೈಲ್‌ರ ಪುಸ್ತಕಗಳು ಇತರವುಗಳಿಂದ ಭಿನ್ನವಾಗಿವೆ. ಅದರಲ್ಲಿ ಹಿಂದಿನ ಕಾಲದ ಹಲವು ರಸಾಯನ ಶಾಸ್ತ್ರದ ವಿಜ್ಞಾನಿಗಳ ಹೆಸರು ಹಾಗೂ ಅವರ ಬಗೆಗಿನ ಉಲ್ಲೇಖಗಳಿವೆ. ಇವರು ಹಲವು ಈಜಿಪ್ಶಿಯನ್, ಗ್ರೀಕ್ ಹಾಗೂ ಇಸ್ಲಾಮೀ ವಿಜ್ಞಾನಿಗಳನ್ನು ಉಲ್ಲೇಖಿಸಿದ್ದಾರೆ. ಅವರಲ್ಲಿ ಹರ್ಮಿಸ್ ಮಾರ್ಕುನಸ್(ಈಜಿಪ್ಟ್) ಸೊಕ್ರಟಿಸ್, ಪ್ಲೇಟೋ(ಗ್ರೀಕ್), ಖಾಲಿದ್ ಇಬ್ನ್ ಯಝೀದ್, ಜಾಬಿರ್ ಇಬ್ನ್ ಹಯ್ಯಾನ್, ದಲ್‌ನೂನ್ ಅಲ್-ಮಿಸ್ರಿ(ಇಸ್ಲಾಮಿಕ್)- ಇತ್ಯಾದಿಗಳು ಪ್ರಮುಖರು. ಇವರಲ್ಲಿ ದಲ್‌ನೂನ್ ಅಲ್-ಮಿಸ್ರಿಯವರು ಆಧ್ಯಾತ್ಮಿಕತೆಯ ಬಗ್ಗೆ ಒಳವುಳ್ಳವರಾಗಿದ್ದರು.

ಮಾದರಿ ಯೋಗ್ಯ ಬಡ್ಡಿರಹಿತ ಸಾಲ ಸಂಸ್ಥೆ: ಅಲ್‌ನೂರ್

ಉಡುಪಿಯಲ್ಲಿರುವ "ಮಸ್ಜಿದ್–ಎ–ನೂರುಲ್ ಇಸ್ಲಾಮ್" ಆದಿ ಉಡುಪಿಯ ಆಡಳಿತ ಮಂಡಳಿಯು ಸ್ವಯಂ ಸೇವಾ ಪರಿಹಾರ ದೊರಕಿಸುವಂತಹ ಒಂದು ವ್ಯವಸ್ಥೆ "ಅಲ್–ನೂರ್ ಕ್ರೆಡಿಟ್ ಸ್ಕೀಮ್" ಎಂಬ ಹೆಸರಿನಲ್ಲಿ ಬಡ್ಡಿರಹಿತ ಸಾಲದ ಯೋಜನೆಯೊಂದನ್ನು ಪ್ರಾರಂಭಿ ಸಿದೆ. ಮಸ್ಜಿದ್–ಎ–ನೂರುಲ್ ಇಸ್ಲಾಮ್‌ರ ಉಪಾಧ್ಯಕ್ಷರೂ "ಅಲ್–ನೂರ್ ಕ್ರೆಡಿಟ್ ಸ್ಕೀಮ್" ಅಧ್ಯಕ್ಷರೂ ಆಗಿರುವ ಕೆ. ಅಬ್ದುಲ್ ಅಝೀಝ್ ಆದಿ ಉಡುಪಿ ರವರು ಹೇಳುವಂತೆ– ಮಾನವ ಜನಾಂಗ ವನ್ನು ಗೌರವಿಸುವುದರೊಂದಿಗೆ ಅವರ ನೋವು, ಕಷ್ಟಗಳನ್ನು ಶಮನಗೊಳಿಸುವ ಸಲುವಾಗಿ ಇಸ್ಲಾಮಿನಲ್ಲಿ ನಿಷಿದ್ಧ (ಹರಾಮ್)ವಾಗಿರುವ ಬಡ್ಡಿಯಿಂದ ಮಸೀದಿಯ ಜಮಾಅತ್ ಬಾಂಧವರನ್ನು ರಕ್ಷಿಸುವ ಸಾಮೂಹಿಕ ಪ್ರಯತ್ನ ಇದಾಗಿದೆ.

ಮಸೀದಿಯ ಆಡಳಿತ ಮಂಡಳಿಯ ಸದಸ್ಯರೇ 50,20,10 ಸಾವಿರದಂತೆ ಸ್ವ–ಇಚ್ಛೆಯಿಂದ ಹೂಡಿರುವ ಬಂಡವಾಳ ವನ್ನು ಆಧಾರವಾಗಿಟ್ಟುಕೊಂಡು ಈ ಯೋಜನೆಯನ್ನು ಪ್ರಾರಂಭಿಸಿರುವರು. ಈ ಯೋಜನೆಯನ್ನು ಪ್ರಾರಂಭಿಸುವ ಉದ್ದೇಶ, ಇತರ ಕಡೆಗಳಲ್ಲೂ ನಡೆಯು ವಂತೆ ಆ ಮಸೀದಿಯ ಸುತ್ತಲ ಜನರು ತಮ್ಮ ಆಸೆ–ಆಕಾಂಕ್ಷೆಗಳನ್ನು ಪೂರೈಸಲು ಬಡ್ಡಿಯ ಮೊರೆ ಹೋಗುತ್ತಿದ್ದರು. ಪ್ರವಾದಿಯವರು(ಸ) ಬಡ್ಡಿ ತಿನ್ನುವವನನ್ನು, ಬಡ್ಡಿ ತಿನ್ನಿಸುವವನನ್ನು, ಬಡ್ಡಿಗೆ ಸಾಕ್ಷಿ ನಿಲ್ಲುವವರನ್ನು ಮತ್ತು ಬಡ್ಡಿಯ ದಾಖಲೆ ಪತ್ರ ಬರೆಯುವವನನ್ನು ಶಪಿಸಿರುವರು. ಇದಕ್ಕಾಗಿ ಜಮಾಅತ್ ಬಾಂಧವರಿಗಾಗಿ:–

- ಜಮಾಅತ್ ಬಾಂಧವರಿಂದ ಕನಿಷ್ಠ ಒಂದು ವರ್ಷದ ಅವಧಿಗೆ ಸಾಲದ ರೂಪದಲ್ಲಿ ಧನವನ್ನು ಪಡೆಯುವುದು.
- ಪ್ರತೀ ತಿಂಗಳೂ ಕಂತಿನ ಮೂಲಕ ಉಳಿತಾಯದ ಮೊತ್ತವನ್ನು 2 ವರ್ಷಗಳ ಅವಧಿಗೆ ಸಾಲವಾಗಿ ಸಂಗ್ರಹಿಸುವುದು.
- 8 ಗ್ರಾಂ. ಚಿನ್ನಕ್ಕೆ 15 ಸಾವಿರ ರೂ. ಸಾಲ ನೀಡುವುದು.
- ಪ್ರತೀ ತಿಂಗಳೂ ಕಂತಿನ ರೂಪದಲ್ಲಿ ಮರು ಪಾವತಿ.
- ಮಾಸಿಕ ಉಳಿತಾಯ ಯೋಜನೆಯಲ್ಲಿ ಗ್ರೂಪ್ ಮುಖಾಂತರ ಜನರನ್ನು ಸೇರಿಸಿದ್ದು 2 ವರ್ಷಗಳಲ್ಲಿ ಎಲ್ಲಾ ಗ್ರೂಪ್‌ನವರಿಗೂ ಒಮ್ಮೆಲೇ ಕೊಡುವ

ಸಂದರ್ಭ ಬಂದಲ್ಲಿ ಮರು ಪಾವತಿಸಲು ಕಷ್ಟವಾಗದಂತೆ 6 ತಿಂಗಳು ಬಿಟ್ಟು 1 ಮಿತಿಯಲ್ಲಿ ಪುನಃ 1 ಗ್ರೂಪ್‌ಗೆ ಸದಸ್ಯರನ್ನು ಮಾಡುತ್ತದೆ.

- 11 ಗ್ರೂಪ್‌ಗಳಿದ್ದು ಕೆಲವು ಗ್ರೂಪ್‌ಗಳು ತಿಂಗಳಿಗೆ 100/– ರೂ. ಪಾವತಿಸುವಂತಹದ್ದು ಇನ್ನು ಕೆಲವು ಗ್ರೂಪ್ 200/– ಪಾವತಿಸುವಂತಹದ್ದು.
- ಈ ವ್ಯವಸ್ಥೆಯು ಈ ಮಸೀದಿಯ ಜಮಾಅತ್ ಬಾಂಧವರಿಗಾಗಿರುವುದು.
- 100/–ರೂ. ಗ್ರೂಪ್‌ನ ಸದಸ್ಯರಿಗೆ 3 ಸಾವಿರ ಹಾಗೂ 200/– ರೂ. ಗ್ರೂಪ್‌ನ ಸದಸ್ಯರಿಗೆ 6 ಸಾವಿರದಂತೆ ಸಾಲ ನೀಡಲಾಗುವುದು.
- ತುರ್ತು ಅಗತ್ಯಗಳಿಗೆ ಸದಸ್ಯರಲ್ಲದಿದ್ದರೂ ಚಿನ್ನ ಅಡವಿಟ್ಟು ಸಾಲ ನೀಡಲಾಗುವುದು. (ಔಷಧೋಪಚಾರ, ಅಪಘಾತ ಹಾಗೂ ಇತರ ತುರ್ತು ಅಗತ್ಯಗಳಿಗೆ)
- ಶ್ರೀಮಂತರನ್ನು ಸಂದರ್ಶಿಸಿ ಈ ಸ್ಕೀಮ್‌ನ ಉದ್ದೇಶ ತಿಳಿಸಿ ಅವರಿಗೂ ಸಮಾಜ ಸೇವೆ ಮಾಡುವ ಅವಕಾಶ.
- ಜಮಾಅತ್‌ನ ಮೇಲುಸ್ತುವಾರಿಯೊಂದಿಗೆ ಮಹಿಳಾ ಸ್ವ–ಸಹಾಯ ಸಂಘಗಳನ್ನು ಇಸ್ಲಾಮೀ ವ್ಯವಸ್ಥೆಯನ್ನು ಮಹಿಳೆಯರಿಗಾಗಿ ಪ್ರಾರಂಭಿಸುವ ಯೋಜನೆ ಇದೆ.

"ಅಲ್–ನೂರ್ ಕ್ರೆಡಿಟ್ ಸ್ಕೀಮ್" ಸಮಾಜಕ್ಕೆ ಕೊಡುವ ಸಂದೇಶ:–

ಜಮಾಅತಿನ ಈ ಸ್ಕೀಮ್ ಯಾವುದೇ ಪಕ್ಷಪಾತಕ್ಕೆ ಅವಕಾಶ ಕೊಡದೇ ರಾಜಕೀಯ, ಜನಾಂಗೀಯವಾದ ಯಾವುದೇ ಸಿದ್ಧಾಂತಕ್ಕೆ ಅವಕಾಶ ನೀಡದೇ ಎಲ್ಲ ಜನರಲ್ಲೂ ಪರಸ್ಪರ ಸಹಕಾರ, ಮಾನವರನ್ನು ಪರಸ್ಪರ ಗೌರವಿಸುವುದು. ಸ್ನೇಹ, ಪರಸ್ಪರ ತಿಳುವಳಿಕೆಯೊಂದಿಗೆ ನಿರಂತರ ಶಾಂತಿ ವೃದ್ಧಿಸುವುದು. ಈ ಜಮಾಅತ್ ಬಾಂಧವರ ಜೀವನ ಸುಧಾರಣೆಯೊಂದಿಗೆ ಪರಲೋಕ(ಶಾಶ್ವತ ಜೀವನ)ದ ಬಗ್ಗೆ ಆಸಕ್ತಿ ಮೂಡಿಸುವ ಪ್ರಯತ್ನ. ಈ ಮೂಲಕ ಇತರ ಪ್ರದೇಶದ ಜಮಾಅತ್‌ನ ಹೊಣೆಗಾರರೂ ತಮ್ಮ ಸುತ್ತಲ ಸಮಾಜವನ್ನು ಇಸ್ಲಾಮೀ ಜೀವನ ಪದ್ಧತಿಯಂತೆ ನಡೆಯಲು ಸುಲಭವಾಗುವಂತೆ ಸಹಕರಿಸಲಿ ಎಂಬ ಆಶಯದೊಂದಿಗೆ ಇದನ್ನು ಪ್ರಾರಂಭಿಸಿರುವರು.

ಅದೆಷ್ಟೋ ಮಂದಿ ಸಂಪತ್ತಿನ ಆಧಿಕ್ಯದ ಸ್ಥಿತಿಯಲ್ಲಿದ್ದೂ ಅವರ ಸುತ್ತಲ ಪರಿಸರದಲ್ಲಿ ಹಸಿವಿನಿಂದ ಬಳಲುವವರು, ಬಡ್ಡಿಯ ದುಷ್ಪರಿಣಾಮದ ಅರಿವಿಲ್ಲದವರೂ ಇದ್ದಾರೆ. ಸ್ಥಿತಿವಂತರು ತಮ್ಮ ಹೊಣೆಗಾರಿಕೆಗಳನ್ನು ಅರಿತುಕೊಂಡು ಆ ಮೂಲಕ ಸಮಾಜದ ಸುಧಾರಣೆಯೊಂದಿಗೆ ಆ ಸೃಷ್ಟಿಕರ್ತನ ಸಂಪ್ರೀತಿ ಪಡೆಯುವ ಪ್ರಯತ್ನದಲ್ಲಿರುವ ಉಡುಪಿ ಜಿಲ್ಲೆಯ, ಆದಿ ಉಡುಪಿಯಲ್ಲಿರುವ "ಮಸ್ಜಿದ್–ಎ–ನೂರುಲ್ ಇಸ್ಲಾಮ್" ಆಡಳಿತ ಮಂಡಳಿಯವರು ಎಲ್ಲರಿಗೂ ಮಾದರಿ ಯೋಗ್ಯರಾಗಿರುವರು. ■

ಮರೆತರೂ ಹೇಗೆ ಮರೆಯಲಿ?

(18ನೇ ಪುಟದಿಂದ)

ಯಾವುದನ್ನೂ ಲೆಕ್ಕಿಸಲಿಲ್ಲ. ಆತನ ಪತ್ನಿ ಮತ್ತು ಮಗುವಿಗೆ ನಮ್ಮ ಏ.ಸಿ. ಕಾರಿನಲ್ಲಿ ಸ್ವಲ್ಪ ಹೊತ್ತು ಕುಳಿತುಕೊಳ್ಳುವಂತೆ ಹೇಳಿದೆವು. ಅವರು ಹಾಗೇ ಮಾಡಿದರು.

ಟಯರು ಬದಲಾಯಿಸಿಕೊಂಡ ಬಳಿಕ ನಮ್ಮ ಕಾರು ಸಾಗಿತು. ಹತ್ತಾರು ಕಿ.ಮೀ. ಗಳ ಬಳಿಕ ಗ್ಯಾರೇಜು ಸಿಕ್ಕಿತು. ಅಲ್ಲಿ ನಮ್ಮ ಟಯರ್‌ಗಳನ್ನು ಬದಲಾಯಿಸಿಕೊಂಡೆವು. ಈ ಓಮಾನಿ ನಮಗೆಲ್ಲರಿಗೂ ಹತ್ತಿರದ ಅಂಗಡಿಯಿಂದ ಸಾಕಷ್ಟು ತಂಪು ಪಾನೀಯಗಳನ್ನು ತಂದುಕೊಟ್ಟ. ಜೊತೆಗೆ ಮುಂದಿನ ರಸ್ತೋರೆಂಟಿನಲ್ಲಿ ಊಟ ಮಾಡುವಂತೆ ಒತ್ತಾಯಿಸಿದ. ನಾವು ನಯವಾಗಿ ನಿರಾಕರಿಸಿದೆವು. ಏಕೆಂದರೆ, ನಾವು ಬರುವಾಗಲೇ ಮನೆಯಿಂದ ಮಧ್ಯಾಹ್ನದ ಊಟಕ್ಕೆ ಸಿದ್ಧತೆ ಮಾಡಿಕೊಂಡೇ ಬಂದಿದ್ದೆವು. ಇಲ್ಲದಿದ್ದರೆ ಅದು ವ್ಯರ್ಥವಾಗುತ್ತಿತ್ತು.

ಈ ಓಮಾನಿ ಮಸ್ಕತ್‌ನಲ್ಲಿ ಶ್ರೀಮಂತ ವರ್ತಕ. ಆತನಲ್ಲಿ ಬಾಡಿಗೆಯ ಹಲವು ಫ್ಲಾಟುಗಳಿದ್ದವು. ಎರಡು ಸ್ವಂತ ಚಿನ್ನಾಭರಣದ ಅಂಗಡಿಗಳಿದ್ದವು. ಆತ ನಮಗೆ ಅಷ್ಟಕ್ಕೇ ಬಿಡಲಿಲ್ಲ. ನಾವು ಹಿಂತಿರುಗಿ ಬರುವಾಗ ಆತನ ಮನೆಗೆ ಊಟಕ್ಕೆ ಬರುವಂತೆ ವಿನಂತಿಸಿಕೊಂಡ. ನಮಗೂ ಸರಿ ಅನಿಸಿತು. ಓಮಾನಿಯ ಮನೆ, ಅತಿಥಿ ಸತ್ಕಾರ, ಭೋಜನ, ಅಲ್ಲಿಯ ವಾತಾವರಣ ಇತ್ಯಾದಿ ಹತ್ತಿರದಿಂದ ನೋಡುವ ಎಂದು ಎಲ್ಲರೂ ಸರಿಯೆಂದು ಒಪ್ಪಿಕೊಂಡೆವು. ಆತನಿಗೆ ಸಂತೋಷವಾಯಿತು. ತನ್ನ ವಿಳಾಸ, ಫೋನ್ ನಂಬ್ರ ಇತ್ಯಾದಿ ನೀಡಿದ.

ನಾವು ಒಂದು ಪಾರ್ಕಿನಲ್ಲಿ ನಿಂತು ನಮ್ಮ ಊಟ ಮುಗಿಸಿದೆವು. ಕೆಲವರು ಚಿಕ್ಕ ನಿದ್ರೆಯೂ ಮಾಡಿದರು. ಒಂದು ತಾಸು ಬಿಟ್ಟು ಮತ್ತೆ ಹೊರಟೆವು. ಆ ನಗು, ಹಾಸ್ಯ ಲವಲವಿಕೆ, ಉತ್ಸಾಹ ಬತ್ತದೆ ಉಳಿದಿತ್ತು.

ಸುಮಾರು ಇನ್ನೂರು ಕಿ.ಮೀ. ಕ್ರಮಿಸಿರಬಹುದು. ಒಂದೆಡೆ ರಸ್ತೆಯ ಪಕ್ಕ ಜನರು ಗುಂಪುಗೂಡಿದ್ದರು. ಪೊಲೀಸರು ಇದ್ದರು. ನಾವು ಕಾರು ನಿಲ್ಲಿಸಿದೆವು. ಒಂದು ದೊಡ್ಡ ಟ್ರಕ್ಕಿಗೆ ಕಾರು ಬಡಿದು ಅಪ್ಪಚ್ಚಿಯಾಗಿತ್ತು. ಪಕ್ಕದಲ್ಲಿ ಮೂರು ಮೃತ ದೇಹಗಳನ್ನು ಬಿಳಿ ಬಟ್ಟೆಗಳನ್ನು ಹಾಸಿ ಮಲಗಿಸಿದ್ದರು. ನಾವು ಇನ್ನಷ್ಟು ಹತ್ತಿರಕ್ಕೆ ಹೋದೆವು. ಅದೇ ಓಮಾನಿಯ ಕಾರು! ಅದೇ ಸಂಸಾರ!!

ಮುಖಕ್ಕೆ ಬಟ್ಟೆ ಹಾಸಿರುವ ಕಾರಣ ಮುಖದ ದರ್ಶನವಾಗಲಿಲ್ಲ. ಆದರೆ ಆ ಸಜ್ಜನ ವ್ಯಕ್ತಿಯ ಮಾತು, ನಗು, ಪ್ರೀತಿ ಕಣ್ಣ ಮುಂದೆಯೇ ತುಂಬಿಕೊಂಡಿತ್ತು. ಅಷ್ಟರಲ್ಲಿ ಅಂಬುಲೆನ್ಸ್ ಬಂತು. ನಾವು ಮಾತೇ ಹೊರಡದೆ ಕಲ್ಲಾಗಿ ನಿಂತು ಬಿಟ್ಟಿದ್ದೆವು. ಪೊಲೀಸರು ನಮ್ಮನ್ನು ದೂರಕ್ಕೆ ಸರಿಸಿದರು.

ಕೆಲವೇ ನಿಮಿಷಗಳಲ್ಲಿ ಹೆಣಗಳನ್ನು ಹೊತ್ತ ಅಂಬುಲೆನ್ಸ್ ಹೊರಡಿತು. ನಾವು ಮಾತ್ರ ಸಾವಿನ ಅಟ್ಟಹಾಸವನ್ನು ನೋಡುತ್ತಾ ಮರುಗಿದೆವು. ನಮಗೆ ಮತ್ತೆ ಓಮಾನಿನತ್ತ ಹೊರಡಲು ಮನಸ್ಸಾಗಲಿಲ್ಲ. ಅಲ್ಲಿಂದಲೇ ದುಬ್ಯಾಗೆ ಹಿಂತಿರುಗಿದೆವು. ■

ಅತ್ತೆ-ಸೊಸೆ ಜಗಳ ಯಾರು ಕಾರಣ?

ಡಾ| ಉಮರ್ ಫಾರೂಕ್

'ಅತ್ತೆ-ಸೊಸೆ ಜಗಳ' ಎಂಬುದು ನಮಗೆ ಸುಪರಿಚಿತವಾದ ಪದವಾಗಿದೆ. ಮದುವೆಯ ಮೊದಲು ಅಮ್ಮನೇ ಸರ್ವಸ್ವವಾಗಿದ್ದ ಮಗನು ಮದುವೆಯ ಬಳಿಕ ಇನ್ನೋರ್ವ ಹೆಣ್ಣಿಗೆ ಅವಕಾಶಗಳನ್ನು ನೀಡುವಾಗ ಉಂಟಾಗುವ ಮಾನಸಿಕ ಅಸ್ವಸ್ಥತೆ ಹಲವೊಮ್ಮೆ ಅತಿರೇಕಕ್ಕೆ ತಲುಪುತ್ತದೆ. ತಾನು ಒಂಬತ್ತು ತಿಂಗಳು ಹೊತ್ತು, ಕಷ್ಟಪಟ್ಟು ಹೆತ್ತು, ಪ್ರೀತಿ-ವಾತ್ಸಲ್ಯದಿಂದ ಬೆಳೆಸಿದ ಮಗನು ಒಂದು ಸುಪ್ರಭಾತದಲ್ಲಿ ತನ್ನ ಪ್ರೀತಿ-ವಾತ್ಸಲ್ಯವನ್ನು ಇನ್ನೋರ್ವ ಹೆಣ್ಣಿಗೆ ನೀಡುವುದು ಹಲವು ಅಮ್ಮಂದಿರಿಗೆ ಅರಗಿಸಿ ಕೊಳ್ಳಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಸೊಸೆಯರೊಂದಿಗೆ ದ್ವೇಷ ಸಾಧಿಸುವ, ಅವಳು ಯಾವುದಕ್ಕೂ ಪ್ರಯೋಜನವಿಲ್ಲದವಳೆಂದು ಮಗ ಹಾಗೂ ಮನೆ ಮಂದಿಯೊಂದಿಗೆ ಸಾಬೀತು ಪಡಿಸಲು ಇಂಥವರು ಹೆಣಗಾಡುವುದನ್ನು ಕಾಣಬಹುದು. ಇದನ್ನು ಸಹಿಸದ ಸೊಸೆ, ಅತ್ತೆಯೊಂದಿಗೆ ದ್ವೇಷ ಸಾಧಿಸಲು ಆರಂಭಿಸುತ್ತಾಳೆ.

ಮನ್ಸೂರ ಬಾಲ್ಯದಲ್ಲೇ ಬಹಳ ಸಾಧು ಸ್ವಭಾವದವಳಾಗಿದ್ದಳು. ಯಾರಾದರೂ ಆಕೆ ಇಷ್ಟಪಡದ ವಿಷಯವನ್ನು ಹೇಳಿದರೆ? ಅವಳು ಆ ದಿನವನ್ನು ಅಳುತ್ತಲೇ ಕಳೆಯುತ್ತಾಳೆ. ಎರಡು ತಿಂಗಳ ಹಿಂದೆ ಝುಬೈರ್ ಎಂಬ ಯುವಕ ಅವಳನ್ನು ವಿವಾಹವಾದ. ಅವನು ಬೆಂಗಳೂರಿನಲ್ಲಿ ಒಂದು ಸಣ್ಣ ವ್ಯಾಪಾರಿಯಾಗಿದ್ದ. ತಂದೆಗೆ ವಯಸ್ಸಾದ ನಂತರ ಅವನೇ ವ್ಯಾಪಾರ ನೋಡಿಕೊಳ್ಳುತ್ತಿದ್ದ. ಮದುವೆಯ ಕೆಲವೇ ದಿನಗಳಲ್ಲಿ ಅವನು ಬೆಂಗಳೂರಿಗೆ ಮರಳಿದ. ವ್ಯಾಪಾರಕ್ಕಾಗಿ ಅವನ ತಂದೆ-ತಾಯಿ ನಿರ್ಬಂಧಿಸಿ ಅವನನ್ನು ಕಳಿಸಿದ್ದರು. ಹೀಗೆ ಹೋಗಿ ಒಂದು ತಿಂಗಳಾಗುವಷ್ಟರಲ್ಲಿ ಅವನು ಮರಳಿದ. ಸಾಮಾನ್ಯವಾಗಿ ವರ್ಷಕ್ಕೆರಡು ಬಾರಿ ಬರುತ್ತಿದ್ದ ಮಗ ಬೇಗನೇ ಮರಳಿದ್ದು ಹೆತ್ತವರಿಗೆ ಇಷ್ಟವಾಗಲಿಲ್ಲ. ವಿಶೇಷವಾಗಿ ಅಮ್ಮನಿಗೆ ರುಚಿಸಲೇ ಇಲ್ಲ. ನಿನ್ನ ಕಾರಣದಿಂದಾಗಿ ಅವನಿಗೆ ಅಲ್ಲಿ ನಿಲ್ಲಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿ ಸೊಸೆಯ ಮೇಲೆ ರೇಗುವುದು ವಾಡಿಕೆಯಾಯಿತು. ನೀನು ಕೂಡಲೇ ಅವನನ್ನು ಅಲ್ಲಿಗೆ ಕಳಿಸಬೇಕೆಂಬ ಆದೇಶ ಬೇರೆ. ಇದರಿಂದ ಆಕೆ ಅವನನ್ನು ಒತ್ತಾಯಿಸಿದಳು. ಹೀಗೂ ಎರಡ್ಮೂರು ದಿನಗಳಲ್ಲಿ ಅವನು ಮರಳಿ ಬೆಂಗಳೂರಿಗೆ ಹೋದ.

ನಂತರ, ಅಮ್ಮನ ಚುಚ್ಚುಮಾತು, ತೆಗಳಿಕೆ, ಎಳೆಯ ಮನದ ಒಡತಿಯಾದ

ಪ್ರಪಂಚದ ಶ್ರೇಷ್ಠ ವ್ಯಕ್ತಿಗಳೆಲ್ಲರೂ ಶ್ರೇಷ್ಠ ತಾಯಂದಿರಿಗೆ ಹುಟ್ಟಿದವರು

ಮನ್ಸೂರಳಿಗೆ ಪದೇ ಪದೇ ಪ್ರಜ್ಞಾಶೂನ್ಯ ಳಾಗುವ ಹಾಗೆ ಮಾಡಿತು. ತಾನು ಗಂಡನನ್ನು ನಿರ್ಬಂಧಿಸಿ ಕಳಿಸಿದ್ದು ಆತನ ಮನಸ್ಸನ್ನು ನೋಯಿಸಿದೆಯೆಂಬ ಭಾವನೆ ಪದೇ ಪದೇ ಕಾಡುತ್ತಿತ್ತು. ಹಾಗೆ ಮಾಡದಿದ್ದರೆ ತಾನು ಈ ಮನೆಯಲ್ಲಿ ವಾಸಿಸುವುದು ಅಸಾಧ್ಯ ಎಂದೂ ಅರ್ಥವಾಗಿತ್ತು. ಪತಿಯನ್ನು ನಿರ್ಬಂಧಿಸಿ ಕಳಿಸಿದ್ದಕ್ಕೆ ತಪ್ಪಿತಸ್ಥ ಮನೋ ಭಾವ ಹಾಗೂ ಅತ್ತೆಯ ಚುಚ್ಚುಮಾತುಗಳು ಮುಂತಾದ ಮಾನಸಿಕ ಸಂಘರ್ಷವು ಅತಿಯಾಗಿ ಅದರಿಂದ ಮುಕ್ತಿಗೊಳ್ಳಲು ಮನಸ್ಸು ಮಾಡುತ್ತಿದ್ದ ಒಂದು ರೀತಿಯ ಆಟವಾಗಿತ್ತು, ಈ ಮೂರ್ಛೆ ಹೋಗುವಿಕೆ. ಪ್ರಜ್ಞಾಶೂನ್ಯಳಾಗಿ ದೇಹವು ವಿವಶಳಾಗಿದ್ದ ಆಕೆಯನ್ನು ನನ್ನ ಕೋಣೆಗೆ ಕರೆತರಲಾಯಿತು.

ಕೆಲವೇ ನಿಮಿಷಗಳಲ್ಲಿ ಪ್ರಜ್ಞೆ ಮರಳಿ ಬಂದು ಉಲ್ಲಾಸದಲ್ಲಿರುವಂತೆ ತೋರಿತು. ಹಲವು ಸಲ ಇಂತಹದ್ದಕ್ಕೆ ಅಪಸ್ಮಾರ ಎಂದು ತಿಳಿದು ಚಿಕಿತ್ಸೆ ನೀಡುವುದಿದೆ. ಆದರೆ, ಒತ್ತಡ ಹೆಚ್ಚಾಗುವಾಗ, ಅದರಿಂದ ಮುಕ್ತಿ ಹೊಂದಲು ಜಾಗೃತ ಮನಸ್ಸು ಮಾಡುವ ವಿದ್ಯೆಯಿದು. ಇದರಿಂದ ಪ್ರಜ್ಞೆ ಬೇಗನೇ ಮರಳಿ ಬಂದು ಪೂರ್ವಸ್ಥಿತಿಗೆ ತಲುಪಲು ಸಾಧ್ಯವಾಗುತ್ತದೆ. ಕೆಲವರಲ್ಲಿ ಇದು ರಕ್ತ ವನ್ನೂ ಕಾಣುವಾಗ, ಇನ್ನು ಕೆಲವರಿಗೆ ಶವ ವನ್ನು ನೋಡುವಾಗಲೂ ಉಂಟಾಗುತ್ತದೆ.

ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಬಿಜು ಹೆತ್ತವರಿಗೆ ಒಬ್ಬನೇ ಮಗ. ತಾಯಿಯ ಪ್ರೀತಿಯ ಪುತ್ಥಳಿ. ಅವನಿಗೂ ತಾಯಿ ಯೆಂದರೆ ಬಹಳ ಪ್ರೀತಿ. ಅವನ ಎಲ್ಲಾ ವಿಷಯಗಳಲ್ಲೂ ಅಮ್ಮ ಅತೀವ ಕಾಳಜಿ ವಹಿಸುತ್ತಿದ್ದರು. ಅವನಿಗೆ ವಿವಾಹ ಪ್ರಾಯವಾದಾಗ ತಾಯಿಯು ಅವನ ವಿವಾಹ ಕಾರ್ಯ ಮುಗಿಸಬೇಕೆಂದು ನಿರ್ಧರಿಸಿದರು.

ಆದರೆ, ಮದುವೆಯಾಗಿ ಕೆಲವೇ ದಿನಗಳಲ್ಲಿ ತಾಯಿಯ ಸ್ವಭಾವ ಬದ ಲಾಯಿತು. ಮಗನ ಯಾವುದೇ ಕೆಲಸವೂ ತಾಯಿಗೆ ಇಷ್ಟವಾಗಲಿಲ್ಲ. ಪತ್ನಿಯೊಂದಿಗೆ ನಡೆಯುವುದು, ಮಾತನಾಡುವುದು ಕೂಡಾ ಸಹಿಸದಾದರು. ಇಷ್ಟು ವರ್ಷ ತನ್ನದಾಗಿದ್ದ ಮಗನು ತನ್ನಿಂದ ದೂರವಾಗುತ್ತಿರುವಂತೆ ಅನಿಸಿ, ಮಾನಸಿಕವಾಗಿ ಕುಗ್ಗಿದರು. ಹೀಗಿರುವಾಗ ಸೊಸೆಯನ್ನು ಕಾಣುವುದೇ ಇಷ್ಟವಿರಲಿಲ್ಲ. ಅವಳು ಇಟ್ಟದ್ದು ಮುಟ್ಟಿದ್ದು ಎಲ್ಲದಕ್ಕೂ ತೆಗಳಿಕೆ ಹಾಗೂ ಚುಚ್ಚು ಮಾತುಗಳು. ಇದನ್ನು ಸಹಿಸಲು ಸಾಧ್ಯವಾಗದ ಸೊಸೆಯೂ ಜಗಳಕ್ಕೆ ನಿಂತಳು. ಇಬ್ಬರ ಜಗಳ ದಿನೇ ದಿನೇ ಹೆಚ್ಚಿತು. ಮನೆಯಲ್ಲಿ ಶಾಂತಿಯೆಂಬುದು ಮರೀಚಿಕೆ ಯಾಯಿತು. ಸಹನೆಗೆಟ್ಟ ಬಿಜು ಮತ್ತು ತಂದೆಯೂ ಮಧ್ಯೆ ಪ್ರವೇಶಿಸಲಾರಂಭಿಸಿದರು. ಆದರೆ ಗದ್ದಲ, ತೀವ್ರವಾಯಿತಲ್ಲದೆ ಕಡಿಮೆಗೊಳಿಸಲು ಸಾಧ್ಯವಾಗಲಿಲ್ಲ. ಕ್ರಮೇಣ ಬಿಜು ಮತ್ತು ಪತ್ನಿ ಒಂದು ಕಡೆ, ತಂದೆ-ತಾಯಿ ಇನ್ನೊಂದು ಕಡೆಯಾಗಿ ಜಗಳ ಮುಂದುವರಿಯಿತು.

ಇಲ್ಲಿ ಅತ್ತೆಯಂದಿರು ಹಾಗೂ ಸೊಸೆಯಂದಿರು ತಿಳಿದಿರಬೇಕಾದ ಕೆಲವು ಗಮನಾರ್ಹ ವಿಚಾರಗಳನ್ನು ತಿಳಿಸುತ್ತೇನೆ. ಸಾಮಾನ್ಯವಾಗಿ ಇಂತಹ ಸಮಸ್ಯೆಗಳು ಅಮ್ಮಂದಿರಿಂದಲೇ ಆರಂಭವಾಗುತ್ತದೆ. ಮೇಲೆ ತಿಳಿಸಿದ ಎರಡು ಘಟನೆಗಳು ಇದನ್ನೇ ಸೂಚಿಸುತ್ತದೆ. ಇದಕ್ಕೆ ಸ್ಪಷ್ಟವಾದ ಕಾರಣಗಳಿವೆ. ತಾಯಂದಿರಿಗೆ ವಿಶೇಷವಾಗಿ ಗಂಡು ಮಕ್ಕಳಲ್ಲಿ ಕಾಳಜಿ ಹಾಗೂ ಪ್ರೀತಿ ಅಧಿಕವಾಗಿರುತ್ತದೆ. ಆದ್ದರಿಂದಲೇ ಮದುವೆಯ ಮೊದಲು ಅವನ ಕೆಲಸ ಕಾರ್ಯಗಳ ಕುರಿತು ಕಾಳಜಿ ವಹಿಸಿ, ಅವನಿಗಾಗಿ ಅದೆಷ್ಟು ಸಮಯವನ್ನು



ವ್ಯಯಿಸಲು ಸಿದ್ಧರಾಗಿರುತ್ತಾರೆ. ಇದರಿಂದ ಮಗನಿಗೆ ಅಮ್ಮಂದಿರ ಮೇಲೆ ಹೆಚ್ಚು ಪ್ರೀತಿಯಿರುತ್ತದೆ. ಹೀಗಿರುವಾಗ, ಒಂದು ಪ್ರಭಾತದಲ್ಲಿ ಅವನ ಕಾರ್ಯಗಳನ್ನು ಅತೀವ ಕಾಳಜಿಯಿಂದ ಗಮನಿಸುವ, ಅವಳ ಕುರಿತು ಅವನು ಅತಿಯಾಗಿ ಕಾಳಜಿ ತೋರುವುದು ಅಥವಾ ತಾಯಿಗಿಂತ ಪ್ರೀತಿ-ಸ್ನೇಹವನ್ನು ಅವಳಿಗೆ ನೀಡುವಾಗ ಅಥವಾ ಹಾಗೆ ಅನಿಸುವಾಗ ಸಾಮಾನ್ಯ ಸ್ತ್ರೀಯರಲ್ಲಿ ಸಣ್ಣ ಮಟ್ಟಿಗೆ ಅಸಮಾಧಾನ ಗೋಚರಿಸುತ್ತದೆ. ಇದನ್ನು ಅತ್ಯಂತ ವಿನಯದಿಂದ ಎದುರಿಸಿದರೆ, ದೊಡ್ಡ ಗಂಡಾಂತರದಿಂದ ಪಾರಾಗಬಹುದು. ಇಷ್ಟು ವರ್ಷ ಪ್ರೇಮ-ವಾತ್ಸಲ್ಯವನ್ನು ಧಾರೆಯೆರೆದು ಬೆಳೆಸಿದ ಅಮ್ಮನಿಂದ ದೂರವಾಗದೆ, ಮೊದಲಿಗಿಂತ ತುಸು ಹೆಚ್ಚೇ ಪ್ರೀತಿ ತೋರಿಸುವುದು ಅತೀ ಮುಖ್ಯವಾದುದು. ಇದರಿಂದ ಮಗನ ದಾಂಪತ್ಯ ಜೀವನಕ್ಕೆ ಯಾವುದೇ ತೊಂದರೆ ಯಾಗದು. ಅಲ್ಲದೆ ಸೊಸೆಯು, ಅಮ್ಮನ ಬಗ್ಗೆ ಕಾಳಜಿ ತೋರಿಸಿ, ತನ್ನ ಪತಿ ಮೊದಲು ಅಮ್ಮನ ಮಗನೆಂಬುದನ್ನು ಒಪ್ಪಿಕೊಂಡು ಅವನಲ್ಲಿ ಹಕ್ಕು ಹಾಗೂ ಅಧಿಕಾರ ತಾಯಿಗಿದೆಯೆಂಬುದನ್ನು ತಿಳಿದು ವ್ಯವಹರಿಸಿ ದರೆ, ಅತ್ತೆ-ಸೊಸೆ ಜಗಳವೆಂಬ ಈ ಪೆಡಂಭೂತವನ್ನು ಕಡಿಮೆಗೊಳಿಸಲು ಸಾಧ್ಯ.

ಅತ್ತೆ-ಸೊಸೆ ಜಗಳಕ್ಕೆ ಅತ್ತೆಯೇ ಕಾರಣ ಎಂಬ ಮಾತೂ ಸರಿಯಲ್ಲ. ಹಲವೊಮ್ಮೆ ವಿಷಯ ಇದಕ್ಕೆ ವಿರುದ್ಧವಾಗಿರುತ್ತದೆ. ರುಖಿಯಳ ಘಟನೆಯು ಇದಕ್ಕೆ ಉದಾ ಹರಣೆಯಾಗಿದೆ. ಒಮ್ಮೆ ಮಗ ಮತ್ತು ಸೊಸೆಯೊಂದಿಗೆ ರುಕಿಯ ನನ್ನ ಕ್ಲಿನಿಕ್‌ಗೆ ಬಂದರು. ಈ ಅಮ್ಮನಿಂದಾಗಿ ಸುಖಮಯ ಜೀವನ ಸಾಧ್ಯವಾಗುತ್ತಿಲ್ಲವೆಂಬುದು ದಂಪತಿ ಗಳ ಅಳಲು. ಆದರೆ ತಾಯಿಯ ವಾದವೇ ಬೇರೆ. "ಮದುವೆಯಾಗಿ ಇವಳು ಮನೆಗೆ ಕಾಲಿಟ್ಟಂದಿನಿಂದ ಶಾಂತಿಮಯ ಜೀವನ ಮಾಯವಾಗಿದೆ. ಈಗ ಇವನಿಗೆ ಇವಳೇ ಎಲ್ಲಾ. ಮೊದಲು ನಾನು ಹೇಳಿದ ಮಾತನ್ನು ಈತ ಅನುಸರಿಸುತ್ತಿದ್ದ. ಆದರೆ ಈಗ ಅನುಸರಿಸುವುದಿಲ್ಲ. ಮಾತ್ರವಲ್ಲ, ಇವಳ ಮುಂದೆ ನನ್ನ ಬಗ್ಗೆ ಕೆಟ್ಟದಾಗಿ ಮಾತಾಡು

ತ್ತಾನೆ. ಇವನ ತಂದೆಯ ನಿಧನದ ಬಳಿಕ ಇವನೇ ನನ್ನ ನಿರೀಕ್ಷೆ ಹಾಗೂ ಸರ್ವಸ್ವ. ಯೌವನದಲ್ಲೇ ವಿಧವೆಯಾದ ನಾನು ಇವನಿಗಾಗಿಯೇ ಬದುಕಿದ್ದೆ. ಆದರೆ ಅವನಿಗೆ ಈಗ ಅದೆಲ್ಲಾ ಮರೆತಿದೆ. ಇವಳ ದರ್ಪದ ಮಾತುಗಳನ್ನು ಕೇಳುವಾಗ ನಾನು ಅಡುಗೆ ಮನೆಯ ಕೆಲಸದಾಳೋ ಎಂದೆನಿಸುತ್ತದೆ. ಅವರಿಬ್ಬರು ಒಟ್ಟಾಗಿ ಶಾಪಿಂಗ್ ಅಥವಾ ಮದುವೆಗೆ ಹೋಗುವಾಗ ನನ್ನನ್ನು ಜೊತೆಗೆ ಕರೆದೊಯ್ಯುವುದಿಲ್ಲ. ಮಾತ್ರವಲ್ಲ 'ಬರುತ್ತೀರಾ?' ಎಂದು ಕೇಳುವುದೂ ಇಲ್ಲ. ಎರಡು ವಾರಗಳ ಹಿಂದೆ ನನ್ನ ಸಮೀಪದ ಸಂಬಂಧಿಕನ ಮದುವೆಗೆ ನನ್ನಲ್ಲಿ ಹೇಳದೆ, ವಿಚಾರಿಸದೆ ಇವರು ಕಾರಿನಲ್ಲಿ ಹತ್ತಿ ಹೋದರು. ನಾನು ಹೋಗಲೇಬೇಕಾಗಿದ್ದ ಮದುವೆಯಾದ್ದರಿಂದ ನಾನು ನಂತರ ಬಸ್ಸಿನಲ್ಲಿ ಹೋಗಬೇಕಾಯಿತು."

ದುಃಖ ಹಾಗೂ ನೋವಿನಿಂದ ತುಂಬಿದ ಮಾತುಗಳ ನಡುವೆ ಅಮ್ಮನ ಕಣ್ಣಿನಿಂದ ಕಣ್ಣೀರು ಬರುತ್ತಿತ್ತು. ಸ್ನೇಹಸಂಪನ್ನಳಾದ ಓರ್ವ ಅಮ್ಮ. ಆದರೆ ಸೊಸೆಯ ಮಾತು ಗಮನಿಸಿ. ಅದು ಅತಿ ವಿಚಿತ್ರವಾಗಿದ್ದು, ಹೊಸ ತಲೆಮಾರಿನ ಮನೋಸ್ಥಿತಿಯನ್ನು ಬಹಿರಂಗ ಪಡಿಸುತ್ತದೆ. "ಮದುವೆ ಮುಗಿಸಿದ ಬಳಿಕ ವಾದರೂ ಮಗನಿಗೆ ಸ್ವಾತಂತ್ರ್ಯ ನೀಡ ಬಾರದೇ? ಏಕೆ ಅವನನ್ನು ನಿಯಂತ್ರಿಸುವುದು? ಅದು ಒಳ್ಳೆಯ ವಿಚಾರವಾ? ನನ್ನ ಪತಿಯಿಂದ ನನಗೆ ಹಕ್ಕುಗಳಿಲ್ಲವೇ? ಯಾವಾಗಲೂ ಆ ಸ್ತ್ರೀ ಹೇಳಿದಂತೆ ಕೇಳಿದರೆ ನಮಗೆ ಜೀವನವಿದೆಯಾ?"

ಆ ಸ್ತ್ರೀ, ಆ ಮಹಿಳೆ ಎಂದು ಆಗಾಗ ಆಕೆ ಹೇಳುವುದು ಕೇಳುವಾಗ ಸಂಕಟ ವೆನಿಸುತ್ತಿತ್ತು. ಆ ಸ್ತ್ರೀ ಎಂದರೆ ಯಾರು? ಪತಿಯನ್ನು ಯೌವನದಲ್ಲಿ ಕಳಕೊಂಡು ತನ್ನ ಯೌವನವನ್ನೂ, ಜೀವನವನ್ನೂ ಮಗನಿಗಾಗಿ ಸವೆಸಿದ ಅವನಿಗೆ ಹಿತವನ್ನೇ ಬಯಸಿದ ಅವನ ಹೆತ್ತವ್ವ. ಇವರಿಗೆ ಏನೂ ಆಗದಿದ್ದರೆ ಸುಮ್ಮನೆ ಬಾಯಿ ಮುಚ್ಚಿ ಕುಳಿತುಕೊಳ್ಳಬಹುದಲ್ಲವೇ? ಇಲ್ಲದಿದ್ದರೆ ಬೇರೆ ಯಾವುದಾದರೂ ಸಂಬಂಧಿಕರ ಮನೆಯಲ್ಲಿರಬಹುದಲ್ವಾ? ಅಮ್ಮನನ್ನು

ಸಮಾನ ಅಂಶ

ಟೀಚರ್: ಬುದ್ಧ, ಗಾಂಧಿ, ಏಸುಕ್ರಿಸ್ತರ ನಡುವೆ ಇರುವ ಸಮಾನ ಅಂಶಗಳು ಯಾವುವು?

ವಿದ್ಯಾರ್ಥಿ: ಇವರೆಲ್ಲರೂ ಸರಕಾರಿ ರಜಾದಿನಗಳಲ್ಲಿ ಹುಟ್ಟಿದರು.

ಚೆನ್ನಾಗಿ ಅರ್ಥೈಸಿಕೊಂಡು ಅಮ್ಮನ ಪೂರ್ವಾಪರ ಚರಿತ್ರೆಯನ್ನು ಅವಳ ಮುಂದಿಡಬೇಕಾದ ಮಗನೇ ಅದಕ್ಕೆ ವಿರೋಧವಾಗಿ ವರ್ತಿಸುವುದಾದರೆ, ಆ ರುಖಿಯಮ್ಮ ಹೇಗೆ ತಾಳಿಯಾಳು? ಅಮ್ಮನನ್ನು ಅರಿತು, ಅರ್ಥಮಾಡಿಕೊಂಡು ಪ್ರೀತಿಯಿಂದ ವ್ಯವಹರಿಸಿದರೆ, ರುಖಿಯಮ್ಮ ಅದೆಷ್ಟು ಉತ್ತಮ ಅಮ್ಮನಾಗಿರಬಹುದು?

ಇಂತಹ ಕೆಲವು ಸೊಸೆಯಂದಿರ ಕೆಟ್ಟ ಸ್ವಭಾವ ಹಾಗೂ ದೌರ್ಬಲ್ಯವೂ, ಅನುಭವದ ಕೊರತೆಯೂ ಶಾಂತಿ-ಸಮಾಧಾನದ ಮನೆಯನ್ನು ಅಶಾಂತಿ ನಿಲಯವನ್ನಾಗಿಸುತ್ತದೆ. ಇಲ್ಲಿ ಪತ್ನಿ ಹಾಗೂ ಮದುವೆಯಾಗಲಿರುವ ಯುವತಿಯೊಡನೆ ನನ್ನ ಕಿವಿಮಾತು ಏನೆಂದರೆ, ನೀವು ವಿಷಯ ತಿಳಿಯದೆ ಮಕ್ಕಳಾಟವಾಡಬೇಡಿ ಎಂಬುದು. ನಾಳೆ ನೀವೂ ಅಮ್ಮಂದಿರಾಗುವವರು. ಆಗ ನಿಮಗೆ ಅಮ್ಮಂದಿರ ಮನೋಸ್ಥಿತಿ ಚೆನ್ನಾಗಿ ಅರ್ಥವಾಗುತ್ತದೆ. ಅಮ್ಮಂದಿರ ಪ್ರೀತಿಯೆಂದರೇನು? ಅಮ್ಮಂದಿರ ಮನಸ್ಸನ್ನು ಅರಿಯುವ ಯಾರಿಗೂ ಅಮ್ಮಂದಿರನ್ನು ದ್ವೇಷಿಸಲು, ತೆಗಳಲು ಸಾಧ್ಯವಾಗದು. ಅಮ್ಮನೆಂದರೆ ಕರುಣೆಯ ವೃಕ್ಷ. ಸ್ವಯಂ ಬಿಸಿಲಿಗೆ ಮೈಯೊಡ್ಡಿ ಇತರರಿಗೆ ನೆರಳು ನೀಡುತ್ತಾಳೆ. ಒಂದು ಮನೆಯಲ್ಲಿ ಅಮ್ಮನ ಪ್ರೀತಿಯಿಂದ ದೊರೆಯುವ ಶಾಂತಿ-ಸಮಾಧಾನ ಅನುಭವಿಸಿದವರಿಗೆ ಮಾತ್ರ ಅರ್ಥವಾದೀತು.

ಪ್ರೀತಿಯನ್ನು ನೀಡಿ ಪ್ರೀತಿಯನ್ನು ಪಡೆಯುವುದು ಎಂಬುದು ಅಮ್ಮನ ಕಾರ್ಯದಲ್ಲಿ ಅಪರಿಚಿತವಾಗಿದೆ. ಇದನ್ನು ಅರ್ಥಮಾಡಿಕೊಂಡರೆ ಜೀವನ ಸಂತಸ ಮಯವಾಗುವುದು. ಅಮ್ಮನನ್ನು ಪ್ರೀತಿಸಿ, ಅವಳನ್ನು ಅರ್ಥಮಾಡಿದರೆ, ಅದರ ಇಮ್ಮಡಿ ಪ್ರೀತಿಯು ಆಕೆಯಿಂದ ಲಭಿಸುತ್ತದೆ. ಬದಲಾಗಿ ನಾವು ದಂಪತಿಗಳು, ನಮಗೆ ಮಾತ್ರ ಪರಸ್ಪರ ಹಕ್ಕುಬಾಧ್ಯತೆಗಳಿರುವುದು. ನಮ್ಮ ನಂತರವೇ ಹೆತ್ತವರಿಗೆ ಸ್ಥಾನ ವಿರುವುದೆಂಬ ಆಲೋಚನೆಯು ಸರಿಯಲ್ಲ. ನಿಮ್ಮ ಹಕ್ಕು ಅಧಿಕಾರ ಬೇರೆಯೇ. ಹೆತ್ತವರ, ಸಹೋದರ-ಸಹೋದರಿಯರದೇ ಬೇರೆ. ಆದ್ದರಿಂದ ಹಕ್ಕು ಹಾಗೂ ಅಧಿಕಾರಕ್ಕೆ ಇಲ್ಲಿ ಸ್ಥಾನವಿಲ್ಲ. ತಿಳುವಳಿಕೆಯ ಕೊರತೆ ಇದಕ್ಕೆ ಕಾರಣ. ಮದುವೆಯಾದರೆ, ತಾಯಿ ಹಾಗೂ ಸಹೋದರಿಯರಿಂದ ದೂರವಾಗ ಬೇಕು ಎಂದು ಭಾವಿಸುವವರಿಗೂ ನಮ್ಮಲ್ಲಿ ಕೊರತೆಯಿಲ್ಲ. ಅವರ ವರ್ತನೆ, ಚಿಂತನೆ ಅದೇ ರೀತಿಯಲ್ಲಿರುತ್ತದೆ. ಮದುವೆಯಾದ ಬಳಿಕ ಒಬ್ಬ ಸಹೋದರಿಯ ಮನೆಗೆ ಹೋಗುವುದು, ಅಲ್ಲಿ ಸಹೋದರಿಯ ಮಗಳೊಂದಿಗೆ ಪ್ರೀತಿ-ವಾತ್ಸಲ್ಯ ತೋರುವುದನ್ನು ಸಹಿಸದ, ಅದುವೇ ದೊಡ್ಡ ಸಮಸ್ಯೆಯಾಗಿ ಕಾಡಿ ನನ್ನನ್ನು ಭೇಟಿಯಾದವರೂ ಇದ್ದಾರೆ.

ಪರಸ್ಪರ ಪ್ರೀತಿಸಿ, ಒಪ್ಪಿಕೊಂಡು, ಅರ್ಥಮಾಡಿಕೊಂಡು ಐಕ್ಯದೊಂದಿಗೆ ತಾಯಿ-ಮಕ್ಕಳು ಬಾಳುವುದು ಒಂದು ಮಹಾ ಸೌಭಾಗ್ಯವಾಗಿದೆ. ಇದಕ್ಕೆ ಎರಡು ಕಡೆಯಿಂದಲೂ ಸಮಸ್ಯೆಯನ್ನು ಅರಿತು ವ್ಯವಹರಿಸುವ ಪ್ರಯತ್ನ ಅಗತ್ಯ. ಅಮ್ಮನಿಗೆ ಮಗನ ಮೇಲಿನ ಅಧಿಕಾರ, ಹಕ್ಕನ್ನು ಅವರಿಗೆ ಬಿಟ್ಟು ಕೊಟ್ಟು, ಪರಸ್ಪರ ತಾಳ್ಮೆಯಿಂದ ವ್ಯವಹರಿಸಿದರೆ, ನಿಜವಾಗಿಯೂ ಅತ್ತೆ-ಸೊಸೆ ಜಗಳವೆಂಬುದು ಹಳೆಯ ಕಾಲದ ಕಥೆ ಯಾಗುವುದು ಗ್ಯಾರಂಟಿ. ■

ನೀವೂ ದಾದಿಯರಾಗುತ್ತೀರಾ?

ಟಿ.ಎಸ್. ಕಾರ್ತಿಕ್

ನನ್ನ ಶಾಲಾ ದಿನಗಳಲ್ಲಿ ನಾನು ಫುಟ್‌ಬಾಲ್ ತಂಡದಲ್ಲಿ ಅತೀ ಹೆಚ್ಚು ಗೋಲುಗಳನ್ನು ಬಾರಿಸುವ ಹುಡುಗನಾಗಿದ್ದೆ. ಆಗ ನಾನು ಮೂರು ಬಾರಿ ಕೈಯ ಮೂಳೆ ತುಂಡರಿಸಿಕೊಂಡಿದ್ದೆ. ಆರಂಭದಲ್ಲಿ ಎಡಕೈ, ಬಲಕೈ, ಪುನಃ ಎಡಕೈ ಹಾಗೆ ಒಟ್ಟು ಮೂರು ಬಾರಿ ಅದೂ ಒಂದೇ ವರ್ಷದಲ್ಲಿ.

ಮೊದಲ ಬಾರಿ ಮೂಳೆ ಮುರಿತಕ್ಕೊಳಗಾದಾಗ ನಾನು ಸರಕಾರಿ ಆಸ್ಪತ್ರೆಗೆ ದಾಖಲಾಗಿದ್ದೆ. ಅಲ್ಲೋ ಬಿಳಿವಸ್ತ್ರದ ಆ ಮಹಿಳೆಯನ್ನು ಮೊದಲ ಬಾರಿ ಭೇಟಿಯಾದದ್ದು. ನೋವಿನಿಂದ ಕಿರುಚುತ್ತಿದ್ದ ನನ್ನ ಬಳಿಗೆ ಬಂದು ಆ ಮಹಿಳೆ "ಅಳಬೇಡ ಮಗು. ನಾನಿದ್ದೇನೆ ನೋಡು. ಎಲ್ಲವೂ ಸರಿ ಹೋಗುತ್ತದೆ" ಎಂದಾಗ ನಾನು ಬೊಬ್ಬೆ ನಿಲ್ಲಿಸಿದ್ದೆ. ಅವಳ ಹೃದಯ ತಟ್ಟುವ ಮಾತಿನ ಶೈಲಿಯು ನನ್ನ ನೋವನ್ನು ಮರೆಸಿ ಅಳು ನಿಲ್ಲಿಸುವಂತೆ ಮಾಡಿತ್ತು.

ಔಷಧ ಸೇವನೆಗಿಂತ ಮೊದಲು ದಾದಿಯರ ಆರೈಕೆ ಮುಖ್ಯ. ಅವರು ಸಮಾಜದಲ್ಲಿ ಬದಲಾವಣೆಯನ್ನುಂಟು ಮಾಡಬಲ್ಲರು. ಅವರು ದಿನದ ಇಪ್ಪತ್ತನಾಲ್ಕು ಗಂಟೆ ದಣಿವರಿಯದೆ ಕೆಲಸ ಮಾಡುತ್ತಾರೆ. ಅದು ಸಂಕೀರ್ಣ ಸ್ಥಿತಿಯಲ್ಲಿ ಐ.ಸಿ.ಯು.ನಲ್ಲಿರುವ ರೋಗಿಯ ಬಳಿಯಾಗಿರಬಹುದು. ರೋಗಿಗೆ ಸ್ಪಾಂಜ್‌ಬಾತ್ ನೀಡುವ ಕೆಲಸವಾಗಿರಬಹುದು. ಗಾಯ ತೊಳೆಯುವ ಕೆಲಸವಾಗಿರಬಹುದು. ಕೆಲಸ ಯಾವುದಾಗಿದ್ದರೂ ತಮ್ಮ ಹೃದಯಾಂತರಾಳದಿಂದ ಆ ಕೆಲಸವನ್ನು ಅವರು ಮಾಡುತ್ತಿರುತ್ತಾರೆ. ಅದೇ ರೀತಿ ಎಲ್ಲ ಪರಿಸ್ಥಿತಿಗಳಲ್ಲೂ ಸಮಚಿತ್ತತೆಯನ್ನು ಕಾಯ್ದುಕೊಳ್ಳುವ ಸಾಮರ್ಥ್ಯವನ್ನೂ ಅವರು ಗಳಿಸಿಕೊಂಡಿರುತ್ತಾರೆ. ಹೊಸ ಮಗುವನ್ನು ಈ ಭೂಮಿಗೆ ತರುವ ಸಂಭ್ರಮದ ಕ್ಷಣವಾಗಿರಬಹುದು ಅಥವಾ ರೋಗಿಯೊಬ್ಬ ಅಂತಿಮ ಕ್ಷಣವನ್ನೆಣಿಸುತ್ತಿರುವ ನೋವಿನ ಕ್ಷಣವಾಗಿರಬಹುದು. ಈ ಎಲ್ಲಾ ಪರಿಸ್ಥಿತಿಗಳನ್ನೂ ಅವರು ಬಹಳ ಸಹಜವಾಗಿ, ಎದೆಗಾರಿಕೆಯೊಂದಿಗೆ ಎದುರಿಸುತ್ತಾರೆ.

ನನ್ನ ಅಜ್ಜಿ ಒಮ್ಮೆ ಫಿಲ್ಮ್‌ಪ್ರೊಡ್ಯೂಸರ್ ಒಬ್ಬರ ಜೀವನದಲ್ಲಿ ನಡೆದ ಘಟನೆಯೊಂದನ್ನು ಹೇಳಿದ್ದರು. ಆ ವ್ಯಕ್ತಿಯನ್ನು ಹೃದಯಾಘಾತವಾಗಿದೆಯೆಂದು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ವೈದ್ಯರು ತಮ್ಮ ಕೈಲಾದ ಪ್ರಯತ್ನವನ್ನು ಮಾಡಿ ಕೊನೆಗೆ ಅಸಹಾಯಕತೆಯಿಂದ ವ್ಯಕ್ತಿ ಮೃತರಾಗಿದ್ದಾರೆಂದು ಘೋಷಿಸಿದರು. ಆದರೆ, ಅವರನ್ನು ನೋಡಿಕೊಳ್ಳುತ್ತಿದ್ದ ಹಿರಿಯ ದಾದಿಯೊಬ್ಬರು ಅದನ್ನು ಒಪ್ಪಿಕೊಳ್ಳಲು ಸಿದ್ಧರಾಗದೆ, ಒಂದು ಎತ್ತರದ ಸ್ಟೂಲಿನ ಮೇಲೆ ಕುಳಿತು ತಮ್ಮ ಪಾದದಿಂದ ಆ ವ್ಯಕ್ತಿಯ ಹೃದಯವಿರುವ ಜಾಗದಲ್ಲಿ ಒತ್ತಲಾರಂಭಿಸಿದರು. ಕೆಲವೇ ನಿಮಿಷಗಳಲ್ಲಿ ಹೃದಯಕ್ಕೆ ಜೋಡಿಸಿಟ್ಟ ಮ್ಯೂತ್ ಗ್ರಾಫ್ ಮಾನಿಟರ್ ವ್ಯಕ್ತಿಯು ಜೀವಂತವಾಗಿರುವುದನ್ನು ತೋರಿಸಲಾರಂಭಿಸಿತು. ಆ ವ್ಯಕ್ತಿಗೆ ಮರಳಿ ಜೀವನ ಸಿಕ್ಕಿದಂತಾಯಿತು.

ದಾದಿಯರು ಸಮಾಜದ ವಿವಿಧ ಸ್ತರಗಳ ವ್ಯಕ್ತಿಗಳೊಂದಿಗೆ ವ್ಯವಹರಿಸಬೇಕಾಗುತ್ತದೆ. ಆದರೆ ಪ್ರತಿಯೊಬ್ಬ ರೋಗಿಯೂ ಅವರ ಪಾಲಿಗೆ ಅತೀ ಪ್ರಾಮುಖ್ಯ ವ್ಯಕ್ತಿಗಳಾಗಿರುತ್ತಾರೆ. ಈ ಸಂಬಂಧ ಬಹಳ ವಿಶಿಷ್ಟ ಹಾಗೂ ಅನುಪಮವಾಗಿರುತ್ತದೆ. ರೋಗಿಯು ಸುದೀರ್ಘ ಸಮಯದವರೆಗೆ ಆಸ್ಪತ್ರೆಯಲ್ಲಿರಬೇಕಾದ ಸಂದರ್ಭಗಳಲ್ಲಿ ದಾದಿಯರಿಗೆ ರೋಗಿಯೊಂದಿಗೆ ವಿಶೇಷ ಕಾಳಜಿ ಹುಟ್ಟುತ್ತದೆ. ಆ ಸಂದರ್ಭಗಳಲ್ಲಿ ರೋಗಿಯ ತಮ್ಮ ಸಮೀಪದ ಸಂಬಂಧಿಗಳು ಮತ್ತು ಗೆಳೆಯರೊಂದಿಗೂ ಹಂಚಿಕೊಳ್ಳಲು ಸಾಧ್ಯವಾಗದ ರಹಸ್ಯಗಳನ್ನು ದಾದಿಯರೊಂದಿಗೆ ಹಂಚಿಕೊಳ್ಳುತ್ತಾರೆ. ದಾದಿಯರ ಜೀವನದಲ್ಲಿ ಸ್ವಲ್ಪ ಸಮಯಕ್ಕೆ ಬಂದು ಹೋಗುವ ರೋಗಿಗಳ ನೆನಪು ದಾದಿಯರಿಗೆ ಇಲ್ಲದೆ ಹೋಗಬಹುದು. ಆದರೆ ರೋಗಿಗಳಿಗೆ ಅವರ ಸೇವೆಯು ಜೀವನ ವಿಡೀ ನೆನಪಿನಲ್ಲಿರುತ್ತದೆ.

ನಿಮಗೆ ದಾದಿಯರಿಲ್ಲದ ಈ ಜಗತ್ತನ್ನು ಊಹಿಸಲಿಕ್ಕೆ ಸಾಧ್ಯವೇ? ಈ ಜಗತ್ತಿನಲ್ಲಿ 17.6 ಬಿಲಿಯನ್ ಜನರಿದ್ದಾರೆ. ಆದರೆ ದಾದಿಯರ ಸಂಖ್ಯೆ 17.6 ಮಿಲಿಯನ್ ಮಾತ್ರ. ಅನೇಕ ದೇಶಗಳು ದಾದಿಯರ ಕೊರತೆಯನ್ನು ಎದುರಿಸುತ್ತದೆ. ಈ ಕೊರತೆಯನ್ನು ನೀಗಿಸುವ ಬಗೆ ಹೇಗೆ? ಜನರ ಬಗ್ಗೆ ಕಾಳಜಿ ವಹಿಸುವವರು ಯಾರು? ವಿಶೇಷವಾಗಿ ನಿತ್ಯ ರೋಗಿಗಳ ಪಾಡೇನು? ಈ ಪ್ರಶ್ನೆಗಳಿಗೆ ಉತ್ತರ ಸುಲಭವಲ್ಲ.

ನೀವೆಂದಾದರೂ ದಾದಿಯರನ್ನು ಕಂಡಾಗ ಅವರೊಂದಿಗೆ ಒಳ್ಳೆಯ ರೀತಿಯಲ್ಲಿ ಮಾತನಾಡಿ, ಅವರ ಕೆಲಸವನ್ನು ಪ್ರೋತ್ಸಾಹಿಸಿ. ಏಕೆಂದರೆ ಅವರು ನಿಜಕ್ಕೂ ಅದಕ್ಕೆ ಅರ್ಹರಾಗಿದ್ದಾರೆ. ■

ಮಕ್ಕಳರಂಗ

ಸಮೂಹ

ಸ್ನೇಹ ಜೈಲು ಭಾಗ - 7

ಮಾಂಸದ ಕೋಳಿಗಳು

"ಏ ಅಚ್ಚು... ಮಾಂಸದ ಕೋಳಿಗಳು ಮತ್ತು ಕೋಳಿ ಮಾಂಸಕ್ಕೆ ಇರುವ ವ್ಯತ್ಯಾಸವೇನು?" ಪ್ಲೇಕರ್‌ನ ಪ್ರಶ್ನೆಯಿದು. ಯಾವಾಗಲೂ ಅವನ ಪ್ರಶ್ನೆಗಳು ತಿನ್ನುವ ವಿಷಯಕ್ಕೆ ಸಂಬಂಧಿಸಿಯೇ ಇರುತ್ತದೆ. ಅವನಿಗೆ ಈ ಜೈಲಿನಲ್ಲಿ 'ತಿಂಡಿ ಪೋತ' ಎಂಬ ಅಡ್ಡ ಹೆಸರಿದೆ.

ಒಂದು ಆದಿತ್ಯವಾರ ಸ್ನೇಹ ಜೈಲಿನ ವಿದ್ಯಾರ್ಥಿಗಳಿಗೆ ಒಂದು ಕ್ಯಾಂಪನ್ನು ಆಯೋಜಿಸಲಾಗಿತ್ತು. ಬೆಳಿಗ್ಗೆ 8 ಗಂಟೆಗೆ ಆರಂಭವಾಗುತ್ತದೆಂದು ಹೇಳಲಾಗಿತ್ತು. ವಾರ್ಡನ್‌ರ ಬೊಬ್ಬೆ ಮತ್ತು ಸೀಟಿಯ ಶಬ್ದಕ್ಕೆ ಬೇಗನೇ ಎದ್ದು ತಯಾರಾದೆವು. ಅಲ್ಲಿಗೆ ಹೋದ ಮೇಲೆ ಗೊತ್ತಾದದ್ದು ಅಲ್ಲಿರುವುದು ಹಿರಿಯರ ಭಾಷಣ ಕಾರ್ಯಕ್ರಮವೆಂದು. ಆ ವಾರದ ಆಟ ನಷ್ಟವಾಗಿ ಹೋಯಿತು. ಒಬ್ಬರ ಭಾಷಣ ಆರಂಭದಲ್ಲಿ ಅರ್ಧ ಗಂಟೆ ಇತ್ತು. ಇನ್ನೊಬ್ಬರು ಒಂದು ಗಂಟೆ ಮಾತನಾಡಿದರು. ಮಸೀದಿಯಲ್ಲಿ ಏಲಂ ಕರೆಯುವಂತೆ ಇತ್ತು ಅವರ ಶೈಲಿ. ಮಧ್ಯಾಹ್ನದ ಊಟದ ಬೆಲ್ ಬಾರಿಸಿದರೂ ಅವರ ಭಾಷಣ ಮುಂದುವರಿದಾಗ ಪೋಕರಿಗೆ ಹೊಟ್ಟೆ ಚುರುಗುಟ್ಟಲಾರಂಭಿಸಿತು. ಸ್ವಲ್ಪ ಹೊತ್ತು ಕಳೆದ ಬಳಿಕ ಮೂರನೆಯ ವ್ಯಕ್ತಿಯ ಭಾಷಣವೂ ಮುಗಿಯಿತು. ನಾಲ್ಕು ಮತ್ತು ಐದನೆಯ ವ್ಯಕ್ತಿಗಳು ಭಾಷಣ ಮಾಡಲು ಕಾದು ನಿಂತಿರುವಂತೆ ತೋರಿತು. ಸಭೆ ಮುಗಿಸುವ ಮುನ್ನ ಭಾಷಣಕರ್ತ ಪ್ರಶ್ನಿಸಿದರು.

"ಇನ್ನು ಯಾರಿಗಾದರೂ ಸಂಶಯವಿದೆಯೇ?"

ಸಂದರ್ಭಕ್ಕೆ ಕಾದವನಂತೆ ಪೋಕರಿ ಎದ್ದು ನಿಂತ.

"ಸಾರ್... ಈ ಭಾಷಣ ಯಾವಾಗ ಕೊನೆಗೊಳ್ಳುತ್ತದೆ? ಊಟದ ಬೆಲ್ ಆಗ ಹೊಡೆದಿದೆ. ಅದೇ ನನಗೆ ಕೇಳಲಿಕ್ಕಿರುವುದು."

ಸಭೆಯಲ್ಲಿದ್ದವರೆಲ್ಲರೂ ಗೊಳ್ಳೆಂದು ನಕ್ಕರು. ತಿಂಡಿಪೋತ ಪೋಕರ್ ಮಾಡಿದ ಈ ಉಪಕಾರಕ್ಕಾಗಿ ಅವನಿಗೆ ಊಟದ ಸಮಯದಲ್ಲಿ ಮೀನು ಕಾಯಿಸಿದ್ದನ್ನು ಉಡುಗೊರೆಯಾಗಿ ನೀಡಿದ್ದರು.

"ನೀನ್ಯಾಕೆ ಅಚ್ಚು ಬಿರಿಯಾಣಿ ತಿಂದ ಬೊಮ್ಮನಂತೆ ಕುಳಿತು ಕೊಂಡದ್ದು?" "ನಾನು ಪ್ರಶ್ನಿಸಿದ ಪ್ರಶ್ನೆಗೆ ಉತ್ತರವಿದೆಯಾ?" ಪೋಕರ್ ಪ್ರಶ್ನೆಯನ್ನು ಪುನರಾವರ್ತಿಸಿದ.

"ಹ್ಹ..ಹ್ಹ..ಹ್ಹ ನನ್ನ ಪ್ರಶ್ನೆಗೆ ಉತ್ತರಿಸುವಷ್ಟು ಲೋಕಜ್ಞಾನ ನಿನಗಿರಲಿಕ್ಕಿಲ್ಲ. ಅದಕ್ಕೆ ಹೇಳುವುದು ಕೇವಲ ಪುಸ್ತಕ ಓದಿದರೆ ಸಾಲದು. ಲೋಕ ಜ್ಞಾನವೂ ಇರಬೇಕು."

ಪೋಕರ್ ಗೇಲಿ ಮಾಡಿದ. ಅವನೇ ಅವನ ಪ್ರಶ್ನೆಗೆ ಉತ್ತರ ಹೇಳಿದ.

"ಮನುಷ್ಯ ತಿಂದು ಕೊಬ್ಬುವುದು ಕೋಳಿ ಮಾಂಸ. ಮನುಷ್ಯನಿಗೆ ತಿನ್ನಲಿಕ್ಕಾಗಿ ಬೆಳೆಸುವಂತಹದ್ದು ಮಾಂಸದ ಕೋಳಿ. ಈಗ ಅರ್ಥ ಆಯಿತಾ?"

ಉತ್ತರ ಹೇಳಿ ಜೋರಾಗಿ ನಗುತ್ತಾ ಪೋಕರ್ ಕ್ಯಾಂಟೀನ್‌ಗೆ ಹೋದ. ಬೆಳಗ್ಗಿನ ತಿಂಡಿಯೇನಾದರೂ ಉಳಿದಿದೆಯಾ ಎಂದು ನೋಡುವುದಕ್ಕಾಗಿರಬಹುದು.

ಸ್ನೇಹಜೈಲಿನ ಉತ್ತರ ದಿಕ್ಕಿಗೆ ಒಂದು ಮಾಂಸದ ಕೋಳಿಯ ಫಾರ್ಮ್ ಇದೆ. ಪೋಕರ್, ನಾನು ಮತ್ತು ಅಬ್ದುಲ್ ಕಾದರ್ ಸೇರಿ ಒಮ್ಮೊಮ್ಮೆ ಹಾಸ್ಟೆಲಿನ ಕಟ್ಟಡದ ಮೇಲ್ಛಾಗದಲ್ಲಿ ನಿಂತು ಅದನ್ನು ನೋಡುತ್ತಾ ನಿಲ್ಲುತ್ತೇವೆ. ಅಪ್ಪ ಗಲ್ಫ್‌ನಿಂದ ಕಳುಹಿಸಿದ ಬೈನಾಕುಲರ್ ಉಪಯೋಗಿಸಿ ನೋಡುತ್ತೇವೆ.

ಆ ಬಿಳಿಯ ಬಾಲದ ಕೋಳಿ ಇಲ್ಲಿಯವರೆಗೆ ಏಕೆ ಮಾರಾಟ ವಾಗಲಿಲ್ಲ? ಎಷ್ಟು ಸಮಯವಾಯಿತು ಆ ಗೂಡಿನೊಳಗೆ. ಅದಕ್ಕೆ ಬುದ್ಧಿ ಏನಾದರೂ ಇದೆಯಾ?

ಅಬ್ದುಲ್ ಕಾದರ್ ಬೈನಾಕುಲರ್‌ನಿಂದ ನೋಡುತ್ತಾ ಕೇಳಿದ.

ಅಬ್ದುಲ್ ಕಾದರ್ ಹಾಸ್ಟೆಲ್‌ಗೆ ಬಂದು ಸೇರುವಾಗಲೇ ಆ ಬಿಳಿಯ ಬಾಲದ ಕೋಳಿ ಇತ್ತು.

"ಇಲ್ಲಿಯವರೆಗೆ ಯಾರೂ ಅದನ್ನು ಮಾಂಸ ಮಾಡಲಿಲ್ಲ. ಏಕೆಂದರೆ ಅದು ಹೆಚ್ಚು ಆಹಾರ ತಿನ್ನುವುದಿಲ್ಲ. ಬಂದ ಗಿರಾಕಿಗಳಿಗೆ ಅದು ಕಣ್ಣಿಗೆ ಹಿಡಿಸಲಿಲ್ಲ. ಎಲ್ಲರಿಗೂ ಕಚ್ಚಿ ಎಳೆದು, ತಿನ್ನಲು ಮಾಂಸವೇ ಬೇಕಲ್ಲವೇ? ಬೇರೆ ಕೋಳಿಗಳು ಹೆಚ್ಚು ಆಹಾರ ತಿಂದು, ನೀರು ಕುಡಿದು ತೂಕದ ತಟ್ಟೆ ಏರುವುದನ್ನು ನೋಡುತ್ತಾ ಬಿಳಿ ಬಾಲದ ಕೋಳಿ ಜೀವಿಸುತ್ತಿದೆ" ಅಬ್ದುಲ್ ಕಾದರ್ ವಿವರಿಸಿದ.

"ಇವನ್ಯಾರು ಗೊತ್ತಾ? ಇವನು ಕೋಳಿಗಳ ವಾರ್ಡನ್."

"ನೀನು ಸರಿಯಾಗಿ ಹೇಳಿದೆ. ಈ ಸ್ನೇಹಜೈಲ್ ಮತ್ತು ಕೋಳಿ ಫಾರ್ಮ್ ಹತ್ತಿರ ಇರುವುದು ಒಳ್ಳೆಯದಾಯಿತು. ನಮಗಿಬ್ಬರಿಗೂ ಪರಸ್ಪರ ಸಾಂತ್ವನ ಹೇಳುತ್ತಾ, ಸಮಾಧಾನ ಪಡಿಸುತ್ತಾ ಇರಬಹುದಲ್ಲವೇ?" ಅಬ್ದುಲ್ ಕಾದರ್ ಅಳಲಾರಂಭಿಸಿದ.

"ಈ ಮಾಂಸದ ಕೋಳಿಗಳನ್ನು



ಪ್ರಾಮಾಣಿಕತೆ

ರಿಯಾಝ್ ಅಹ್ಮದ್, ರೋಣ

ಒಂದು ಊರಿನಲ್ಲಿ ಓರ್ವ ವ್ಯಕ್ತಿ ಇದ್ದರು. ಅವರು ಬಹಳ ಪ್ರಾಮಾಣಿಕರಾಗಿದ್ದರು. ಒಂದು ದಿನ ಅವರ ಹೆಣ್ಣು ಮಕ್ಕಳಿಬ್ಬರು ಒಂದು ಬಟ್ಟೆಯ ಅಂಗಡಿ ಹೋಗಿ ಅಲ್ಲಿ ಒಂದು ಸ್ವೆಟರ್ ಖರೀದಿ ಮಾಡಿ ಮನೆಗೆ ಹಿಂತಿರುಗಿದರು. ಆಗ ತಂದೆಯು ಮನೆಗೆ ಬಂದಾಗ ಅವರಿಬ್ಬರಲ್ಲಿ ಓರ್ವಳು 'ಅಪ್ಪ, ನೋಡಿ ನಾನು ತೆಗೆದುಕೊಂಡ ಈ ಸ್ವೆಟರ್ ಸ್ವಲ್ಪ ಡ್ಯಾಮೇಜ್ ಆಗಿದೆ. ಅದಕ್ಕೆ ದಯವಿಟ್ಟು ತಾವಿದನ್ನು ತೆಗೆದುಕೊಂಡು ಹೋಗಿ ಅಂಗಡಿಯವನಿಗೆ ಹಿಂತಿರುಗಿಸಿ ಉತ್ತಮವಾದ ಬೇರೆ ಸ್ವೆಟರ್ ತನ್ನಿ ಎಂದು ತಂದೆಯಲ್ಲಿ ವಿನಂತಿಸಿದಾಗ ತಂದೆಯು ತಕ್ಷಣವೇ ಅಂಗಡಿಯವನಲ್ಲಿ ಹೋಗಿ ಸ್ವೆಟರ್ ಕೊಟ್ಟು ಬೇರೆ ಸ್ವೆಟರ್ ಮರಳಿ ಪಡೆದುಕೊಂಡು ಬಂದರು. ಅವರು ಮನೆಗೆ ಹಿಂತಿರುಗಿದಾಗ ಇನ್ನೋರ್ವ ಮಗಳು ಹೇಳಿದಳು; ಅಪ್ಪ, ನನ್ನಿಂದ ತಪ್ಪಾಗಿದೆ. ನಿಜವಾಗಿ ಆ ಸ್ವೆಟರ್ ಮೊದಲು ಸರಿಯಾಗಿಯೇ ಇತ್ತು. ನಾನು ಅವಸರದಿಂದ ಅದನ್ನು ತೆಗೆಯಲು ಹೋಗಿ ಸ್ವಲ್ಪ ಹರಿದು ಹೋಯಿತು. ಆಗ ಅವರ ತಂದೆ ಬೇಸರದಿಂದ ಮಗಳೇ, ನೀನು ನನಗೆ ತಿಳಿಸಿದ್ದು ಒಳ್ಳೆದೇ ಆಯಿತು. ನಿನ್ನಿಂದಾಗಿ ನಾನು ಪಾಪ ಆ ಬಟ್ಟೆ ಅಂಗಡಿಯವನಿಗೆ ತೊಂದರೆ ಕೊಟ್ಟೆ ಎಂದು ಹೇಳುತ್ತಾ, ಪುನಃ ಆ ಸ್ವೆಟರ್ ಅಂಗಡಿಗೆ ತೆಗೆದುಕೊಂಡು ಹೋಗಿ ನೋಡಿ, ದಯವಿಟ್ಟು ನನ್ನನ್ನು ಕ್ಷಮಿಸಿ. ಮೊದಲು ನಿಮ್ಮಲ್ಲಿ ನನ್ನ ಮಗಳು ಖರೀದಿ ಮಾಡಿದಂತಹ ವಸ್ತು ಚೆನ್ನಾಗಿಯೇ ಇತ್ತು. ಅದು ನಮ್ಮ ಅಜಾಗರೂಕತೆಯಿಂದ ಡ್ಯಾಮೇಜ್ ಆಗಿದೆ. ದಯವಿಟ್ಟು ಇದನ್ನು ತೆಗೆದುಕೊಂಡು ನೀವು ಮೊದಲು ಕೊಟ್ಟಂತಹ ಸ್ವೆಟರನ್ನೇ ಹಿಂತಿರುಗಿಸಿ ಎಂದಾಗ ಆ ಅಂಗಡಿ ಮಾಲಕನು ಆಶ್ಚರ್ಯಚಕಿತನಾಗಿ ಅವರತ್ತ ನೋಡಿದನು. ಪುನಃ ಆ ವ್ಯಕ್ತಿಯನ್ನು ನೋಡಿ, ನಮ್ಮ ತಪ್ಪನ್ನು ಬಚ್ಚಿಟ್ಟು ನಾವು ನಿಮಗೆ ಮೋಸ ಮಾಡಬಹುದು. ಆದರೆ ಎಲ್ಲವನ್ನು ನೋಡುತ್ತಿರುವ ಆ ದೇವನನ್ನು ಖಂಡಿತವಾಗಿಯೂ ನಮ್ಮಿಂದ ಮೋಸ ಮಾಡಲಿಕ್ಕೆ ಸಾಧ್ಯವಿಲ್ಲ ಎಂದಾಗ ಅಂಗಡಿ ಮಾಲಕನ ಕಣ್ಣಿನಿಂದ ಆನಂದಭಾಷ್ಪವು ಹರಿಯಿತು. ನನ್ನ ಇಡೀ ಜೀವನದಲ್ಲಿ ನಿಮ್ಮಂತಹ ಪ್ರಾಮಾಣಿಕ ಗ್ರಾಹಕನನ್ನು ನಾನು ಈ ಮೊದಲು ಕಂಡಿಲ್ಲ. ತನ್ನ ಅಂಗಡಿಯ ವರ್ಷದ ಅತ್ಯುತ್ತಮ ಗ್ರಾಹಕ ಎಂದು ಅವರಿಗೆ ಸರ್ಟಿಫಿಕೆಟ್ ಹಾಗೂ ಉಡುಗೊರೆಯನ್ನು ನೀಡಿ ಸನ್ಮಾನಿಸಿದರು.

ನೋಡುವಾಗ ನನಗೆ ನನ್ನ ಸಮೀರಣ್ಣ ನೆನಪಿಗೆ ಬಂದರು."

ಪೋಕರ್ ಇದನ್ನು ಹೇಳಿದಾಗ, ಅಬ್ದುಲ್ ಕಾದರ್ ಅಳು ನಗುವಾಗಿ ಪರಿವರ್ತನೆಯಾಯಿತು. ಸ್ನೇಹಜ್ಯೆಲಿನ ಹತ್ತಿರವಿರುವ ಅಬ್ದುಲ್ಲಾಕನವರ ಮಗನಾಗಿದ್ದ ಈ ಸಮೀರ್. ಕಲಿಯುವುದರಲ್ಲಿ ತುಂಬಾ ಜಾಣ. ಹತ್ತನೇ ತರಗತಿಯಲ್ಲಿ ಪ್ರಥಮ ರ್‍ಯಾಂಕ್ ಸಿಗಬೇಕೆಂದು ಅಬ್ದುಲ್ಲಾಕರ ಆಣೆ. ಪೇಪರಿನಲ್ಲಿ ಹೆಸರು ಬರಬೇಕು. ಅದಕ್ಕೆ ಅವನನ್ನು ಹಾಸ್ಟೆಲಿಗೆ ಸೇರಿಸಿದ್ದರು.

"ಮನೆಯಲ್ಲಿದ್ದರೆ ಮಕ್ಕಳು ಓದುವುದಿಲ್ಲ ಸಾರ್. ಬಟ್ಟೆ ಹೊಲಿದು ಸಿಕ್ಕಿದ ಹಣವನ್ನು ಸಂಗ್ರಹಿಸಿ ನಾನವನ ಫೀಸು ಕಟ್ಟಿದ್ದು. ನೀವು ಅವನ ಮೇಲೆ ಒಳ್ಳೆಯ ರೀತಿಯಲ್ಲಿ ಮೇಲ್ನೋಟ ಇರಿಸಬೇಕು."

ಅಬ್ದುಲ್ಲಾಕ ಯಾವಾಗಲೂ ವಾರ್ಡನ್‌ರಿಗೆ ಉಪದೇಶ ನೀಡುತ್ತಿದ್ದರು. ಯಾವುದಾದರೂ ಪತ್ರಿಕೆಯಲ್ಲಿ ಫಲಿತಾಂಶ ಪ್ರಕಟವಾದದ್ದನ್ನು ಕಂಡರೆ ಅದನ್ನು ಹಾಸ್ಟೆಲ್‌ಗೆ ತಂದು ತೋರಿಸುತ್ತಿದ್ದರು.

"ಅಪ್ಪ–ಅಮ್ಮನನ್ನು ಪ್ರೀತಿಸುವ ಮಕ್ಕಳು ಹೀಗಿರುತ್ತಾರೆ."

ಅಬ್ದುಲ್ಲಾಕರ ಆತ್ಮಾರ್ಥ ಪ್ರೀತಿಯ ಕಾರಣದಿಂದಾಗಿ ನಾವೂ ಸಮೀರ ನಿಗಾಗಿ ಪ್ರಾರ್ಥಿಸಿದೆವು.

"ದೇವನೇ ಅವನಿಗೆ ರ್‍ಯಾಂಕ್ ಸಿಗುವಂತೆ ಮಾಡು. ಅಬ್ದುಲ್ಲಾಕರ ಕಣ್ಣೀರು ಹರಿಸುವಂತೆ ಮಾಡಬೇಡ."

ಕಲಿಯುವುದರಲ್ಲಿ ಜಾಣನಾದರೂ ಪೋಕರ್ ಹೇಳಿದಂತೆ ಅವನಿಗೆ ಸಾಮಾನ್ಯ ಜ್ಞಾನ ಕಡಿಮೆ. ಯಾವಾಗಲೂ ತಲೆ ಕೆಳಗೆ ಹಾಕಿ ನಡೆಯುತ್ತಿದ್ದ. ಯಾರೊಂದಿಗೂ ಮಾತುಕತೆಯಿಲ್ಲ. ಸ್ವಲ್ಪ ಹೊತ್ತು ತೂಕಡಿಸುತ್ತ ಕುಳಿತುಕೊಳ್ಳುತ್ತಿದ್ದ. ನೋಡಿದರೆ ಕೂಪಮಂಡೂಕನಂತೆ ಕಾಣುತ್ತಿತ್ತು. ರಸ್ತೆ ದಾಟಲೂ ಅವನಿಗೆ ಗೊತ್ತಿರಲಿಲ್ಲ. ಶಾಲೆ ಮುಗಿದರೆ ಎಲ್ಲ ದೂರದ ಪ್ರದೇಶದ ಮಕ್ಕಳು ಓಡಿ ಹೋಗಿ ಮನೆ ಸೇರಿಕೊಂಡರೂ, ಶಾಲೆಯ ಬಳಿ ಇರುವ ಅವನ ಮನೆಗೆ ಕರೆದು ಕೊಂಡು ಹೋಗಲು ಅವನ ತಂದೆ ಬರಬೇಕು.

ಆದರೆ ಫಲಿತಾಂಶ ಪ್ರಕಟವಾದರೆ ಸದಾ ಅವನಿಗೇ ಪ್ರಥಮ ರ್‍ಯಾಂಕ್. ತರಗತಿಯಲ್ಲಿ ಶಾಲೆಯಲ್ಲಿ ಮತ್ತು ಹಾಸ್ಟೆಲ್‌ನಲ್ಲಿ ಮೂರು ಸ್ಥಳದಲ್ಲೂ ಅವನೇ ಫಸ್ಟ್.

ಅದನ್ನು ತಿಳಿದ ಕೂಡಲೇ ಅಬ್ದುಲ್ಲಾಕ ಓಡಿ ಬರುತ್ತಾರೆ.

"ಗೊತ್ತಾಯ್ತಾ ಮಾಸ್ಟ್ರೇ... ಅರ್ಧವಾರ್ಷಿಕ ಪರೀಕ್ಷೆಯಲ್ಲೂ ನನ್ನ ಮಗನಿಗೇ ಫಸ್ಟ್ ರ್‍ಯಾಂಕ್." ■

ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು: "ಅಲ್ಲಾಹನನ್ನು ಸ್ಮರಿಸುವವನು ಮತ್ತು ಸ್ಮರಿಸದವನು; ಜೀವಿ ಮತ್ತು ನಿರ್ಜೀವಿಯಂತೆ."

[ಬುಖಾರಿ, ಮುಸ್ಲಿಮ್ – ಅಬೂಹುರೈರಾ(ರ)]

With best compliments from;

SYED AKBAR PASHA

P.W.D. Class I, Contractor

Manvi - 584123, Raichur Dist.

ಹೃದಯದ ಮಾತು

ಕೆಲವು ವರ್ಷಗಳ ಹಿಂದಿನ ಘಟನೆ ಇದು. ಒಂದು ಆಸ್ಪತ್ರೆಯ ವರಾಂಡದಲ್ಲಿ ನಿಂತಿದ್ದ ಹದಿಹರೆಯದ ಯುವತಿಯೋರ್ವಳು ನನ್ನನ್ನೇ ದಿಟ್ಟಿಸುತ್ತಾ ದುರುಗುಟ್ಟಿ ನೋಡುತ್ತಾ ನನ್ನ ಬಳಿಗೆ ಧಾವಿಸಿ ಬಂದವಳೇ ನನ್ನ ಕೈಯಲ್ಲಿದ್ದ ಮಗುವನ್ನು ಬಲವಂತವಾಗಿ ಎಳೆದುಕೊಂಡಳು. ಗಾಬರಿಯಿಂದ ನಾನು ಚೀರಿದೆ. ನರ್ಸ್ ಓರ್ವಳು ಓಡೋಡಿ ಬಂದು ಯುವತಿಯ ಕೈಯಿಂದ ಮಗುವನ್ನು ಸೆಳೆದು ನನಗೆ ಮರಳಿಸುತ್ತಾ "ಕ್ಷಮಿಸಿ ಅವಳು ಮಾನಸಿಕ ರೋಗಿ. ಹದಿನೈದು ವರ್ಷಕ್ಕೆ ಮದುವೆ ಮಾಡಿಸಿದ್ದರು. ಗಂಡನ ಲೈಂಗಿಕ ದೌರ್ಜನ್ಯಕ್ಕೆ ತುತ್ತಾಗಿ ಈ ಸ್ಥಿತಿಗೆ ಬಂದಿದ್ದಾಳೆ. ಗಂಡಸರನ್ನು ನೋಡಿದರೆ ಹೊಡೆಯಲು ಬರ್ತಾಳೆ, ಪುಟ್ಟ ಮಕ್ಕಳನ್ನು ಕಂಡರೆ ತುಂಬಾ ಅಕ್ಕರೆ" ಎಂದರು.

ಬಾಲ್ಯ ವಿವಾಹದ ಒಂದು ದುಃಸ್ಥಿತಿಯ ದೃಶ್ಯ ಇದಾಗಿತ್ತು. ಹೆಣ್ಣು ಮಕ್ಕಳಿಗೆ ಹದಿನೆಂಟು ವರ್ಷ, ಗಂಡಿಗೆ ಇಪ್ಪತ್ತೊಂದು ವರ್ಷ ವಿವಾಹಕ್ಕೆ ಯೋಗ್ಯವಾದದ್ದು ಎಂದು ಕಾನೂನು ತಿಳಿಸುತ್ತದೆ. ಆದ್ದರಿಂದ ಹೆಣ್ಣು ಪ್ರಬುದ್ಧತೆಗೆ ಬಂದಾಗ 'ವಿವಾಹ' ಮಾಡಿಸುವುದು ಒಳ್ಳೆಯದು. ಋತುಸ್ರಾವ ಹೆಣ್ಣಿನ ಪ್ರಬುದ್ಧತೆಗೆ ಮಾನದಂಡವಲ್ಲ. ಇಂದು ಹೆಣ್ಣು ಮಕ್ಕಳು ಶಿಕ್ಷಣಕ್ಕೆ ಮಹತ್ವ ನೀಡುತ್ತಿದ್ದಾರೆ. ಡಿಗ್ರಿ ಮುಗಿಯುವ ಹೊತ್ತಿಗೆ ಕಡಿಮೆಯೆಂದರೂ ಇಪ್ಪತ್ತು ವರ್ಷ ಆಗೇ ಆಗುತ್ತದೆ. ಇತ್ತೀಚೆಗೆ ದೆಹಲಿಯ ಕೋರ್ಟು ಮುಸ್ಲಿಮ್ ಹೆಣ್ಣು ಮಕ್ಕಳಿಗೆ ಹದಿನೈದು ವರ್ಷಕ್ಕೆ ವಿವಾಹ ಮಾಡಿಸಬಹುದೆಂದು ಅನುಮತಿ ನೀಡಿದೆ! ಈ ತೀರ್ಪು ಎಷ್ಟರ ಮಟ್ಟಿಗೆ ನ್ಯಾಯವೋ ತಿಳಿಯದು. ವರದಕ್ಷಿಣಾ ವಿರೋಧಿ ಕಾನೂನನ್ನು ಕೆಲವರು ದುರುಪಯೋಗಿಸಿಕೊಂಡು ಪುರುಷರನ್ನು ಶೋಷಿಸುವಂತೆ ಈ 'ವಿವಾಹ ಪ್ರಾಯ'ದ ಅನುಮತಿ ಹೆಣ್ಣು ಮಕ್ಕಳ ಶೋಷಣೆಗೆ ದಾರಿಯಾಗಲಾರದೇ? ಬಾಲಕಿಯರ ಮೇಲೆ ವಿವಾಹಕ್ಕಾಗಿ ಒತ್ತಡ, ಬೆದರಿಕೆಗಳೂ ಬರುವ ಸಂಭವ ಇರಲಾರದೇ? ಇಸ್ಲಾಮೂ ಕಾನೂನು ಪ್ರಕಾರ ವಿವಾಹದ ಸಮ್ಮತಿಯ ಅಧಿಕಾರ ಹೆಣ್ಣು ಮಕ್ಕಳಿಗೆ ನೀಡಿದೆ. ಹದಿನೈದು, ಹದಿನಾರು ವರ್ಷದ ಹೆಣ್ಣು ಮಗಳ 'ಸಮ್ಮತಿ'ಯನ್ನು ಕೇಳುವ ಗೋಜಿಗೂ ಹೋಗದೇ ಮದುವೆ ಮಾಡಿಸುವ ಸ್ವಾರ್ಥಿ ಹೆತ್ತವರೂ ಇದ್ದಾರೆ. ಕಲಿಕೆಯನ್ನು ಮೊಟಕುಗೊಳಿಸಿ ಮಗಳನ್ನು ವಿವಾಹ ಬಂಧನದಲ್ಲಿ ಸಿಲುಕಿಸುವ ಹೆತ್ತವರಿಗೆ ಈ ಅನುಮತಿ ಅನುಕೂಲ ಒದಗಿಸಿದಂತೆ ಆಗಿದೆ. ಚಿಂತನೆಯ, ಬುದ್ಧಿವಂತ ಹೆತ್ತವರು ಖಂಡಿತಾ ಮಗಳು ಸಂಪೂರ್ಣ ಮಾನಸಿಕ ಪ್ರಬುದ್ಧತೆಗೆ ಬಂದಾಗಲಷ್ಟೇ 'ವಿವಾಹ' ಕುರಿತು ಯೋಚಿಸಬಹುದು.

ಆಸ್ತಿಯಲ್ಲಿ ಮಹಿಳೆಗೆ ಹಕ್ಕು, ವಿವಾಹದ ಸಮ್ಮತಿಯ ಹಕ್ಕು, ವಧುದಕ್ಷಿಣೆಯ ಹಕ್ಕು, ಬದುಕುವ, ಕಲಿಕೆಯ, ದುಡಿಮೆಯ ಎಲ್ಲಾ ಹಕ್ಕು-ಅಧಿಕಾರವನ್ನು ಮಹಿಳೆಯರಿಗೆ ಧರ್ಮ ನೀಡಿರುವಾಗ ಮಹಿಳೆಗೆ ವಾಹನ ಚಲಾಯಿಸಲು ಅನುಮತಿ ಯಾಕಿಲ್ಲ? ಈ ಪ್ರಶ್ನೆ ಭಾರತೀಯ ಮುಸ್ಲಿಮ್ ಮಹಿಳೆಯರದ್ದಲ್ಲ. ಇದು ಸೌದಿ ಅರೇಬಿಯಾದ ಮಹಿಳೆಯರ ಪ್ರಶ್ನೆ. ಮಹಿಳೆಯರು ವಾಹನ ಚಲಾಯಿಸಬಾರದೆಂದು ಆಜ್ಞಾಪಿಸುವ ಒಂದೇ ಒಂದು ರಾಷ್ಟ್ರ ಅದು! ಇದೀಗ ಅಲ್ಲಿಯ ಮಹಿಳೆಯರು ವಾಹನ ಚಲಾಯಿಸುವ ಹಕ್ಕು ಬೇಕೆಂದು ಅಭಿಯಾನ ನಡೆಸುತ್ತಿದ್ದಾರೆ. ಪರ ಪುರುಷನೋರ್ವ ಡ್ರೈವರ್ ಆಗಿ ಚಲಾಯಿಸುವ ವಾಹನದಲ್ಲಿ ಸೌದಿ ಮಹಿಳೆಯರು ಪ್ರಯಾಣಿಸುವುದಕ್ಕಿಂತಲೂ ತಮ್ಮ ಮಕ್ಕಳೊಂದಿಗೆ ವಾಹನವನ್ನು ಮನೆಯ ಒಡತಿಯೇ ಚಲಾಯಿಸುವುದು ಒಳಿತಲ್ಲವೇ? ಚಿಂತಿಸುವುದಾದರೆ ಮಹಿಳೆಯರು ವಾಹನ ಚಲಾಯಿಸಲು ಕಲಿತಾಗ, ಮನೆಯ ಪುರುಷರ ಮೇಲಿರುವ ಅಧಿಕ ಒತ್ತಡಗಳೂ, ತಲೆ ಬಿಸಿಯೂ ಕಡಿಮೆ ಆಗುತ್ತದೆ. ಮನೆಯ ಹಲವು ಜವಾಬ್ದಾರಿಯು ಸರಳವಾಗುತ್ತದೆ. ಮಕ್ಕಳನ್ನು ಸ್ಕೂಲಿಗೆ ಬಿಡುವುದರಿಂದ ತೊಡಗಿ ಮಾರ್ಕೆಟ್, ಶಾಪಿಂಗ್, ಆಸ್ಪತ್ರೆ, ಕಚೇರಿಗಳಿಗೆ ಸದಾ ಪತಿಯನ್ನೇ ಅವಲಂಬಿಸುವ ಮಹಿಳೆಯರಿಗೆ ಕೆಲಸ ಸುಲಭವಾಗುತ್ತದೆ ತಾನೇ. ಮಹಿಳೆಯು ವಾಹನ ಚಲಾಯಿಸುವ ಮೂಲಕ ಡ್ರೈವರ್ ಕೆಲಸವನ್ನೂ ನಿಭಾಯಿಸಬಲ್ಲಳು. ಆರ್ಥಿಕವಾಗಿ ಸಬಲಳಾಗಬಲ್ಲಳು.

ಇಂದು ಇರಾನಿ ಮಹಿಳೆಯರನ್ನು ನಾವು ವೀಕ್ಷಿಸಿದರೆ, ಸಂಪ್ರದಾಯದ ಉಡುಗೆಯೊಂದಿಗೆ, ತಮ್ಮ ಸೀಮಾ ರೇಖೆಯ ಇತಿಮಿತಿಯಲ್ಲಿ ಇರಾನಿ ಮಹಿಳೆಯರು ಮನೆ ಹಾಗೂ ಹೊರ ಕ್ಷೇತ್ರದಲ್ಲಿ ಯಶಸ್ವಿ ಜೀವನ ನಡೆಸುತ್ತಿದ್ದಾರೆ. ವಾಹನ ಚಲಾಯಿಸಲು ಆಧುನಿಕತೆಯ ಮನಃಸ್ಥಿತಿಯೇ ಬೇಕಾಗಿಲ್ಲ. ಇಂದು ಮುಸ್ಲಿಮ್ ಮಹಿಳೆಯರು ಪರ್ದಾದಲ್ಲಿ ವಾಹನ ಚಲಾಯಿಸುವುದನ್ನು ಕಾಣಬಹುದಾಗಿದೆ. 'ಸೌದಿ'ಗೆ ಮಾತ್ರ ಯಾಕಿಷ್ಟು ಸಂಕುಚಿತ ಮನಸ್ಸು!? ಮಹಿಳೆಯರ ಬಗ್ಗೆ ವಿಶಾಲವಾಗಿ ಚಿಂತಿಸುವ ಬುದ್ಧಿಯೇ ಇಲ್ಲದ ಪುರುಷರು ಮಾತ್ರ ಸ್ತ್ರೀಯನ್ನು ಕತ್ತಲಲ್ಲೇ ಇಡಲು ಪ್ರಯತ್ನಿಸುವುದು. ವಿಶ್ವಾಸದ ಕೊರತೆಯೂ ಇದರಲ್ಲಿ ಅಡಗಿರುತ್ತದೆ.

ಮಾಧ್ಯಮಗಳು ಸಮಾಜದ ಹಿತದ ಪರ ಧ್ವನಿ ಎತ್ತುವಾಗ ಕೆಲವು ಸ್ವಾರ್ಥಿಗಳು ಆಕ್ಷೇಪದ ರಾಗ ಹಾಡುತ್ತಾರೆ. ಸ್ಟಾರ್ ಟಿ.ವಿ.ಯು ಭ್ರಷ್ಟಾಚಾರದಲ್ಲಿರುವ ವೈದ್ಯಕೀಯ ರಂಗ, ಪಂಚಾಯಿತಿ ಮುಖಂಡರ ದಬ್ಬಾಳಿಕೆಯ ಚಿತ್ರಣ ನೀಡಿದಾಗ, ಕೆಲವು ಪ್ರತಿಭಟನಾ ಧ್ವನಿಯೂ ಬರುತ್ತಿದೆ. ನಿತ್ಯಾನಂದ ಸ್ವಾಮೀಜಿಯ ಅನೈತಿಕತೆಯನ್ನು ಬಯಲಿಗೆಳೆಯುವ ಮಾಧ್ಯಮದ ಮೇಲೆ ಹಿಂದೂ ಸಂಘಟನೆಯ ಮುಖಂಡ ಆಕ್ಷೇಪದ ಧ್ವನಿ ಎತ್ತಿರುವುದು ಅಚ್ಚರಿ ಮೂಡಿಸುತ್ತದೆ. ಯಾವ ಬೆದರಿಕೆಗೂ ಬಗ್ಗದೇ ಮಾಧ್ಯಮಗಳು ಜನಪರ ನಿಲುವು ವಹಿಸಬೇಕು.

ಕಣ್ಣನ್ ಎ.ಆರ್.
ಸಂಪಾದಕಿ

We create Landmarks with utmost Passion and Practicality....

25 YEARS

INLAND WINDSORS
Airport Road, Maryhill, Mangalore
International Standard Lifestyle Apartments
2BHK : 1360 Sq.ft. | 3BHK : 1755, 1825 & 1950 Sq.ft
3 BHK Duplex : 2720 & 2730 Sq. ft.

INLAND IMPALA
Ullal - Mangalore
2BHK : 1145, 1180, 1210 Sq. ft | 3BHK : 1465, 1515 Sq. ft
& 1345 Sq. ft. with private terrace | & 1915 Sq. ft. with private terrace

INLAND ECHELON
Business Class Designer Apartments
Ballalbagh, Off M.G. Road, Mangalore
3BHK : 1956 Sq. ft. & 2129 Sq. ft.

INLAND ELAN
Matadakani Road, Mangalore
2BHK : 1050 Sq. ft. 3BHK : 1355 Sq. ft.

INLAND EON
Matadakani Road, Gandhinagar, Mangalore
2BHK : 1268 & 1280 Sq. ft. 3 BHK : 1503 Sq. ft.

INLAND ESPANA
Stylish Residential Apartment
Bejai New Road, Mangalore
2BHK : 1160, 1255 & 1345 Sq. ft. 3BHK : 1785 Sq. ft

INLAND SOVEREIGN
Mannagudda, Mangalore
2BHK : 1225 Sq. ft. & 3BHK : 1595 Sq. ft.

INLAND IMAAD
Hegdenagar, Bangalore
2BHK : 1145 & 1175 Sq. ft 3BHK : 1370 & 1390 Sq. ft.

Launching Soon

INLAND ESTORIA	INLAND MAYURA	INLAND ELANZA
Valencia, Mangalore	Puttur	Sahakarnagar, Bangalore

IN-LAND
INPURSUIT OF EXCELLENCE
SINCE 1986

IN-LAND BUILDERS®

INLAND ORNATE, 3rd Floor, Navbharath Circle, Mangalore - 575 003
Ph : +91 824 - 2492180, 2491795, 2496110. Fax : +91 824 - 2496291 Mob : +91 99720 89099 / +91 98801 38015 / +91 99720 14055
E-mail : info@inlandbuilders.net Web : www.inlandbuilders.net

Find us on / inlandinfrastructure

CREDAI MANGALORE / BENGALURU

Bangalore Office : 1st Floor, No. 525, 8th Main, 5th Cross, HMT Layout, R.T. Nagar, Bangalore - 560 032. Telefax : +91 80-23545277. Cell : +91 98801 45145

HIRA WOMEN'S COLLEGE
WOMEN'S ISLAMIC PU COLLEGE

2012 SSLC RESULT 100%

2012 PUC RESULT 96.34%

One of the few institutions in the District equipped with **smart class** Technologies

SALIENT FEATURES

- The first institution of it's kind.
- Completely staffed & administered by women.
- Quality Modern & Value education simultaneously.
- Vast Ideal Campus with peaceful atmosphere.
- Moral Studies in Kannada/English languages.
- Bus facility.
- Campus Masjid for Students.
- Reasonable Fee Structure.
- Admission purely on Merit & First come first serve basis.

University Road, Babbukatte, Permannur, Mangalore, Karnataka.
Ph: 0824-2460331, Email: sethira@rediffmail.com
Women's Islamic P.U.College: T.C.Road, Thokkottu. Ph: 0824-2463223
Website: www.hirainstitutions.org

REGD. NO.KA/SK/MNG/477/2012-14 LICENCED TO POST WPP LICENCE NO. SK/WPP/MNG/97/2012-14

We sell Only
100% BIS Hallmarked Gold
Hallmarked 916 Gold

ಚಿನ್ನ ಸಂರಕ್ಷಣಾ ಯೋಜನೆ

ಗ್ರಾಹಕರೇ,
ಚಿನ್ನದ ಗಣನೀಯ ಬೆಲೆಯಲ್ಲಿ ಸಮಸ್ಯೆಯೇ?
ತಮಗಾಗಿ **ಯೂರೋ ಗೋಲ್ಡ್**
ಮುಂಗಡ ಬುಕ್ಕಿಂಗ್ ಯೋಜನೆಯನ್ನು ರೂಪಿಸಿದೆ.

ಕೇವಲ **40%** ಶೇಕಡಾ ಹಣವನ್ನು ಪಾವತಿಸಿ,
ಚಿನ್ನದ ಬೆಲೆಯನ್ನು ಮುಂಗಡವಾಗಿ ಬುಕ್ ಮಾಡಿಕೊಳ್ಳಿ.
ಚಿನ್ನದ ಬೆಲೆ ಹೆಚ್ಚಿದರೂ ತಾವು ಕಡಿಮೆ ಬೆಲೆಯಲ್ಲೇ
ಚಿನ್ನವನ್ನು ಪಡೆಯಬಹುದು.

ಈ ಯೋಜನೆಯಂತೆ ಚಿನ್ನದ ಅಗತ್ಯತೆಗಳನ್ನು ಪೂರೈಸಲು
ಉತ್ತಮ ಅವಕಾಶವನ್ನು ನೀಡುತ್ತದೆ ಮತ್ತು
ಚಿನ್ನದ ಬೆಲೆಯ ಹೆಚ್ಚಳದಿಂದ ಪಾರಾಗಲು ಸಹಕರಿಸುತ್ತದೆ.

ಆಕರ್ಷಣೀಯ ವಿನ್ಯಾಸ

ವಿಶ್ವಾಸಭರಿತ ಅಪ್ಪಟ ಚಿನ್ನ

ಇಂದೇ ಭೇಟಿ ನೀಡಿರಿ

EURO GOLD
GOLD . DIAMOND . SILVER

ಯೂರೊ ಗೋಲ್ಡ್

ಕಂಕನಾಡಿ, ಮಂಗಳೂರು ಫೋನ್ : 0824-2434916
www.eurobusinessgroup.com